ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೧೪
ವಿಚಾರ ಸಾಹಿತ್ಯಮಾಲೆ – ೩೫
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ಶ್ರೇಷ್ಠ ಚೈತನ್ಯಗಳ ವೈಭವ

## (ಶ್ರೇಣಿ ೨)

**ಭವನದ ಗ್ರಂಥ ವಿಶ್ವವಿದ್ಯಾನಿಲಯ**

ಮಾಲೆಯ
ಮೂಲ ಸಂಪಾದಕರು
**ಕೆ. ಎಂ. ಮುನ್ಷಿ**
**ಆರ್. ಆರ್. ದಿವಾಕರ್**

ವ್ಯವಸ್ಥಾಪಕ ಮಂಡಳಿ
**ಲೀಲಾವತಿ ಮುನ್ಷಿ** – ಅಧ್ಯಕ್ಷೆ
**ಕೆ. ಕೆ. ಬಿರ್ಲಾ** – ಸದಸ್ಯರು
**ಎಸ್. ಜಿ. ನೇವಾತಿಯ** – ಸದಸ್ಯರು
**ಜಿ. ಎಚ್. ದವೆ** – ಸದಸ್ಯರು
**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು
(ಅಧ್ಯಕ್ಷರು, ವಿದ್ಯಾ ಭವನ, ಕರ್ನಾಟಕ)

**ಡಾ. ಮತ್ತೂರು ಕೃಷ್ಣಮೂರ್ತಿ**
(ಕಾರ್ಯಕಾರಿ ನಿರ್ದೇಶಕರು, ವಿದ್ಯಾ ಭವನ, ಬೆಂಗಳೂರು)
**ಎಚ್. ಎನ್. ಸುರೇಶ್**
(ನಿರ್ದೇಶಕರು, ಕಾರ್ಯಕ್ರಮ ಮತ್ತು ಯೋಜನೆಗಳು
ವಿದ್ಯಾ ಭವನ, ಬೆಂಗಳೂರು)
**ಡಾ. ಎ. ವಿ. ನರಸಿಂಹಮೂರ್ತಿ**
(ಅಧ್ಯಕ್ಷರು, ವಿದ್ಯಾ ಭವನ, ಮೈಸೂರು)

# ಶ್ರೇಷ್ಠ ಚೈತನ್ಯಗಳ ವೈಭವ

(ಶ್ರೇಣಿ ೩)

**ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತ:**
**(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)**
**–ಋಗ್ವೇದ, I. ೮೯–೧**

ಮೂಲ
**ವಿವಿಧ ಲೇಖಕರು**

ಅನುವಾದ
**ಶ್ರೀಮತಿ ಗಿರಿಜಾ ಶಾಸ್ತ್ರಿ**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು
ಮತ್ತು
**ಭಾರತೀಯ ವಿದ್ಯಾ ಭವನ,** ಮೈಸೂರು

**Shrestha Chaitanyagala Vaibhava :** Kannada translation of *Pageant of Great Lives* (Series III); Kannada translation by **Smt. Girija Shastry;** Editor-in-Chief: **Dr. Pradhan Gurudatta;** Editor of the series : **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxiv + 84 ; Price: Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೦
ಪುಟಗಳು : xxiv + ೮೪
ಬೆಲೆ : ರೂ. ೧೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ|| ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್‌ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೫-೮-೨೦೦೯
ಸಿಎಂ/ಪಿಎಸ್/೧೪೭/೦೯

## ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು-ಆಯಾಮದ ಅದರ ಚಟುವಟಿಕೆಗಳು ಅರಳಿ ನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ-ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ-ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ-ಸೂಚನೆ-ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ-ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ-ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭಾರತೀಯ ವಿದ್ಯಾಭವನದಂಥ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**



ಕರ್ನಾಟಕ ಸರ್ಕಾರ

**ರಮೇಶ್ ಬಿ.ಝಳಕಿ,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝಳಕಿ)

ಕರ್ನಾಟಕ ಸರ್ಕಾರ

**ಮನು ಬಳಿಗಾರ್**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೯

# ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,



ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತ್ತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯಕ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

(ಮನು ಬಳಿಗಾರ್)

## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ



ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ: ೦೧–೦೯–೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ: ೧೯–೦೮–೨೦೦೯ರ ಬೆಳಗ್ಗೆ ೧೧–೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಈ ಕಟ್ಟಡ–ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

**(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :**

(i) "ಕನ್ನಡ ಸಾಹಿತ್ಯ ಹಿರಿಮೆ–ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

**(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :**

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ. ಎಸ್. ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣಾದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ. ಟಿ. ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ



ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

**(ಇ) ಪ್ರಕಟಣೆಗಳು :**

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ. ಡಿ. ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯ ಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯ ವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯ ನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವತ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ



ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾ ಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುವತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂ.ಗಳ ಸಾಂಕೇತಿಕ ದರವನ್ನೇ ಗೊತ್ತು ಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾಭವನದ ಎಲ್ಲ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರು ಕೇಂದ್ರದ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ. ವಿ. ನರಸಿಂಹಮೂರ್ತಿಯವರ ದಕ್ಷ ಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನೂ ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲ್ಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರೆತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿ ಕೊಟ್ಟಿರುವ ಶ್ರೀಮತಿ ಗಿರಿಜಾಶಾಸ್ತ್ರಿ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀ ಎಚ್.ಎಸ್. ಹರಿಶಂಕರ್ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

# ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ಶ್ರೇಷ್ಠ ಚೈತನ್ಯಗಳ ವೈಭವ' (ಶ್ರೇಣಿ ೩) ಎಂಬ ಪುಸ್ತಕ ಖ್ಯಾತ ಲೇಖಕಿ ಶ್ರೀಮತಿ ಗಿರಿಜಾ ಶಾಸ್ತ್ರಿಯವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಕರ್ನಾಟಕ

**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



# ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

**ಭಾರತೀಯ ವಿದ್ಯಾಭವನ**
ಚೌಪಾಟಿ ರೋಡ್, ಬೊಂಬಾಯಿ–೭
ವಿಜಯದಶಮಿ, ಸೆಪ್ಟೆಂಬರ್ ೨೮, ೧೯೬೩

**ಕೆ. ಎಂ. ಮುನ್ಷಿ**

## ಪ್ರಕಾಶಕರ ಟಿಪ್ಪಣಿ

ತಾವು ಮರಣಿಸಿದ ನಂತರ ಕಾಲದ ಮರಳಿನ ಮೇಲೆ ತಮ್ಮ ಹೆಜ್ಜೆಯ ಗುರುತುಗಳನ್ನು ಬಿಟ್ಟುಹೋಗುವುದು ಪ್ರತಿಯೊಬ್ಬರಿಗೂ ಸಾಧ್ಯವಿಲ್ಲ. ಆದರೆ ಮಹಾತ್ಮರ ಜೀವನಗಳ ಅಧ್ಯಯನವು. ಯಾರಿಗಾದರೂ ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಳ್ಳುವಂತೆ ನೆನಪಾಗಿಸಲು, ನಿಜವಾಗಿಯೂ ಪ್ರಯೋಜನಕಾರಿಯಾಗಿರುತ್ತದೆ. ಮನುಷ್ಯನ ಜೀವನವನ್ನು ರೂಪಿಸಲು ಸಹಾಯಕವಾಗುವ ಪ್ರಭಾವಗಳಲ್ಲಿ ಪ್ರಮುಖವಾಗಿರುವುದು ಸತ್ಸಂಗ. ಎಂದರೆ ತಮ್ಮ ಶ್ರೇಷ್ಠತೆಯಲ್ಲಿ ಉತ್ತಮರೂ ಮತ್ತು ಉಪಕಾರಿಗಳೂ ಆಗಿರುವ ಮಹಾ ಪುರುಷರೊಡನೆ ಮಾನಸಿಕ ಸಂಬಂಧ. ಅವರ ಸಮಕಾಲೀನರೆಲ್ಲರೂ ಅಂಥ ಗಣ್ಯಪುರುಷರೊಂದಿಗೆ ಸ್ವಂತ ಸಂಬಂಧಗಳನ್ನು ಇಟ್ಟುಕೊಂಡಂಥ ಅದೃಷ್ಟವಂತರಾಗಿರುವಾಗ, ಭವಿಷ್ಯದ ಪೀಳಿಗೆಯವರೂ ಅವರ ಬಗ್ಗೆ ಏನನ್ನು ಹೇಳಲಾಗಿದೆಯೋ ಮತ್ತು ಅವರು ತಾವಾಗಿ ಏನನ್ನು ತಿಳಿಸಿದ್ದಾರೆಯೋ, ಅದನ್ನು ಓದಿಕೊಂಡು ತೃಪ್ತರಾಗಬೇಕು.

ಶತಮಾನಗಳಿಂದಲೂ, ಪ್ರಪಂಚದೆಲ್ಲೆಡೆಯಲ್ಲಿಯೂ ಅಂಥ ಮಹಾಪುರುಷರು ಎಂದಿಗೂ ಕಡಿಮೆ ಇರಲೇ ಇಲ್ಲ. ಅವರು ದಿವ್ಯತ್ವದ ಒಂದು ಭವ್ಯ ದೃಶ್ಯ ಹಾಗೂ ಸತ್ಯ, ಶೇಯಸ್ಸು ಮತ್ತು ಆಕರ್ಷಣೆಗಳ ಒಂದು ಮೆರವಣಿಗೆ. ನೈತಿಕ ಮತ್ತು ಆಧ್ಯಾತ್ಮಿಕ ಅಸಮತೋಲನದಿಂದ, ವಿಶ್ವದಲ್ಲಿ ಏರುಪೇರು ಆದಾಗ, ಭಗವಂತನು ಅವತರಿಸುತ್ತೇನೆಂದು ಭಾಷೆಯನ್ನಿತ್ತಿದ್ದರಿಂದ, ತಮ್ಮ ತಮ್ಮ ಕಾಲದಲ್ಲಿ ಪರಿಸ್ಥಿತಿಗಳಿಗನುಸಾರವಾಗಿ, ತಮಗೆ ಹೊಂದಿದ ರೀತಿಯಲ್ಲಿ ಅವರೆಲ್ಲರೂ ಹುಟ್ಟಿ ಬಂದು, ಜನರಿಗೆ ಸಾಂತ್ವದ ನೀಡಲು ಉಪದೇಶಿಸಲು, ಎಚ್ಚರಿಸಲು ಮತ್ತು ಮಾರ್ಗದರ್ಶನ ನೀಡಲು ಬಂದರು.

ಭವನದ ನಿಯತಕಾಲಿಕೆಯಲ್ಲಿ (ಭವನ್ಸ್ ಜರ್ನಲ್) ಮಾನವತೆಯ ಇಂಥ ಶಾಶ್ವತ, ಅಮರ ಆಪದ್ಬಾಂಧವರ ಜೀವನಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಗಳನ್ನು ಕ್ರಮಬದ್ಧವಾಗಿ ಧಾರಾವಾಹಿಯಾಗಿ ಪ್ರಕಟಿಸಲಾಗಿತ್ತು. ಅವುಗಳನ್ನೇ ಇದರಲ್ಲಿ ಮತ್ತು ಇದರೊಂದಿಗಿನ ಸಂಪುಟಗಳಲ್ಲಿ ಒಟ್ಟಿಗೆ ಸೇರಿಸಲಾಗಿದೆ. ಈ ವೈಭವದ ಮೆರವಣಿಗೆಯು ಜಾರತುಷ್ಟ್ರರಿಂದ ಆರಂಭವಾಗಿ, ದೀರ್ಘಾವಧಿ ಪ್ರಯಾಣಮಾಡಿ, ಕೊನೆಗೆ ಸರೋಜನಿ ನಾಯ್ಡು ಅವರಿಂದ ಕೊನೆಗೊಳ್ಳುತ್ತದೆ.

ವಿಶ್ವದ ಈ ಶ್ರೇಷ್ಠ ಪ್ರತಿಷ್ಠಿತ ವ್ಯಕ್ತಿಗಳ ಖ್ಯಾತಿವಂತ ಸಮೂಹದ ಮಂಡಲಿಗೆ ಬಂದು, ಅವರು ತಮ್ಮಲ್ಲಿ ಸಂಕೇತಿಸಿರುವ ಉನ್ನತ ಭಾವನೆಗಳು ಮತ್ತು ಉಚ್ಚತಮ ಸಾಹಸಗಳ ಭವ್ಯ ಆನುವಂಶಿಕ ಪ್ರಾಪ್ತಿ ಪಡೆಯಲು ಓದುಗನಿಗೆ ಆಹ್ವಾನವಿದೆ.



## ಪರಿವಿಡಿ


| | |
|---|---|
| ಮೊದಲ ಮಾತು | v |
| ಶುಭಾಕಾಂಕ್ಷೆ | vi |
| ಪ್ರಾಸ್ತಾವಿಕ ನುಡಿ | viii |
| ಪೀಠಿಕೆ | x |
| ಅರಿಕೆ | xvi |
| ಮೂಲ ಸಂಪಾದಕರ ಪ್ರಸ್ತಾವನೆ | xvii |
| ಪ್ರಕಾಶಕರ ಟಿಪ್ಪಣಿ | xviii |
| ೧. ಶ್ರೀ ರಾಮಕೃಷ್ಣರು – ಪ್ರೊ. ಪಿ. ಶಂಕರನಾರಾಯಣನ್ | ೧ |
| ೨. ಸ್ವಾಮಿ ವಿವೇಕಾನಂದರು – ಡಾ. ಎ.ಡಿ. ಪುಸಾಲ್ಕರ್ | ೧೩ |
| ೩. ಸ್ವಾಮಿ ರಾಮತೀರ್ಥರು – ಪ್ರೊ. ಎಸ್. ಆರ್. ಶರ್ಮ | ೩೨ |
| ೪. ದಾದಾಭಾಯಿ ನವರೋಜಿ – ಪ್ರೊ. ಎ. ಆರ್. ವಾಡಿಯ | ೪೨ |
| ೫. ಡಾ. ಆನಿ ಬೆಸೆಂಟ್ – ಪ್ರೊ. ಆರ್. ಶ್ರೀನಿವಾಸನ್ | ೫೧ |
| ೬. ಶ್ರೀ ಅರವಿಂದರು – ಶ್ರೀ ಋಷಭ್‌ಚಂದ್ | ೬೧ |
| ೭. ಸರೋಜಿನಿನಾಯ್ಡು – ಶ್ರೀ ಜಿ. ಕೆ. ರಾವ್ | ೭೯ |

**Blank Page**



# ಶ್ರೇಷ್ಠ ಚೈತನ್ಯಗಳ ವೈಭವ

(ಶ್ರೇಣಿ ೩)

# ೧. ಶ್ರೀ ರಾಮಕೃಷ್ಣರು

ಭಾರತದ ಆಧ್ಯಾತ್ಮಿಕ ಚರಿತ್ರೆಯ ಪ್ರವಚನಗಳ ಸರಣಿಯಲ್ಲಿ, ಭಾರತದ ಅಸಾಧಾರಣ ಪ್ರತಿಭೆಗೆ ಸಂಬಂಧಿಸಿದ ಸಾಮರಸ್ಯಕ್ಕನುಗುಣವಾಗಿ, ಮತಗಳು ಅನೇಕವಿದ್ದರೂ, ಆ ಮತ ಒಂದೇ ಎಂಬುದನ್ನು ಬಾರಿ ಬಾರಿಗೂ ಎತ್ತಿಹಿಡಿಯಲಾಗಿದೆ. ಈ ಸತ್ಯವನ್ನು ತಮ್ಮ ಸ್ವಂತ ಅನುಭವಗಳಿಂದ ಪರೀಕ್ಷಿಸಿನೋಡಿ ಸಮರ್ಥಿಸಲು, ಅದನ್ನು ಮಾನವರ ಹೃದಯ ಮತ್ತು ಮನಸ್ಸುಗಳಲ್ಲಿ ಸ್ಥಿರವಾಗಿ ದೃಢಪಡಿಸಲು, ಮತಕ್ಕೆ ಸಂಬಂಧಿಸಿದ ಜಗಳಗಳ ಹಾಗೂ ತಾತ್ವಿಕ ಸಿದ್ಧಾಂತದ ವಾಗ್ವಾದಗಳು ಮುಂತಾದವನ್ನು ಸ್ಥಗಿತಗೊಳಿಸಲು, ಪ್ರತಿಯೊಂದು ಮತ ಮತ್ತು ಜಾತಿಯ ಅನುಯಾಯಿಗಳನ್ನು ಅವರದೇ ಆದ ಸ್ವಂತದ ನಂಬಿಕೆಯಲ್ಲಿ ಸ್ಥಿರೀಕರಿಸಲು ಇತ್ಯಾದಿ ತಾವಾಗಿ ಆಯ್ಕೆಮಾಡಿಕೊಂಡ ಸಂಕಲ್ಪಗಳನ್ನು ಪೂರೈಸಲು, ಶ್ರೀ ರಾಮಕೃಷ್ಣರು ಎಂಬ ಅವತಾರವು ಈ ಪ್ರಪಂಚಕ್ಕೆ ಚಿತ್ತೈಸಿತು.

ಕಾಲಗತಿಯ ಆವಶ್ಯಕತೆಗಳ ಕರೆಗನುಗುಣವಾಗಿ, ಅವರು ಈ ಧರೆಗೆ ಇಳಿದಿದ್ದರು. ಹಿಂದೂಮತದ ಪರಿಪೂರ್ಣತೆಗೆ ಅಗತ್ಯವಾದ ಸ್ವಭಾವಗಳು, ವಿರೋಧ ಧಾರ್ಮಿಕ ತತ್ವಗಳ ಪಂಥದವರಿಂದ ಆಸ್ಫೋಟಿಸಲ್ಪಟ್ಟಿದ್ದವು. ಆರ್ಯ ಸಮಾಜವು ರೂಢಿಗತ ಧಾರ್ಮಿಕ ಸಂಸ್ಕಾರಗಳ ಮೌಲ್ಯವನ್ನು ಖಂಡಿಸಿ, ವೇದಗಳಿಗೆ ತನ್ನ ಸ್ವಂತದ ವ್ಯಾಖ್ಯಾವನ್ನೇ ನೀಡಿಕೊಂಡು ಸಮರ್ಥಿಸತೊಡಗಿತ್ತು. ಬ್ರಹ್ಮಸಮಾಜವು, ಹಿಂದೂಧರ್ಮ ಸಾಕಷ್ಟು ನವಕಾಲೀನವಾಗಿಲ್ಲವೆಂದುಕೊಂಡು, ಅದನ್ನು ವಿಲಕ್ಷಣಗುಣದ ಅಂಗಗಳಿಂದ ಆದರಣೀಯವಾಗಿ, ಸಾಮಾನ್ಯವಾಗಿ ತೋರುವಂತೆ ಮಾಡಲು, ಪ್ರಯತ್ನಿಸಿತು. ಭಾರತದ ಯುವಕರು, ಮತ್ತು ವಿಶೇಷವಾಗಿ ಬಂಗಾಲೀ ಯುವಕರು, ಜೀವನದ ಭಾವನೆ ಹಾಗೂ ವರ್ತನೆಗಳ ಪಾಶ್ಚಾತ್ಯ ರೀತಿಯ ಬಾಗುಗಳಿಂದ ಮರುಳಾಗಿ, ತಮ್ಮ ಸ್ವಂತದ ಅನುವಂಶಿಕತೆಗೆ ಅಪರಿಚಿತರಾಗತೊಡಗಿದರು. ಹೀಗೆ ಎಲ್ಲಾ ರೀತಿಗಳಿಂದಲೂ, ಹಿಂದೂಧರ್ಮದ ಶಕ್ತಿ ಮತ್ತು ಸತ್ವಗಳ ಗ್ಲಾನಿಯು ಗಾಬರಿಯನ್ನು ಉಂಟುಮಾಡಿಸಿತು. ಜನರು ಅದರ ವಿಶ್ವೈಕ್ಯವಾದದ ಬಗ್ಗೆ ವಿಸ್ಮೃತಿ ಹೊಂದಿದವರಾಗಿ, ತಮ್ಮನ್ನು ತಾವು ಆಂಶಿಕ ಹಾಗೂ ಭಿನ್ನವಾದುದಕ್ಕೇ ರೂಢಿಮಾಡಿಕೊಳ್ಳತೊಡಗಿದರು.

ಅದೊಂದು ಅನಿರೀಕ್ಷಿತವಾದ ತಾಳೆ ಆಗಿರದೆ, ಶ್ರೀರಾಮನ ಭಕ್ತರೂ, ಶ್ರದ್ಧಾಭಕ್ತಿ

ಸಂಪನ್ನರೂ ಆಗಿದ್ದ ಚಟ್ಟೋಪಾಧ್ಯಾಯರಿಗೆ, ಗಯೆಯಲ್ಲಿ, “ಪ್ರಪಂಚದ ಮುಕ್ತಿಗಾಗಿ ನಾನು ಭೂಲೋಕದಲ್ಲಿ ಜನ್ಮ ತಾಳುತ್ತಿದ್ದೇನೆ" ಎಂದು ಹೇಳಿದ ವಿಷ್ಣುವಿನ ಧ್ವನಿ ಕೇಳಿಸಿದಾಗಲೇ ಕಮರ್‌ಪುಕೂರ್ ಎಂಬ ಅವರ ದೂರದ ಕೊಪ್ಪಲಿನಲ್ಲಿ ಅವರ ಹೆಂಡತಿ ಚಂದ್ರಾಮಣಿದೇವಿಯು, ತನ್ನಲ್ಲಿ ಭಗವಂತನು ಹೊಕ್ಕಂತೆ ಕನಸು ಕಂಡಳು. ಅವಳು ನಂತರ ಗುಡಿಯಲ್ಲಿ ಶಿವನನ್ನು ಪೂಜಿಸುತ್ತಿದ್ದಾಗ, ಆ ಲಿಂಗದಿಂದ ಹೊರಟ ಒಂದು ದೀಪದ ರಶ್ಮಿಯು, ಅವಳ ದೇಹವನ್ನು ಹೊಕ್ಕಂತಾಯಿತು. ಹೀಗೆ ಅವಳ ಗರ್ಭವನ್ನು ಪ್ರವೇಶಿಸಿದ ಇಬ್ಬಗೆಯ ದೇವರು, ೧೮೩೬ನೆಯ ಇಸವಿಯ ಫೆಬ್ರವರಿ ತಿಂಗಳ ಹದಿನೆಂಟರಂದು ಪ್ರಪಂಚಕ್ಕೆ ಆಗಮಿಸಿದನು.

ಅಂಥ ದಿವ್ಯ ಮೂಲದ ಹಾಗೂ ಶ್ರದ್ಧಾಭಕ್ತಿಯುಕ್ತ ವಂಶಾವಳಿಯ ಚೇತನವು, ತನ್ನ ಭೌತಿಕ ಪರಿಮಿತಿಯಲ್ಲಿ ಬಹಳ ಕಾಲದವರೆಗೆ ನಿಷ್ಕ್ರಿಯವಾಗಿರಲಾರದೆ ಹೋಯಿತು. ಗಂಗಾಧರನಿಗೆ – ಅದು ಆ ಹೊಸ ಮಗುವಿನ ಹೆಸರು – ಕೇವಲ ಆರು ವರ್ಷಗಳಾಗಿದ್ದಾಗಲೇ, ಕರಿಮೋಡಗಳಿಂದ ಆವೃತವಾಗಿದ್ದ ಹಿನ್ನೆಲೆಯಿದ್ದ ಆಕಾಶದಲ್ಲಿ, ಎತ್ತರದಲ್ಲಿ ಹಾರುತ್ತಿದ್ದ ಹಿಮಶ್ವೇತ ಕೊಕ್ಕರೆಗಳ ದೃಶ್ಯವು ಅವನನ್ನು ಪಾರಲೌಕಿಕ ಆನಂದದಿಂದ ಪರವಶನನ್ನಾಗಿಸಿದಾಗ, ಅವನು ತನ್ನನ್ನೇ ಮರೆತು, ಆ ಆನಂದದಲ್ಲಿ ಬಹಳ ಹೊತ್ತಿನವರೆಗೆ ಇದ್ದನು.

ಕೆಲವು ತಿಂಗಳುಗಳ ನಂತರ, ಒಂದು ನಾಟಕೋತ್ಸವ ಕಾರ್ಯಕ್ರಮದಲ್ಲಿ ಅವನು ಶಿವನ ಪಾತ್ರವನ್ನು ವಹಿಸಿದಾಗ, ತನ್ನ ಯಥಾವತ್ತಾದ ರೂಪದಲ್ಲಿಯೇ ಅವನು ಪರಮಾನಂದದಲ್ಲಿ ಮುಳುಗಿ, ಇಹಲೋಕವನ್ನೇ ಮರೆತನು. ಹೀಗೆ ಅವರ ಬಾಲ್ಯದ ವರ್ಷಗಳು, ಮುಂದೆ ಸಮಾಧಿಯ ದೀರ್ಘ ದಿಗ್ಬಂಧನಗಳ ಅಮೂಲ್ಯವಾದ ಫಸಲಾಗಿ, ಫಲದಾಯಕವಾಗಬೇಕಿದ್ದ ಬೀಜರಕ್ಷಣ ಕ್ಷೇತ್ರಗಳಾಗಿದ್ದವು. ಅವುಗಳೊಳಗೆ ಕಿಂಚಿತ್ತೂ ಪ್ರಯಾಸಪಡದೆ, ಅವರು ಅತ್ಯಂತ ಸ್ವಾಭಾವಿಕವಾಗಿ ಹಾಗೂ ಅತ್ಯಂತ ಸುಲಭವಾಗಿ, ಲೇಶಮಾತ್ರದ ಉದ್ದೀಪನದೊಂದಿಗೆ, ಐಕ್ಯವಾಗುತ್ತಿದ್ದರು.

ಶ್ರೀ ರಾಮಕೃಷ್ಣರು, (ನಂತರದ ವರ್ಷ ಅವರಿಗೆ ಆ ಹೆಸರು ಬಂತು) ದಕ್ಷಿಣೇಶ್ವರದಲ್ಲಿ ರಾಣಿ ರಾಸಮಣಿಯವರು ನಿರ್ಮಿಸಿದ್ದ ಕಾಳಿಯ ಗುಡಿಯಲ್ಲಿ ಪೂಜಾರಿಯಾಗಿ ತಮ್ಮ ಸಹೋದರನ ಜಾಗಕ್ಕೆ ಬಂದಾಗ, ಪ್ರತಿಯೊಂದೂ ತಾನಾಗಿ ಪೂರ್ವನಿಶ್ಚಿತ ಮಾದರಿಯಲ್ಲಿ ಹೊಂದಿಕೊಂಡಿತು. ಆಗ ಅವರು ಅರ್ಧಪಾಂಡಿತ್ಯದ ಪೂಜಾರಿಯಿಂದ, ಪೂರ್ಣವಿಕಸಿತ ಸಂನ್ಯಾಸಿಯಾಗಿ ಮಾರ್ಪಾಡಾಗಲು ಬೇಕಿದ್ದ ರೀತಿಯ ವಿನ್ಯಾಸವನ್ನು ಪಡೆಯುತ್ತಿರುವಂತೆ ಕಂಡುಬಂದಿತು.

“ಕರ್ಮಕಾಂಡಕ್ಕೆ ಸಂಬಂಧಿಸಿದ ಪೂಜಾ ವಿಧಾನವನ್ನು ಶ್ರದ್ಧೆ ಮತ್ತು ಅಮಿತ ಉತ್ಸಾಹಗಳಿಂದ, ಸಂಪ್ರದಾಯಬದ್ಧವಾಗಿ, ಆಚರಿಸಿಕೊಂಡು ಬಂದರೆ, ಅದು



ತೀವ್ರ ಭಕ್ತಿ ಮತ್ತು ದೃಢ ಸಂಕಲ್ಪದ ಹಂಬಲವಾಗಿ ಫಲಿಸುತ್ತದೆ," ಎಂಬುದು, ತಡೆಯಲಾಗದಂಥ ರೀತಿಯಲ್ಲಿ ಶ್ರೀ ರಾಮಕೃಷ್ಣರು, ದಿವ್ಯ ಮಾತೆಯ ಬಳಿಗೆ ಸೆಳೆಯಲ್ಪಟ್ಟ ವಿಧಾನಗಳಿಂದ ವಿಶದಗೊಂಡಿದೆ. ಶ್ರೀ ರಾಮಕೃಷ್ಣರ ದೇಹವನ್ನು ಮತ್ತು ಆತ್ಮವನ್ನು ಸುತ್ತುಗಟ್ಟಿ, ಮಾತೆಯಿಂದ ತಾವು ದೈಹಿಕವಾಗಿ ಅಥವಾ ಮಾನಸಿಕವಾಗಿ ಬೇರೆ ಎಂಬುದನ್ನು ಚಿಂತಿಸಲೂ ಅವರಿಗೆ ಅವಕಾಶವಿಲ್ಲದಂತೆ ಮಾಡಿದ್ದಳು, ಮಾತೆ. ಅವರು ಆಕೆಯನ್ನು ಹೊಂದಲು ಮತ್ತು ಆಕೆಗೇ ಹೊಂದಿಕೊಂಡಿರುವಂತಾಗಲು, ಆಗಿಂದಾಗ್ಯೆ, ಅಡಿಗಡಿಗೆ ಬರುವ ಉತ್ಕಟವಾದ ಹಾರೈಕೆಗಳ ಸನ್ನಿಗೆ (ತೀವ್ರ ಜ್ವರದಿಂದ ಅಸಂಬದ್ಧವಾಗಿ ಮಾತನಾಡುವಿಕೆ) ತುತ್ತಾಗುತ್ತಿದ್ದರು ಮತ್ತು ತಮಗೆ ಆಕೆ ದರ್ಶನವನ್ನು ನೀಡಬೇಕೆಂಬ ಉತ್ಕಟ ಬೇಗುದಿಯಿಂದ ಆಗಾಗ ಅಳುತ್ತಿದ್ದರು.

ಒಂದು ದಿನ, ಅವರಿಗೇ ಹಿಡಿತವಿಲ್ಲದಿದ್ದಂಥ ಅಂತಃಪ್ರೇರಣೆಗೆ ಒಳಗಾಗಿ, ಅವರು ಮಾತೆಯ ಸಾಕಾರರೂಪದ ದರ್ಶನಕ್ಕಾಗಿ ಥಟ್ಟನೆ ನುಗ್ಗಿದರು. ಒಂದೇ ಕ್ಷಣದ ತಡೆಯಲಾಗದ ಉದ್ರೇಕದಿಂದ, ಹೃದಯವನ್ನೇ ಒದ್ದೆ ಬಟ್ಟೆಯಂತೆ ಯಾರೋ ಹಿಂಡುತ್ತಿರುವಂಥ ನೋವನ್ನು ಅನುಭವಿಸುತ್ತಾ, ಅವರು, ಮಾತೆಯ ವಿಗ್ರಹ ಎತ್ತಿ ಹಿಡಿದಿದ್ದ ಕೈಯಲ್ಲಿನ ಕತ್ತಿಯನ್ನು ಕಿತ್ತುಕೊಂಡು, ಅದನ್ನು ತಮ್ಮ ಎದೆಗೆ ಒತ್ತಿ ಹಿಡಿದುಕೊಂಡರು. ಆಗ ಏನಾಯಿತೆಂಬುದನ್ನು ಅವರ ಸ್ವಂತ ಪದಗಳಲ್ಲೇ ತಿಳಿಯೋಣ... “ಓ. ಇಡೀ ಚಿತ್ರ, ಅದರ ಬಾಗಿಲುಗಳು, ಕಿಟಕಿಗಳು ಮತ್ತು ದೇವಸ್ಥಾನದೊಂದಿಗೆ ಮಾಯವಾಯಿತು. ಏನೂ ಇಲ್ಲವೇ ಇಲ್ಲ ಎಂಬಂತಾಯಿತು. ಬದಲಿಗೆ ನನ್ನ ಕಣ್ಣಿಗೆ, ಮಿತಿಯಿಲ್ಲದ, ಹೊಳೆಯುತ್ತಿದ್ದ ಚೈತನ್ಯದ ಸಾಗರವೇ ಕಾಣಿಸಿತು. ನಾನು ಎತ್ತೆತ್ತ ತಿರುಗಿದರೂ, ಅಲ್ಲೆಲ್ಲಾ ಎತ್ತರದ ದೇದೀಪ್ಯಮಾನ ಅಲೆಗಳು ಏಳುತ್ತಿದ್ದವು. ಅವೋ ಗಟ್ಟಿಯಾಗಿ ಆರ್ಭಟಿಸುತ್ತಾ ನನ್ನನ್ನೇ ನುಂಗಿಹಾಕುವಂತೆ, ನನ್ನ ಮೇಲೆ ಎರಗಿದವು. ಮರುಕ್ಷಣದಲ್ಲೇ ನನ್ನ ಮೇಲಿದ್ದವು. ನನ್ನನ್ನು ಮುಳುಗಿಸಿ ಸುತ್ತುವರಿದವು. ನನಗೆ ಉಸಿರು ಕಟ್ಟಿತು. ನಾನು ನನ್ನ ಸ್ವಂತದ ಪ್ರಾಕೃತಿಕ ಅರಿವನ್ನೂ ಕಳೆದುಕೊಂಡು ಕೆಳಕ್ಕೆ ಬಿದ್ದೆ. ಆ ದಿನ ಮತ್ತು ಮರುದಿನಗಳು ಹೇಗೆ ಕಳೆದವೋ ನನಗೇ ಗೊತ್ತಿಲ್ಲ. ನನ್ನ ಸುತ್ತಲೂ ವರ್ಣನಾತೀತ ಆನಂದ ಸಾಗರವು ಸುತ್ತುತ್ತಿತ್ತು. ನನ್ನ ಅಂತರಾಳದಲ್ಲಿ ದಿವ್ಯಮಾತೆಯ ಸಾನ್ನಿಧ್ಯದ ಅರಿವಿತ್ತು”...

ಆ ಕ್ಷಣದಿಂದ, ಕಾಳಿಯು, ದೇವಸ್ಥಾನದ ಗರ್ಭಗುಡಿಯಲ್ಲಿನ ವೇದಿಕೆಯ ಮೇಲೆ ಸ್ಥಾಪಿಸಲ್ಪಟ್ಟಿರುವ ಕಲ್ಲಿನ ವಿಗ್ರಹ ಮಾತ್ರವಾಗಿರದೆ, ಜೀವಂತ ದೇವಿಯೇ ಆಗಿದ್ದಳು. ಅವಳೊಂದಿಗೆ ಶ್ರೀ ರಾಮಕೃಷ್ಣರು ಅತ್ಯಂತ ಕೋಮಲವಾದ ಹಾಗೂ ಆತ್ಮೀಯವಾದ ಸಂಬಂಧಗಳನ್ನು ಇಟ್ಟುಕೊಂಡಂತೆ ವರ್ತಿಸುತ್ತಿದ್ದರು ಮತ್ತು ಹಗಲು–ರಾತ್ರಿಗಳೆರಡನ್ನೂ ಅವಳ ನಿರಂತರ ಉಪಸ್ಥಿತಿಯಲ್ಲೇ ಕಳೆಯುತ್ತಿದ್ದರು.

ಅವರ ಜೀವನ ಚರಿತ್ರೆ ಬರೆದ ಚರಿತ್ರಕಾರರು, "ಒಂದು ಸಂಜೆ, ಅವರ ದಿನನಿತ್ಯದ ಕರ್ಮಗಳನ್ನೆಲ್ಲಾ ಪೂರೈಸಿತ್ತು. ಮಾತೆ 'ನಿದ್ರಿಸಬೇಕಾಗಿದ್ದಾಗ, ಶ್ರೀ ರಾಮಕೃಷ್ಣರು ಗಂಗಾತೀರದ ಗುಡಿಯಾಚೆ ಇದ್ದ ತಮ್ಮ ಕೊಠಡಿಗೆ ಹಿಂದಿರುಗಿದ್ದರು. ಆದರೆ ಅವರಿಗೆ ನಿದ್ದೆ ಹತ್ತಲಿಲ್ಲ. 'ಮಾತೆ' ಎದ್ದಂತಾದ ಶಬ್ದ ಕೇಳಿಸಿತು. ಅವಳೋ, ಗುಡಿಯ ಮಹಡಿಯ ಮೇಲಕ್ಕೆ, ಚಿಕ್ಕ ಹುಡುಗಿಯಂತೆ ಆನಂದಪಡುತ್ತಾ ಮೇಲೆ ಹೋದಳು. ಅವಳು ನಡೆಯುತ್ತಿದ್ದಾಗ, ಅವಳ ಕಾಲಿನ ಗೆಜ್ಜೆಯ ಪುಟ್ಟ ಗಂಟೆಗಳು ನುಲಿದವು. ರಾಮಕೃಷ್ಣರಿಗೆ, ತಾವು ಕನಸುಕಾಣುತ್ತಿರಬಹುದೇ ಎನ್ನಿಸಿತು. ಅವರ ಎದೆಯಲ್ಲಿ ಹೃದಯದ ಬಡಿತ ಜೋರಾಯಿತು. ಅವರು ಹೊರಗಿನ ಅಂಗಳಕ್ಕೆ ಹೋಗಿ ತಲೆ ಎತ್ತಿ ನೋಡಿದರು. ಅಲ್ಲಿ ಆಕೆ, ತನ್ನ ನೀಳವಾದ ಕೂದಲುಗಳನ್ನು ಹರಡಿಕೊಂಡು, ಮೊದಲನೆಯ ಮಹಡಿಯ ಮೊಗಸಾಲೆಯಲ್ಲಿ ನಿಂತು, ಆ ಸುಂದರ ರಾತ್ರಿಯಲ್ಲಿ ಕಲ್ಕತ್ತಾದ ದೂರದ ದೀಪಗಳವರೆಗೂ ಹರಿದು ಹೋಗುತ್ತಿದ್ದ ಗಂಗೆಯನ್ನೇ ನೋಡುತ್ತಾ ನಿಂತಿದ್ದನ್ನು ಶ್ರೀ ರಾಮಕೃಷ್ಣರು ಕಂಡರು", ಎಂದು ಹೇಳಿದ್ದಾರೆ.

ಈ ಅನುಭವದ ನಂತರ ಶ್ರೀ ರಾಮಕೃಷ್ಣರು ಸಂಪೂರ್ಣವಾಗಿ ಭಿನ್ನ ವ್ಯಕ್ತಿಯೇ ಆಗಿಹೋದರು. ಅವರು ದೇವಸ್ಥಾನದ ಸಾಂಪ್ರದಾಯಿಕ ಕಾರ್ಯಾಚರಣೆಗಳನ್ನು ಮಾಡಲು ಅಶಕ್ತರಾಗಿದ್ದಲ್ಲಿ, ಅವರ ನಿತ್ಯದ ಇರವಿನಲ್ಲಿ ನಿಗ್ರಹಿಕೆ ಉಂಟಾಗುವಂಥ ಆವೇಶಗಳಿಗೆ, ಆಗಾಗ್ಗೆ ಒಳಗಾಗುತ್ತಿದ್ದರು. ಅವರ ಆತ್ಮವು ಒಂದು ಕುಲುಮೆಯಂತಿದ್ದು, ಅದರಿಂದೇಳುತ್ತಿದ್ದ ಬೆಂಕಿಯ ಜ್ವಾಲೆಗಳು, 'ಮಾತೆ'ಯಲ್ಲಿ ಅವರು ಕಂಡಿದ್ದ ದೇವತೆಗಳೇ ಆಗಿದ್ದರು. ಅವರು ದಿವ್ಯತ್ವದಿಂದ ಎಷ್ಟು ತುಂಬಿ ಹೋಗಿದ್ದರೆಂದರೆ, ಅವರು ತಾವಾಗಿ ಭಗವಂತನಲ್ಲಿ ಎಷ್ಟು ಐಕ್ಯರಾಗಿದ್ದರೋ ಅಷ್ಟೇ, ಭಗವಂತನೂ ಅವರಲ್ಲಿ ನೆಲೆಸಿದ್ದನು. ಇನ್ನೇನು ಬೇಕು? ಇತರರಿಗೂ ಅವರು ಭಗವಂತನೇ ಆಗಿ ಕಂಡುಬಂದರು. ದೇವಸ್ಥಾನವನ್ನು ಕಟ್ಟಿಸಿದ್ದವರ ಅಳಿಯನಾಗಿದ್ದ ಮಾಥುರ್‌ಬಾಬು, ರಾಮಕೃಷ್ಣರು ಮುಖಮಂಟಪದಲ್ಲಿ ಇತ್ತಲಿಂದತ್ತ ಹೋಗುತ್ತಿದ್ದುದನ್ನು ನೋಡುತ್ತಿದ್ದಾಗೊಮ್ಮೆ, ಒಂದು ಕಡೆಯಿಂದ ಶಿವನಂತೆ ನಡೆದು ಬಂದು, ವಾಪಸ್ಸು ಬರುವಾಗ ಮಾತೆಯಂತೆ ಕಂಡುಬಂದಿದ್ದರು.

ಅಂಥ ಪರಿಸ್ಥಿತಿಗಳಲ್ಲಿ ಯಾವಾಗಲೂ ಸಾಧಾರಣವಾಗಿ ಆಗುವಂತೆ, ಶ್ರೀ ರಾಮಕೃಷ್ಣರ ಬಂಧುಗಳು, ಅವರ ದಿವ್ಯತ್ವದ ಹುಚ್ಚನ್ನು ಮಾನಸಿಕ ಹುಚ್ಚೆಂದು ಪರಿಗಣಿಸಿದರು. ಅವರಿಗೆ ಮದುವೆ ಮಾಡಿ, ಆ ಹುಚ್ಚಿಗೆ ಪರಿಹಾರ ಕಲ್ಪಿಸಬೇಕೆಂದುಕೊಂಡರು. ಲೈಂಗಿಕತೆ ಎಂಬುದಕ್ಕೆ ಅರ್ಥವೇ ಇಲ್ಲವೆಂದು ಭಾವಿಸಿದ್ದ ಶ್ರೀ ರಾಮಕೃಷ್ಣರು, ತಮಗೆ ಇಪ್ಪತ್ಮೂರು ವರ್ಷಗಳ ವಯಸ್ಸಾಗಿದ್ದಾಗ, ಐದು ವರ್ಷದ ಕನ್ಯೆಯೊಬ್ಬಳನ್ನು ಮದುವೆಯಾಗಲು ಒಪ್ಪಿದರು. ಆಗ ಶಾರದಾಮಣಿ ಎಂಬ ಎಳೆಯ ಬಳ್ಳಿಯನ್ನು, ಪೂರ್ತಿ ಬೆಳೆದು ನಿಂತಿದ್ದ ದೃಢವಾದ ಮರದ



ಬುಡಕ್ಕೆ ಸುರುಳಿ ಸುತ್ತುವಂತೆ ಸುತ್ತಿದರು. ಆ ಬುಡವೂ, ಬಳ್ಳಿಯನ್ನು ಪೂರ್ಣವಾತ್ಸಲ್ಯದಿಂದ ಸ್ವೀಕರಿಸಿತು. ಯಾವುದೇ ಚರಿತ್ರೆ ಅಥವಾ ಪುರಾಣಕಥೆಯೂ, ಇಂಥ ಮದುವೆಯನ್ನು ಎಂದರೆ, ಆತ್ಮದ ಯಾತ್ರೆಯಲ್ಲಿ ನಿಷ್ಕಳಂಕ ಪ್ರಸಂಗವು ಜೊತೆಯಾಗಿದ್ದು, ಪತಿಯು ಪತ್ನಿಗೆ ಗುರುವಾದದ್ದನ್ನು ಮತ್ತು ಪತ್ನಿಯು ಪತಿಗೆ ಸಾಕ್ಷಾತ್ ಮಹಾಮಾತೆಯೇ ಆದದ್ದನ್ನು ದಾಖಲಿಸಿಲ್ಲ.

ಕಾಲಾಂತರದಲ್ಲಿ ಶಾರದಾಮಣಿ, ಪತಿಯ ಗೃಹಕ್ಕೆ ಬಂದಾಗ, ಶ್ರೀ ರಾಮಕೃಷ್ಣರು ಆಕೆಗೆ ನೀಡಬೇಕಾಗಿದ್ದುದನ್ನು ನೀಡಲು ಸಿದ್ಧರಾಗಿ "ನಾನು ಪ್ರತಿಯೊಬ್ಬ ಸ್ತ್ರೀಯನ್ನೂ ತಾಯಿಯಂತೆಯೇ ಕಾಣುವುದನ್ನು ಕಲಿತಿದ್ದೇನೆ. ನಿನ್ನ ಬಗ್ಗೆಯೂ ನನಗಿರುವ ಭಾವನೆ ಅದೊಂದೇ. ಆದರೆ ನನ್ನನ್ನು ನಿನ್ನೊಂದಿಗೆ ಮದುವೆ ಮಾಡಿರುವುದರಿಂದಾಗಿ, ನೀನು ನನ್ನನ್ನು ಪ್ರಪಂಚಕ್ಕೆ ಎಳೆಯಬೇಕೆಂದುಕೊಂಡಿದ್ದರೆ, ನಾನು ನಿನ್ನ ಸೇವಾಕಾಂಕ್ಷಿ ಆಗುತ್ತೇನೆ", ಎಂದರು.

ಒಂದು ಕ್ಷಣವೂ ತಡಮಾಡದೆ ಆಕೆ, "ನಿಮ್ಮ ಆಧ್ಯಾತ್ಮಿಕ ಅಭ್ಯಾಸಗಳಿಗೆ ಅಡಚಣೆಯನ್ನುಂಟುಮಾಡಲೆಂದು, ನಾನು ಬಂದಿಲ್ಲ", ಎಂದುತ್ತರಿಸಿದರು.

ಅದಂತೂ, ಅರುಂಧತಿ, ಅನುಸೂಯ, ಸೀತೆ, ಸಾವಿತ್ರಿಯರಂತೆ, ತಮ್ಮ ಪತಿ ಹಾಗೂ ಯಜಮಾನನಿಗೆ ಸಹಧರ್ಮಚಾರಿಣಿಯಾಗಿರಲು ಯಾರಿಗೆ ಉತ್ಸಾಹ ಹಾಗೂ ಇಚ್ಛೆ ಇದೆಯೋ, ಅಂಥ ಉನ್ನತ ಆದರ್ಶಗಳುಳ್ಳ ಸಂಪ್ರದಾಯದ ಹಿಂದೂ ಪತ್ನಿಯ ಘೋಷಣೆಯಾಗಿತ್ತು.

ಆ ದಿನದಿಂದ, ಶ್ರೀ ಶಾರದಾಮಣಿ ಅವರ ದೇಹ ಹಾಗೂ ಮನಸ್ಸು ಎರಡೂ ಆತ್ಮದ ಪ್ರಯೋಗ ಶಾಲೆಗಳಾಗಿ ಬದಲಾದವು. ವೈವಾಹಿಕ ಸಂಬಂಧದ ಒಂದು ನೂತನ ರೀತಿಯ ಅನುಸರಣೆಯ ಅಪೂರ್ವ ಶೋಧನೆಗಳನ್ನೇ ನೀಡಿ ಮಾರ್ಗದರ್ಶನ ನೀಡಿದವು.

ಶ್ರೀ ರಾಮಕೃಷ್ಣರು, ಶ್ರೇಷ್ಠ ಜೀವಿ ಶ್ರೀ ಶಾರದಾಮಣಿಯವರ ಮೇಲೆ ಅತ್ಯಂತ ಅಸಾಧಾರಣವಾದ ಮತ್ತು ಮಹತ್ತರ ಬದಲಾವಣೆಯ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ಬಹಳ ದಿನಗಳವರೆಗೆ ಕಾಯಬೇಕಾಗಿರಲಿಲ್ಲ. ಒಂದು ರಾತ್ರಿ ಪೂಜೆಗಾಗಿ ಎಲ್ಲವನ್ನೂ ಸಿದ್ಧಮಾಡಿಕೊಂಡ ನಂತರ, ಪೀಠದ ಮೇಲೆ ತಮ್ಮ ಪತ್ನಿಯನ್ನು ಕೂಡಿಸಿ, ಆಕೆಗೆ ಷೋಡಶಿ ಪೂಜೆ ಮಾಡಬೇಕೆಂದುಕೊಂಡು, ಮಂತ್ರೋಚ್ಚಾರಣೆಯೊಂದಿಗೆ ಷೋಡಶೋಪಚಾರ ಪೂಜೆ ಮಾಡಿದರು. ಪೂಜೆ ಇನ್ನೂ ಅರ್ಧದಲ್ಲಿರುವಾಗಲೇ, ಆ ಸರಳವಾದ ಗ್ರಾಮೀಣ ಮಹಿಳೆಯು, ತನ್ನ ವ್ಯಕ್ತಿತ್ವದ ಎಲ್ಲಾ ಅರಿವುಗಳನ್ನೂ ಕಳೆದುಕೊಂಡು, ಉತ್ಕೃಷ್ಟವಾದ ಜಾಗ್ರದವಸ್ಥೆಯನ್ನೇ ಪಡೆದು, ದಿವ್ಯಮಾತೆಯ ಇರವಿನೊಂದಿಗೆ ಐಕ್ಯಳಾದಳು. ಆಗ ಯಾರನ್ನು ತನ್ನೆದುರಿನಲ್ಲಿ ಪೂಜೆ ಮಾಡಲೆಂದು ಕುಳ್ಳಿರಿಸಿಕೊಂಡಿದ್ದರೋ, ಆಕೆಯನ್ನೇ ದೇವಿಯ ಆಕಾರದಲ್ಲಿ ಶ್ರೀ ರಾಮಕೃಷ್ಣರು ನೋಡಿದರು.

ಈ ಸಮಾರಂಭದಿಂದ, ಶ್ರೀ ಶಾರದಾಮಣಿ ಅವರು ತಮ್ಮ ಆಧ್ಯಾತ್ಮಿಕ ಪ್ರಗತಿಯನ್ನು ಪಡೆದುಕೊಂಡರು ಮತ್ತು ಅದರಿಂದಾಗಿ, ಅವರ ಅಸಂಖ್ಯಾತ ಶಿಷ್ಯರು ಮತ್ತು ಭಕ್ತರು, ಪ್ರೇಮ ಹಾಗೂ ಭಕ್ತಿಯಿಂದ ಆಕೆಗೆ "ಪೂಜ್ಯಮಾತೆ" ಎಂಬ ಬಿರುದನ್ನು ನೀಡಿದರು.

ಶ್ರೀ ರಾಮಕೃಷ್ಣರು ತಮ್ಮ ಮುಗ್ಧ ರೀತಿಯಲ್ಲಿಯೇ ಕೋಟೆಗೆ ಲಗ್ಗೆ ಹಾಕಿ, ಒಂದೇ ನೆಗೆತದಲ್ಲಿ ಅದನ್ನು ಗೆದ್ದುಕೊಂಡಿದ್ದರೂ ಕೂಡ ತಾವಾಗಿ ಸಾಂಪ್ರದಾಯಿಕ ಹಾದಿಯಲ್ಲಿಯೇ ಸಾಗಬೇಕೆಂದು ನಿರ್ಧರಿಸಿಕೊಂಡು, ವಿಧ್ಯುಕ್ತ ಬೋಧನೆಯ ಕಟ್ಟುನಿಟ್ಟಿಗೆ ತಮ್ಮನ್ನು ಸಿಲುಕಿಸಿಕೊಂಡರು. ಆಗ ಮೊದಲನೆಯದಾಗಿ, ಭೈರವಿ ಬ್ರಾಹ್ಮಣಿಯು, ಅವರಿಗೆ ತಾಂತ್ರಿಕ ಉಪಾಸನಾ ವಿಧಾನದ ಜಟಿಲ ಶಾಖೋಪಶಾಖೆಗಳನ್ನು ಹೇಳಿಕೊಟ್ಟರು. ಭಕ್ತ ಹಾಗೂ ದೈವತ್ವ ಸಂಬಂಧದ ಅನೇಕ ದೃಷ್ಟಿಕೋನಗಳನ್ನು ಕರಗತಮಾಡಿಕೊಳ್ಳುವುದರಲ್ಲಿ, ಜೊತೆಗೆ ಅತ್ಯಂತ ಕಡಿಮೆ ಅವಧಿಯಲ್ಲಿ ಸವಿಕಲ್ಪ ಸಮಾಧಿಯ ಉತ್ತಮ ಹಾಗೂ ವರ್ಣರಂಜಿತ ಅನುಭವವನ್ನು ಪಡೆಯಲು, ಸಹಾಯ ಮಾಡಿದರು.

ನಂತರ ಅದ್ವೈತ ಸಾಧು ತೋತಾಪುರಿ ಅವರು, ಅವರನ್ನು ನಾಮರೂಪಗಳ ಬಗ್ಗೆ ಅಪರಿಮಿತ ಶೂನ್ಯ ಮನೋಭಾವವನ್ನು ತಾಳುವ ಬಗ್ಗೆ ಆಕ್ರಮಣ ಮಾಡಿಸಲು ಮತ್ತು ಅದರೊಂದಿಗೆ ತಮ್ಮ ಸ್ವಂತದ ಅಭಿನ್ನತೆಯನ್ನು ಕಂಡುಕೊಳ್ಳಲು ತಯಾರು ಮಾಡಲೆಂದು ಬಂದರು.

ಆ ಅಲೆಯುವ ಸಂನ್ಯಾಸಿಯು, ವೇದಾಂತವನ್ನು ಕಲಿಸುತ್ತೇನೆ ಎಂದಾಗ, ಶ್ರೀ ರಾಮಕೃಷ್ಣರು ತಮ್ಮ ತಾಯಿಯ ಅನುಮತಿ ಇಲ್ಲದಿದ್ದಲ್ಲಿ ಸಾಧ್ಯವಿಲ್ಲವೆಂದು, ಅದಕ್ಕೆ ಒಪ್ಪಲೇ ಇಲ್ಲ. ಆಕೆಯ ಅನುಮತಿ ದೊರಕಿದಾಗ, ಶ್ರೀ ರಾಮಕೃಷ್ಣರೂ ಒಪ್ಪಿ, ತೋತಾಪುರಿ ಅವರ ಆಜ್ಞೆಯಂತೆ ತಮ್ಮ ಅಹಮಿಕೆಯ ಮನೋಭಾವದ ಪ್ರತಿಯೊಂದು ಆಕಾರ ಹಾಗೂ ಕುರುಹಿನಿಂದ ತಮ್ಮನ್ನು ನಿವಾರಿಸಿಕೊಳ್ಳಲು ಒಪ್ಪಿದರು. ಕಡೆಗೊಮ್ಮೆ, ತೋತಾಪುರಿ ಅವರು ಸಂಕೇತಾರ್ಥವಾಗಿ ಸತ್ತು ತಮ್ಮ ಅಂತ್ಯಕ್ರಿಯೆಗಳನ್ನೂ ಪೂರೈಸಿಕೊಳ್ಳಬೇಕೆಂದಾಗ ಶ್ರೀ ರಾಮಕೃಷ್ಣರು ಅದನ್ನೂ ಮಾಡಿದರು.

ತಮ್ಮ ಸ್ವಂತದ ದೇವರ ಬಗ್ಗೆ ಭಕ್ತಿಯನ್ನು ತ್ಯಜಿಸಿ ತಾಯಿಯ ಪ್ರಜ್ಞೆಯನ್ನು ಮನಸ್ಸಿನಿಂದ ನಿರ್ನಾಮಗೊಳಿಸಬೇಕಾದಾಗ ಮಾತ್ರ ಶ್ರೀ ರಾಮಕೃಷ್ಣರು ಎಷ್ಟೇ ಕಷ್ಟಪಟ್ಟರೂ, ಅವರಿಂದ ಅದು ಸಾಧ್ಯವಾಗಲೇ ಇಲ್ಲ. ಕೋಪ ಮತ್ತು ಕಿಂಕರ್ತವ್ಯತಾ ಮೌಢ್ಯದಿಂದ ಉತ್ತೇಜಿತರಾಗಿ, ತೋತಾಪುರಿ ಅವರು ಒಂದು ಒಡೆದ ಗಾಜಿನ ಚೂರಿನಿಂದ ಹುಬ್ಬುಗಳ ನಡುವೆ ಬಲವಾಗಿ ಹೊಡೆದು, "ಅಲ್ಲಿರಲಿ ನಿನ್ನ ಗಮನ," ಎಂದರು. "ಆಗ", ಎಂದು ಪ್ರಾರಂಭಿಸಿದ ರಾಮಕೃಷ್ಣರು, "ನಾನು ನನ್ನೆಲ್ಲಾ



ಶಕ್ತಿಯನ್ನೂ ಉಪಯೋಗಿಸಿ, ಧ್ಯಾನದಲ್ಲಿ ತೊಡಗಿದೆ. ದಿವ್ಯ ಮಾತೆಯ ರೂಪ, ಭವ್ಯ ಸ್ವರೂಪ ನನ್ನೆದುರಿಗೆ ಕಂಡುಬಂದಾಗ, ನಾನು ಕತ್ತಿಯಂತೆ ತಾರತಮ್ಯವನ್ನು ಉಪಯೋಗಿಸಿ ಆಕೆಯನ್ನು ಇಬ್ಭಾಗವಾಗಿ ಸೀಳಿದೆ. ಕಟ್ಟಕಡೆಯ ಪ್ರತಿಬಂಧವೂ ಬಿದ್ದುಹೋಯಿತು. ನನ್ನ ಆತ್ಮವು ಕೂಡಲೇ ಪರಿಸ್ಥಿತಿಯಿಂದಾಚೆಗೆ ಹೋಗಿ, ತಕ್ಷಣವೇ ಘನರೂಪದಲ್ಲಿ ಕೆಳಕ್ಕಿಳಿಯಿತು ಮತ್ತು ನಾನು ನನ್ನ ಸಮಾಧಿಯಲ್ಲಿ ಮುಳುಗಿಹೋದೆ" ಎಂದರು.

ಆ ಸ್ಥಿತಿಯಲ್ಲಿ ವಿಶ್ವವೇ ನಿರ್ಮೂಲವಾಗಿತ್ತು. ಕಾಲಾವಕಾಶವೂ ಇರಲೇ ಇಲ್ಲ. ಮೊದಲು ಆ ಭಾವನೆಗಳ ನೆರಳು, ಮನಸ್ಸಿನ ಅಸ್ಪಷ್ಟ ಅಂತರಂಗದಲ್ಲಿ ತೇಲಾಡಿತು. ಒಂದು ನಿತ್ರಾಣವಾಗಿದ್ದ ಪ್ರಜ್ಞೆಯ ಅಹಮಿಕೆಯು, ಏಕತಾನವಾಗಿ, ಲಯಬದ್ಧವಾಗಿ ಸದ್ದುಮಾಡುತ್ತಿತ್ತು. ನಂತರ, ಅದೂ ನಿಂತುಹೋಯಿತು. ಇರುವನ್ನು ಬಿಟ್ಟು ಬೇರೆ ಏನೂ ಇರಲಿಲ್ಲ. ಆತ್ಮದಲ್ಲಿ ಜೀವಸ್ವರೂಪಿ ಅಡಗಿಹೋಗಿತ್ತು. ದ್ವಂದ್ವವು ಅಳಿಸಿಹೋಗಿತ್ತು. ಸೀಮಿತ ಮತ್ತು ಅಪರಿಮಿತ ವ್ಯೋಮಗಳು ಒಂದಾಗಿದ್ದವು. ಶ್ರೀ ರಾಮಕೃಷ್ಣರು ಮಾತು ಮತ್ತು ಭಾವನೆಗಳ ಕ್ಷೇತ್ರಗಳನ್ನು ಮೀರಿದ ವಲಯವನ್ನು ಸೇರಿದರು. ಬ್ರಹ್ಮನನ್ನು ಅರಿತು ಬ್ರಹ್ಮವೇ ಆಗಿಹೋದರು. ಹೀಗೆ ಅವರು ಒಂದೇ ದಿನದಲ್ಲಿ, ಅವರ ಗುರುಗಳು ನಲವತ್ತು ವರ್ಷಗಳಲ್ಲಿ ಕಲಿತಿದ್ದುದನ್ನು ಕಲಿತರು. ಆಗ ಗುರುಗಳು, ತಾವು ಬಂದಿದ್ದಾಗ ಇದ್ದುದಕ್ಕಿಂತ ಹೆಚ್ಚು ವಿವೇಕವಂತರೂ, ಪವಿತ್ರರೂ ಆಗಿ ಶಿಷ್ಯನಿಂದ ಬೀಳ್ಕೊಂಡರು.

ಶ್ರೀ ರಾಮಕೃಷ್ಣರು, ಈ ನಿರ್ವಿಕಲ್ಪ ಸಮಾಧಿಯಲ್ಲಿ ಆರು ತಿಂಗಳುಗಳಿಗಿಂತಲೂ ಹೆಚ್ಚು ಕಾಲ ಇದ್ದು, ಇತಿಹಾಸ ಪೂರ್ವದ ಸಂತರು ಹಾಗೂ ಸಂನ್ಯಾಸಿಗಳಿಗೆ ಬಹಳ ಸಾಧಾರಣವೆನಿಸಿದ್ದ ಸ್ವಂತ ದೇಹದಲ್ಲಿನ ಅಗೋಚರ ಸಂಗತಿಯೊಂದರ ತಪಾಸಣೆಗೆ, ತಮ್ಮ ದೇಹವನ್ನೇ ಒಡ್ಡಿಕೊಂಡಿದ್ದರು. ಆ ಕಾಲಾವಧಿಯು ಅವರನ್ನು ಸುಮಾರಾಗಿ ಸಾವಿನ ಅಂಚಿನತ್ತ ಎಳೆದು ಸೊರಗಿಸಿತು. ಆದರೆ ಅವರ ಪ್ರೀತಿಯ ಸೋದರಳಿಯನ ಹಿತವಾದ ಉಪದೇಶದಿಂದಾಗಿ, ಆಪತ್ತು ತಪ್ಪಿತು.

ತೋತಾಪುರಿ ಮತ್ತು ಅವರ ಆದರ್ಶದವರೇ ಆಗಿದ್ದ ಇತರರಿಗೆ, ಸಗುಣ ಬ್ರಹ್ಮನಿಗಿಂತ ನಿರ್ಗುಣಬ್ರಹ್ಮನೇ ಉತ್ತಮನೆನಿಸಿದ್ದಾಗ, ಶ್ರೀ ರಾಮಕೃಷ್ಣರಿಗೆ ಮಾತ್ರ, ಎರಡರಲ್ಲಿಯೂ ಯಾವ ಭೇದವೂ ಕಾಣದಾಗಿತ್ತು ಮತ್ತು ಒಬ್ಬರಿಗಿಂತ ಮತ್ತೊಬ್ಬರು ಉತ್ತಮ ಎಂಬ ಪ್ರಶ್ನೆಯೇ ಏಳುತ್ತಿರಲಿಲ್ಲ.

ಅವರು, "ನನ್ನ ದಿವ್ಯ ಮಾತೆ, ಅಪರಿಮಿತತೆಯೇ ಹೊರತು ಬೇರೆ ಅಲ್ಲ. ಒಬ್ಬಳೇ ಆಗಿರುವ ತಾಯಿಯು ಅನೇಕವೂ ಆಗಿರುವುದಲ್ಲದೆ, ಏಕ ಮತ್ತು ಅನೇಕಗಳನ್ನು ಮೀರಿದವಳೂ ಆಗಿದ್ದಾಳೆ. ನನ್ನ ದಿವ್ಯ ಮಾತೆಯು, 'ನಾನು ವಿಶ್ವಕ್ಕೆ ಮಾತೆ, ನಾನು ವೇದಾಂತದ ಬ್ರಹ್ಮನ್; ನಾನು ಉಪನಿಷತ್ತುಗಳ ಆತ್ಮನ್ ಆಗಿದ್ದೇನೆ.

ಈ ಭೇದಾತ್ಮಕತೆಗಳನ್ನು ಸೃಷ್ಟಿಸಿದ ಬ್ರಹ್ಮನೇ ನಾನು. ಒಳ್ಳೆಯ ಮತ್ತು ಕೆಟ್ಟ ಕೆಲಸಗಳೆಲ್ಲವೂ ಒಂದೇ ರೀತಿಯಲ್ಲಿ ನನಗೆ ವಿಧೇಯಕವಾಗಿರುತ್ತವೆ. ಸತ್ಯದಲ್ಲಿ ಕರ್ಮದ ನ್ಯಾಯಶಾಸನವಿದೆ. ಆದರೆ ನ್ಯಾಯ ನೀಡುವುದು ಮಾತ್ರ ನಾನೇ. ನಾನೇ ಒಳ್ಳೆಯದೋ ಕೆಟ್ಟದ್ದೋ, ಎಲ್ಲಾ ಕರ್ಮಗಳನ್ನೂ ಅರ್ಪಣೆ ಮಾಡುತ್ತೇನೆ. ನನ್ನ ಬಳಿಗೆ ಬನ್ನಿ ! ಭಕ್ತಿಯಿಂದಲಾಗಲಿ, ಜ್ಞಾನದಿಂದಾಗಲಿ, ಕರ್ಮದಿಂದಾಗಲಿ ಬನ್ನಿ. ಏಕೆಂದರೆ ಎಲ್ಲವೂ ಭಗವಂತನತ್ತಲೇ ಒಯ್ಯುತ್ತವೆ. ಕರ್ಮಸಾಗರವಾಗಿರುವ ಈ ಪ್ರಪಂಚದಿಂದ ನಾನು ಮುನ್ನಡೆಸುತ್ತೇನೆ. ನಿಮಗಿಷ್ಟವಿದ್ದರೆ, ನಾನು ಅಪರಿಮಿತ ಜ್ಞಾನವನ್ನೂ ನೀಡುತ್ತೇನೆ. ನೀವು ನನ್ನಿಂದ ತಪ್ಪಿಸಿಕೊಳ್ಳಲಾರಿರಿ. ಸಮಾಧಿಯಲ್ಲಿದ್ದು ಅಪರಿಮಿತತೆಯನ್ನು ಅರಿತಿರುವವರೂ ಕೂಡ, ನನ್ನ ಇಚ್ಛೆಯ ಮೇರೆಗೆ ಹಿಂದಿರುಗುತ್ತಾರೆ', ಎಂದಿದ್ದಾಳೆ. ನನ್ನ ದಿವ್ಯ ಮಾತೆಯು ಬೀಜಭೂತ ದಿವ್ಯ ಶಕ್ತಿ. ಅವಳು ಸರ್ವವ್ಯಾಪಿ, ಅವಳು ದೃಗ್ಗೋಚರ ವಿದ್ಯಮಾನ, ಅವಳು ವಿಶ್ವದ ತಂದೆ–ತಾಯಿ. ವಿಶ್ವವು ತನ್ನ ಹೃದಯದಲ್ಲಿ ಆಕೆಯನ್ನು ಹೊತ್ತಿದೆ. ಅವಳು ಜೇಡವಾದರೆ, ವಿಶ್ವವು ಅವಳು ನೇಯ್ದಿರುವ ಬಲೆ. ಜೇಡವು ತನ್ನಿಂದಲೇ ದಾರವನ್ನು ಎಳೆದು, ತನ್ನ ಸುತ್ತಲೂ ಸುತ್ತಿಕೊಳ್ಳುತ್ತದೆ. ನನ್ನ ಮಾತೆ, ಅದರೊಂದಿಗೆ ಒಂದು ದೊಡ್ಡ ಲೋಹದ ಪೆಟ್ಟಿಗೆಯೂ ಆಗಿ, ಅದರೊಳಗಿನ ವಸ್ತುಗಳೂ ಆಗಿದ್ದಾಳೆ. ಅವಳು ಕರಟವೂ ಹೌದು. ಆದರೆ ಅದರ ಜೊತೆಗೆ ತಿರುಳೂ ಅವಳೇ", ಎಂದರು.

ಆಧ್ಯಾತ್ಮಿಕವನ್ನು ಬಯಸುವವರು, ಯಾವುದನ್ನು ಅರಿತರೆ ಎಲ್ಲವನ್ನೂ ಅರಿಯಬಹುದೋ, ಅದನ್ನು ಅರಿಯಬೇಕೆಂದು ಉಪನಿಷತ್ತುಗಳು ಉಪದೇಶಿಸುತ್ತವೆ. ಶ್ರೀ ರಾಮಕೃಷ್ಣರು, ಅಂಥ ಅದ್ಭುತವಾದ ರೀತಿಯಲ್ಲಿ ಪಡೆದ ಅರಿವಿನ ನಿಬಂಧನೆಗಳಿಗನುಗುಣವಾಗಿ ನಿರ್ಗುಣಬ್ರಹ್ಮಜ್ಞಾನ ಮತ್ತು ಅವರ ಜಾತೀಯ ಅಧ್ಯಾತ್ಮಕ್ಕೆ ಮೂಲವಾಗಿದ್ದ ಬ್ರಹ್ಮನ್–ಮಾತೆ ಸಮೀಕರಣವು, 'ವ್ಯಕ್ತಿಗತವಾದವು ಮತ್ತು ವ್ಯಕ್ತಿಗತವಲ್ಲದವು, ಒಂದೇ ನಾಣ್ಯದ ಎರಡು ಮುಖಗಳಾಗಿದ್ದವು' ಎಂಬುದನ್ನು ಅರಿಯಲು ಸಹಾಯಮಾಡಿತು. ಅಥವಾ ಅವರದೇ ಆದ ಪದಗಳಲ್ಲಿ, ರೂಪಕೋಕ್ತಿಗಳನ್ನು ಬದಲಿಸಬೇಕೆಂದರೆ, ಒಂದು ನೀರಾಗಿದ್ದರೆ ಮತ್ತೊಂದು ಮಂಜಾಗಿತ್ತು. ಇನ್ನೂ ಬೇಕೇ? ಅವರಿಗೆ ತಾನಾಗಿ ಭಾವನೆ ಬಂದಿತ್ತು ಮತ್ತು ಅದು ಅವರ ಅನುಭವದಿಂದ ಸ್ಥಿರವಾಯಿತು. ವ್ಯಕ್ತಿಗತ ದೇವರೆಂದು ವೇದಗಳು ಹೇಳುವ ಪರಮಶಕ್ತ ಪುರುಷನು ಸಹಸ್ರಶೀರ್ಷ, ಸಹಸ್ರಾಕ್ಷ ಮತ್ತು ಸಹಸ್ರಪಾತ್ ಆಗಿರಬಹುದು. ಅವನಿಗೆ ಸಾವಿರ ತಲೆಗಳು, ಸಾವಿರ ಕಣ್ಣುಗಳು ಮತ್ತು ಸಾವಿರ ಹೆಜ್ಜೆಗಳು ಇರಬಹುದು. ಆದರೆ ಅವನಿಗೆ ಇರುವುದು ಒಂದೇ ಹೃದಯ. ಅವನು ತನ್ನ ಭಕ್ತರಿಗೆ ತನ್ನನ್ನೇ ವಿವಿಧ ಆಕಾರಗಳಲ್ಲಿ ತೋರಿಸಿಕೊಳ್ಳಬಹುದು. ಆದರೆ ಅವೆಲ್ಲವುಗಳಲ್ಲಿಯೂ, ಅವನು ಒಂದೇ ರೀತಿಯಲ್ಲಿ ಲಯಬದ್ಧವಾಗಿ ತುಡಿಯುತ್ತಾನೆ.



ಇದನ್ನು ತಮಗೆ ತಾವೇ ಆಶ್ವಾಸನೆ ಕೊಟ್ಟುಕೊಳ್ಳಲೋ ಎಂಬಂತೆ, ಶ್ರೀ ರಾಮಕೃಷ್ಣರು ಮನಸ್ಸಿನಲ್ಲಿ ಮುಸ್ಲಿಮರಾಗಿ ಬದಲಾವಣೆ ಹೊಂದಿ, ಅದೇ ರೀತಿಯ ಜೀವನದಲ್ಲಿ ತೊಡಗಿ, ತಾವು ಹಿಂದೂ ಆಗಿದ್ದಾಗ ನಡೆಸಿಕೊಂಡು ಬರುತ್ತಿದ್ದ ವಿಧಿವಿಧಾನಗಳನ್ನೆಲ್ಲಾ ತೊರೆದರು. ಕಡೆಗೆ ದೇವಿಯ ಆರಾಧನೆಯನ್ನೂ ಬಿಟ್ಟು ಕುಳಿತರು. ಅವರಿಗೆ ಆಗ, ಮೊಹಮ್ಮದನು ತಮ್ಮ ದೇಹದ ಚೌಕಟ್ಟಿನೊಳಗೆ ಪ್ರವೇಶಿಸಿ, ನಂತರ ನಿಧಾನವಾಗಿ ಹೊರಕ್ಕೆ ಬಂದಂತೆ ಅನುಭವವಾಯಿತು. ಇದಕ್ಕೂ ಮುಂಚೆ, ಅವರೊಬ್ಬ ಕ್ರಿಶ್ಚಿಯನ್ನನ ಮನೆಯಲ್ಲಿದ್ದಾಗ, ಅವರ ಕಣ್ಣುಗಳು ಮಡೋನ್ನಳನ್ನು ಮಗುವಿನೊಂದಿಗೆ ಕಂಡವು. ತಕ್ಷಣವೇ ಅವರು ಸಮಾಧಿ ಸ್ಥಿತಿಯನ್ನು ಹೊಂದಿ, ಕ್ರೈಸ್ತನ ಅನುಭವದಂತೆಯೇ ಅನುಭವಿಸಿದರು.

ದೇವರ ಪುತ್ರ, ಮೆಕ್ಕಾದ ಪ್ರವಾದಿ, ಎಲ್ಲರೂ ಅವರಿಗೆ ಅಯೋಧ್ಯೆಯ ರಾಜಕುಮಾರ ಅಥವಾ ಬೃಂದಾವನದ ಗೊಲ್ಲರ ಹುಡುಗರಷ್ಟೇ ಯಥಾವತ್ತಾದ ರೂಪಗಳು ಎನಿಸಿತು. ಅವರು ತಮ್ಮ ಶಿಷ್ಯರನ್ನು ಕುರಿತು ಹೇಳುತ್ತಾ, "ನಾನು, ಹಿಂದೂಧರ್ಮ, ಮುಸ್ಲಿಂ ಧರ್ಮ ಮತ್ತು ಕ್ರೈಸ್ತ ಧರ್ಮಗಳನ್ನೂ, ಎಲ್ಲಾ ಮತಗಳನ್ನೂ ಅಭ್ಯಾಸ ಮಾಡಿದ್ದೇನೆ. ವಿವಿಧ ಹಿಂದೂ ಧರ್ಮಗಳ ಮಾರ್ಗಗಳನ್ನೂ ಅನುಸರಿಸಿದ್ದೇನೆ. ಆದರೆ, ವಿವಿಧ ಮಾರ್ಗಗಳಿಂದ ಹೆಜ್ಜೆಗಳನ್ನು ಹಾಕುತ್ತಾ ಎಲ್ಲರೂ ಬಂದು ಸೇರುತ್ತಿರುವುದು ಅದೇ ದೇವರ ಹತ್ತಿರಕ್ಕೆ ಎಂಬುದನ್ನು ನಾನು ಕಂಡುಕೊಂಡಿದ್ದೇನೆ," ಎಂದರು. ಶ್ರೀ ರಾಮಕೃಷ್ಣರು ಶ್ರೀರಾಮ, ಶ್ರೀ ಕೃಷ್ಣ, ಮಾತೆ, ಕ್ರಿಸ್ತ, ಮೊಹಮ್ಮದ್ ಇವರೆಲ್ಲರ ಬಗ್ಗೆ ಯೋಚಿಸಿದರೋ ಬಿಟ್ಟರೋ ಆದರೆ ಅವರು ಯಾವುದಾದರೂ ಕಥೆ ಕೇಳಿದಾಗ, ಹಾಡು ಹಾಡಲ್ಪಟ್ಟಾಗ ಅಥವಾ ಚಿತ್ರವನ್ನು ನೋಡಿದಾಗ, ನಿಜವಾಗಿಯೂ ಅದಕ್ಕನುಗುಣವಾಗಿದ್ದ ಸಮಾಧಿ ಸ್ಥಿತಿಯನ್ನಂತೂ ಅನುಭವಿಸಿರುತ್ತಿದ್ದರು.

"ಪರೋಪಕಾರಾಯ ಫಲಂತಿ ವೃಕ್ಷಾ :" ಇತರರ ಅನುಕೂಲಕ್ಕಾಗಿ ಮರಗಳು ಹಣ್ಣುಗಳನ್ನು ನೀಡುತ್ತವೆ. ಹೂವುಗಳು ಪೂರ್ಣವಾಗಿ ಅರಳಿ, ಮಕರಂದವನ್ನು ಸೂಸಿದಾಗ ಜನರು ಆಹ್ಲಾದಗೊಳ್ಳುತ್ತಾರೆ. ಅದೇ ರೀತಿ ವಿಶ್ವದ ಉತ್ತಮ ಸಂತರ ಆಧ್ಯಾತ್ಮಿಕ ಅರಿವು, ಕೇವಲ ಅವರ ಸ್ವಂತದ ಮುಕ್ತಿಗೆಂದು ಮಾತ್ರ ಇರುವುದಿಲ್ಲ. ಅವರೇ, ಇತರರಿಗೆ ಮಾರ್ಗಾನ್ವೇಷಿಗಳಾಗಿ, ಮಾರ್ಗವನ್ನು ಮಾಡಿಕೊಟ್ಟು, ಇತರರು ಅದರ ಮೇಲೆ ನಡೆದುಹೋಗುವಂತೆ ಮಾಡುತ್ತಾರೆ. ಶ್ರೀರಾಮಕೃಷ್ಣರೇ ಒಮ್ಮೆ "ಮೇಲೇರಿ ಹೋಗಿರುವ ಒಬ್ಬ ಮನುಷ್ಯ ಅಲ್ಲಿಂದ ಒಂದು ಹಗ್ಗವನ್ನು ಕೆಳಕ್ಕೆ ಹಾಕಿ, ಇತರರು ಅದನ್ನು ಹಿಡಿದುಕೊಂಡು ಹತ್ತುವಂತೆ ಮಾಡುತ್ತಾನೆ" ಎಂದರು. ವ್ಯಕ್ತಿಯೊಬ್ಬರು ಗಳಿಸಿದ ಜ್ಞಾನ ಹಾಗೂ ತಿಳಿವಳಿಕೆಯನ್ನು ಯೋಗ್ಯ ಶಿಷ್ಯರಿಗೆ ವರ್ಗಾಯಿಸುವುದು, ಎಂದಿನಿಂದಲೋ ಬಂದ ಭಾರತೀಯ ಪರಂಪರೆಯಾಗಿದೆ.

ಹೀಗೆ ಗುರು, ಎಷ್ಟು ಉತ್ಸುಕತೆಯಿಂದ ತಮ್ಮ ಶಿಷ್ಯನನ್ನು ಹುಡುಕುತ್ತಾರೆಯೋ, ಅಷ್ಟೇ ಪ್ರಖರವಾಗಿ ಶಿಷ್ಯನೂ ಗುರುವನ್ನು ಅರಸುತ್ತಾನೆ.

ಭೈರವಿ ಬ್ರಾಹ್ಮಣಿಯು ಮೊದಲ ಬಾರಿಗೆ ಶ್ರೀ ರಾಮಕೃಷ್ಣರನ್ನು ಭೇಟಿಯಾದಾಗ, ಆಕೆ ಆನಂದದಿಂದ ತುಂಬಿ ತುಳುಕಿಹೋದರು ಮತ್ತು "ನನ್ನ ಮಗುವೇ, ಎಷ್ಟು ಕಾಲದಿಂದ ನಿನಗಾಗಿ ಅರಸುತ್ತಿದ್ದೆನಪ್ಪ !" ಎಂದರು. ಅದೇ ರೀತಿ ಶ್ರೀ ರಾಮಕೃಷ್ಣರೂ ಸಹ, ತಮ್ಮ ಭಗವದರಿವಿನಿಂದ ಪೂರ್ಣರಾಗಿ, ಪ್ರತಿದಿನವೂ ಸಂಜೆಯ ಹೊತ್ತಿನಲ್ಲಿ, ತಮ್ಮ ಮುಂದಿನ ಭಕ್ತರಿಗಾಗಿ ಅವರ ಹಿರಿಮೆಗಾಗಿ, ಗಟ್ಟಿಯಾಗಿ ಮೊರೆ ಇಡುತ್ತಿದ್ದರು. ತಕ್ಷಣವೇ ಅವರ ಸುತ್ತಲೂ ಒಂದು ನಿಗೂಢ ತತ್ವಶಕ್ತಿಯಿಂದ ಪ್ರಚೋದಿಸಲ್ಪಟ್ಟಂತೆ, ಕಾತರಯುಕ್ತ ಆತ್ಮಗಳ ಒಂದು ತಾರಾಗಣವು ನೆರೆಯುತ್ತಿತ್ತು. ಈ ತಾರಾಗಣವೇ, ಮೂಲೆಗಳಿಗೂ, ಶ್ರೀ ರಾಮಕೃಷ್ಣರ ದಿವ್ಯ ಸಂದೇಶಗಳೆಂಬ ಪ್ರಭಾವಯುಕ್ತ ದೀವಟಿಗೆಯನ್ನು ಹಿಡಿದು ಹೊರಡಬೇಕಿದ್ದದ್ದು.

ಕೆಲವರು, ಪ್ರಾರಂಭದಲ್ಲಿ ಮಂದಗತಿಯಲ್ಲಿ ಹಾಗೂ ಸಂದೇಹವಾದಿಗಳಾಗಿ ಬಂದರೂ, ಕಡಿಮೆ ಸೂಕ್ಷ್ಮಾಭಿರುಚಿಯವರು ಕೆಲವರು, ಶ್ರೀ ರಾಮಕೃಷ್ಣ ಎಂಬ ಶಕ್ತಿಶಾಲಿ ಲೋಹ ಚುಂಬಕದಿಂದ, ಕಬ್ಬಿಣದ ಪುಡಿಗಳೋಪಾದಿಯಲ್ಲಿ ಸೆಳೆಯಲ್ಪಟ್ಟರು. ಅವರಲ್ಲೆಲ್ಲಾ ಶ್ರೇಷ್ಠನಾದವನು ನರೇಂದ್ರನಾಥ ದತ್ತ ಎಂಬಾತ. ಅವರೇ ನಂತರ, ಸ್ವಾಮಿ ವಿವೇಕಾನಂದ ಎಂಬ ಹೆಸರಿನಲ್ಲಿ ಪಾಶ್ಚಿಮಾತ್ಯ ದೇಶಗಳ ಸಾರ್ವಜನಿಕ ಸಭಾಂಗಣಗಳಲ್ಲಿ ವೇದಾಂತವೆಂಬ ಸಿಂಹವು ಗರ್ಜಿಸುವಂತೆ ಮಾಡಲು, ನಾಯಕತ್ವ ವಹಿಸಿಕೊಂಡರು.

ಗುರುಗಳು, ಬುದ್ಧಿಮತ್ತ ಯುವಕ ನರೇನ್‌ನ ಮೇಲೆ ಸಾಧಿಸಿದ ಗೆಲುವಿನ ಕಥೆಯು, ಆಧ್ಯಾತ್ಮಿಕ ಮಾರ್ಗದರ್ಶನ ಮತ್ತು ನಾಯಕತ್ವದ ರೋಮಾಂಚಕ ಪ್ರಕರಣವೇ ಆಗಿತ್ತು. "ನೀವು ದೇವರನ್ನು ನೋಡಿದ್ದೀರೇನು?" ಎಂಬ, ಸಂದೇಹ ಪ್ರಕೃತಿಯ ಅಜ್ಞೇಯತಾವಾದಿ ಯುವಕನ ದುಡುಕಿನ ಪ್ರಶ್ನೆಗೆ, ತಟ್ಟನೆ "ಹೌದು, ನಿನ್ನನ್ನು ನಾನು ನೋಡುತ್ತಿರುವಷ್ಟೇ ಸ್ಪಷ್ಟವಾಗಿ ನೋಡಿದ್ದೇನೆ. ನೀನೂ ಅವನನ್ನು ನೋಡುವಂತೆ ಮಾಡಬಲ್ಲೆ", ಎಂದು ಉತ್ತರ ಬಂತು. ಆ ಜವಾಬಿನ, ಸಮ್ಮೋಹಕ ಆಕರ್ಷಣ ಶಕ್ತಿಗೊಳಗಾದ ನರೇನ್, ಗುರುಗಳಿಗೆ ತನ್ನ ತಲೆಯನ್ನು ಮುಟ್ಟಲು ಅವಕಾಶವನ್ನಿತ್ತನು. ಆ ಕ್ಷಣದಲ್ಲಿ ಕಿಂಕರ್ತವ್ಯತಾ ಮೌಢ್ಯಕ್ಕೊಳಗಾಗಿ, ನರೇನ್ ಹಿಂದೆಂದೂ ಕಾಣದ್ದನ್ನು, ಅನುಭವಿಸದೆ ಇದ್ದುದನ್ನು ಅನುಭವಿಸಿದನು. ಗುರುಗಳೊಂದಿಗಿನ ಅವನ ಎರಡನೆಯ ಮತ್ತು ಮೂರನೆಯ ಭೇಟಿಗಳು, ಅವನ ಪ್ರತಿರೋಧ ಶಕ್ತಿಯನ್ನು ಅಳಿಸಿಹಾಕಿದವು ಮತ್ತು ಅವನನ್ನು ಗುರುಗಳು ಗೆದ್ದಿದ್ದರು. ಶ್ರೀ ರಾಮಕೃಷ್ಣರು, "ಹೇ ದೇವ, ನನ್ನ ಆಂತರಿಕ ಅನುಭವಗಳನ್ನು ಸ್ವೀಕರಿಸಲು ಯಾರಾದರೂ ಯೋಗ್ಯರು ಸಿಕ್ಕಿದರೆ, ನಾನು ನನ್ನ ಅತಿಮಾನುಷ ಚೇತನವನ್ನೆಲ್ಲಾ ಅವನ ಎದೆಗೆ ಸುರಿದುಬಿಡಲು



ಕಾತರನಾಗಿದ್ದೆ !", ಎಂದು ಉದ್ಗರಿಸಿದಾಗ, ಅವರ ಮಹದಾನಂದವು ಅಸಾಧಾರಣ ಸಾಮರ್ಥ್ಯದ್ದಾಗಿತ್ತು.

ಆ ಕ್ಷಣದಿಂದಾಚೆಗೆ, ಸಾಕಷ್ಟು ಮಂದಿ ಹದಿ ಹರೆಯದ ಪ್ರಾಜ್ಞರು ಅವರನ್ನು ಸುತ್ತುವರಿದರು. ಅವರಲ್ಲಿ ಸಮಾಜದ ಎಲ್ಲಾ ಶ್ರೇಣಿಯವರೂ, ವಿವಿಧ ವೃತ್ತಿ ಪರರೂ, ಮತ್ತು ವಿವಿಧ ಮತ ಶ್ರದ್ಧೆಯುಳ್ಳವರೂ ಇದ್ದರು. ಅವರೊಂದಿಗೆ ಶ್ರೀ ರಾಮಕೃಷ್ಣರು ಹಗಲೂ ರಾತ್ರಿ ಸಂಭಾಷಿಸುತ್ತಿದ್ದರು. ದೃಷ್ಟಾಂತ ಕಥೆಗಳನ್ನು ಹೇಳುತ್ತಿದ್ದರು, ಜೊತೆಯಲ್ಲಿ ಹಾಡುತ್ತಿದ್ದರು, ನಗುತ್ತಿದ್ದರು. ಅವರಲ್ಲಿ ಲಲಿತಕಲೆಯಂತಿದ್ದ ವಿಧಾನದಿಂದ, ಅವರು, ಅತ್ಯಂತ ಗಹನವಾದ ಜ್ಞಾನವುಳ್ಳ ಸತ್ಯತೆಗಳನ್ನೂ ಕೂಡ, ಸಮಯಸ್ಫೂರ್ತಿ ಮತ್ತು ಹಾಸ್ಯಪ್ರಜ್ಞೆಗಳಿಂದ ಕೂಡಿಸಿ, ಹೇಳುತ್ತಿದ್ದರು.

ಗುರುಗಳು ತಮ್ಮ ಆಧ್ಯಾತ್ಮಿಕ ಪ್ರಾಯೋಗಿಕ ಪರೀಕ್ಷೆಗಳನ್ನು ವಿವಿಧ ರೀತಿಗಳಲ್ಲಿ ನಡೆಸುತ್ತಿದ್ದರು. ಅವರ ಪರಮಾನಂದದ ಕಾಲಾವಧಿಗಳು ಅತ್ಯಂತ ಶೀಘ್ರವಾಗಿ ಪುನರಾವರ್ತಿಸುತ್ತಿದ್ದು, ದೀರ್ಘಾವಧಿಯು ಆಗುತ್ತಿದ್ದವು. ಅವರು ಸತತವಾಗಿ ಗುಂಪಿನ ಮುಂದೆ ತಮ್ಮನ್ನು ತಾವು ಒಪ್ಪಿಸಿಕೊಳ್ಳುತ್ತಿದ್ದ ವಿಸ್ಮಯಕಾರಕ ರೀತಿ ಮತ್ತು ಅವರ ಮಾತನ್ನು ಆಸಕ್ತಿಯಿಂದ ಆಲಿಸುತ್ತಿದ್ದವರ ಮುಂದೆ ಬಿಡದೆ ಮಾತನಾಡುವುದು, ಎಲ್ಲವೂ ಅವರ ಅಂಥದ್ದೇನೂ ಶಕ್ತಿಯುತವಾಗಿಲ್ಲದಿದ್ದ ದೇಹದ ಮೇಲೆ ತ್ರಾಸದಾಯಕ ಹಾನಿಯನ್ನುಂಟು ಮಾಡಿತು. ೧೮೮೫ರಲ್ಲಿ ಅವರ ಆರೋಗ್ಯವು ತೀವ್ರವಾಗಿ ಹದಗೆಟ್ಟಿತು.

ಗಂಟಲಿನಲ್ಲಿನ ಉರಿಯೂತವು ಮುಂದೆ ಬರಲಿದ್ದ ಅಪಾಯದ ಮುನ್ಸೂಚನೆಯಾಗಿತ್ತು. ಎಷ್ಟೆಲ್ಲಾ ಪ್ರಯತ್ನಗಳಿಂದ ಅಪಾಯವನ್ನು ತಡೆಯಲು ಯತ್ನಿಸಿದರೂ, ಅದು ಮತ್ತಷ್ಟು ಕೆಡುತ್ತಲೇ ಹೋಯಿತು. ಆದರೆ ಆ ನರಳಿಕೆಗಳ ಮಧ್ಯದಲ್ಲಿಯೂ, ಗುರುಗಳ ತುಟಿಗಳ ಮೇಲಿದ್ದ ಗಂಭೀರವಾದ ಮುಗುಳ್ನಗೆ ಮಾಸಲೇ ಇಲ್ಲ. ವೈದ್ಯರ ಎಚ್ಚರಿಕೆಗಳನ್ನು ಮತ್ತು ತಮ್ಮ ಶಿಷ್ಯರ ಮನವಿಗಳನ್ನೂ ಪರಿಗಣಿಸದೆ, ಅವರು ಕಡೆಯವರೆಗೂ ಮಾತನಾಡುತ್ತಲೇ ಇದ್ದರು.

ಮರಣದ ಕೆಲವು ದಿನಗಳ ಮುಂಚೆ, ಶ್ರೀ ರಾಮಕೃಷ್ಣರು, ನರೇನ್‌ನತ್ತ ಪ್ರೀತಿಯಿಂದ ನೋಡಿ, ಸಮಾಧಿಗಿಳಿದರು. ಈ ದೃಷ್ಟಿದೀಕ್ಷೆಯಿಂದ ನರೇನನಿಗೆ ಚೈತನ್ಯಗೊಳಿಸಿದಂತಾಯಿತು. ನಂತರ ಗುರುಗಳು ಶಿಷ್ಯನಿಗೆ ಒಂದು ಆಜ್ಞೆಯಿಂದ ಕೂಡಿದ್ದು, ಭವಿಷ್ಯ ಕಥನವನ್ನೂ ತಿಳಿಸುವಂಥ ಮಾತುಗಳನ್ನು ಹೇಳಿದರು. ಅವರು, "ಇಂದು ನಾನು, ನಿನಗೆ ನನ್ನದೆಲ್ಲವನ್ನೂ ಕೊಟ್ಟಿದ್ದೇನೆ. ಮತ್ತು ನಾನೀಗ ಒಬ್ಬ ಬಡ ಫಕೀರ. ನನ್ನ ಬಳಿ ಏನೂ ಉಳಿದಿಲ್ಲ. ಈ ಶಕ್ತಿಯಿಂದ ನೀನು ಪ್ರಪಂಚಕ್ಕೆ ಅಳತೆಗೆ ಸಿಕ್ಕದಷ್ಟು ಶ್ರೇಯಸ್ಸನ್ನು ಉಂಟು ಮಾಡುವೆ ಮತ್ತು ಇದನ್ನು ಪೂರ್ಣಗೊಳಿಸುವವರೆಗೆ, ನೀನು ಹಿಂದಿರುಗುವುದಿಲ್ಲ" ಎಂದರು.

೧೮೮೬ನೆಯ ಇಸವಿಯ ಆಗಸ್ಟ್ ಹದಿನೈದನೆಯ ತಾರೀಖು, ಅವರ ಭೂಮಿಯ ಮೇಲಿನ ಪ್ರವಾಸದ ಕಡೆಯ ದಿನವಾಗಿತ್ತು. ಶಿಷ್ಯರೊಡನೆ ಬಿಡದೆ ಎರಡು ಘಂಟೆಗಳವರೆಗೆ ಮಾತನಾಡಿ, ರಾತ್ರಿಯಾದ ತಕ್ಷಣ, "ನದಿ ಸಮುದ್ರಕ್ಕೆ ಪುನಃ ಪ್ರವೇಶ ಮಾಡಿತು." ಅವರು ತಾವೇ ಹೇಳಿಕೊಂಡಂತೆ, ಅವರು "ಒಂದು ಕೋಣೆಯಿಂದ ಮತ್ತೊಂದಕ್ಕೆ ಪ್ರವೇಶಿಸಿದರು."

ಶ್ರೀ ರಾಮಕೃಷ್ಣರು ಹೊಸ ಮತ ಅಥವಾ ಹೊಸ ಧರ್ಮ ಪಂಥವನ್ನೇನೂ ಹುಟ್ಟುಹಾಕಲಿಲ್ಲ. ಧಾರ್ಮಿಕ ಸಹಬಾಳ್ವೆಯ ಪ್ರತಿಪಾದಕರಾಗಿ, ಅವರು ಎಲ್ಲಾ ಧರ್ಮಗಳನ್ನೂ ಸಮನಾದ ಪ್ರಾಧಾನ್ಯತೆಯುಳ್ಳವುಗಳೆಂದು ಸ್ವೀಕರಿಸಿ, ಸಮನಾದ ಅಮಿತೋತ್ಸಾಹದಿಂದ ಅಭ್ಯಾಸ ಮಾಡುತ್ತಿದ್ದು, ಅವುಗಳ ಸಮತ್ವದ ಆದ್ಯತೆಯನ್ನು ಪರೀಕ್ಷಿಸಿದರು.

"ಮತಿಭೇದಾತ್ ಮತಭೇದ:" – ಎಂದರೆ, ಜನಗಳಿರುವಷ್ಟೇ ಸಂಖ್ಯೆಯಲ್ಲಿ ಪಂಥಗಳೂ ಇವೆ. ಮನುಷ್ಯರು ಬಹುಶಃ ಮತ್ತು ನಿಶ್ಚಯವಾಗಿ, ತಮ್ಮ ಮಾನಸಿಕ ಸ್ವಭಾವಗಳಲ್ಲಿ ಭಿನ್ನರಾಗಿರುತ್ತಾರೆ. ಆದರೆ, ಎಲ್ಲರೂ ಅನಂತದತ್ತ ಹೋಗುವ ಯಾತ್ರಿಕರೇ ಆಗಿರುತ್ತಾರೆ. ಅವರು ಬೇರೆ ಬೇರೆ ಘಟ್ಟಗಳಿಂದ ಹೊರಡಬಹುದು. ವಿವಿಧ ರಸ್ತೆಗಳಲ್ಲಿ ಪ್ರಯಾಣ ಮಾಡಬಹುದು. ಬೇರೆ ಬೇರೆ ಮುಖಂಡರನ್ನು ಹಿಂಬಾಲಿಸಬಹುದು ಮತ್ತು ವಿವಿಧ ವೇದವಾಕ್ಯಗಳನ್ನು ಜಪಿಸಬಹುದು. ತಮ್ಮ ಏರುವಿಕೆಯಲ್ಲಿ ವಿವಿಧ ಆಧ್ಯಾತ್ಮಿಕ ಹೊರೆಗಳನ್ನೂ ತೆಗೆದುಕೊಂಡು, ಗಾಡಿಗಳಲ್ಲಿ ಹೋಗಬಹುದು. ಆದರೆ, ಒಮ್ಮೆ ಬೆಟ್ಟದ ಶಿಖರವನ್ನು ತಲುಪಿಬಿಟ್ಟರೆ, ಬೋಧಿಸುವವನ ಧ್ವನಿ, ವೇದಶಾಸ್ತ್ರಗಳ ಧ್ವನಿ ಎಲ್ಲವೂ, ಸಮಸ್ತ ಧರ್ಮಗಳ ಗುರಿಯಾಗಿರುವ ಏಕತ್ವದ ಮುಂದೆ ಶಾಶ್ವತ ಮೌನಧಾರಣೆ ಮಾಡುತ್ತವೆ. ಶ್ರೀ ರಾಮಕೃಷ್ಣ ಎಂಬ ಈಗಿನ ಯುಗದ ಬೋಧಕ ಚೈತನ್ಯವು, ಸದಾಕಾಲಕ್ಕೂ ಭಾಗವಾಗಿರುವ ಪ್ರಪಂಚಕ್ಕೆ ಒಂದು ಸಂಯುಕ್ತ ಧರ್ಮದ ಅದ್ಭುತ ಸಂದೇಶವನ್ನು ನೀಡಿದೆ.

* * * *



# ೨. ಸ್ವಾಮಿ ವಿವೇಕಾನಂದರು

ಸ್ವಾಮಿ ವಿವೇಕಾನಂದರ ಹಿರಿಮೆಯನ್ನು ವೀಕ್ಷಿಸಿದ ಹಿಂದಿನ ಶತಮಾನವು ಮಧ್ಯಕಾಲೀನ ಯುಗದ ಅಂತ್ಯವನ್ನು ಮತ್ತು ಆಧುನಿಕ ಯುಗದ ಆರಂಭವನ್ನು ಅರ್ಥಗರ್ಭಿತವಾಗಿಸಿತು. ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ, ವೈಜ್ಞಾನಿಕ ಪ್ರಕೃತಿ ತತ್ವವಾದದ ಹಿರಿಮೆ ಹೆಚ್ಚಿದ್ದು, ದೇವರು ಅಥವಾ ಪ್ರಕೃತಿಯಲ್ಲಿ ಯಾವುದೇ ಆಧ್ಯಾತ್ಮಿಕ ಸಿದ್ಧಾಂತವನ್ನು ಒಪ್ಪದಿದ್ದ, ಒಂದು ವಿಶ್ವದಾದ್ಯಂತದ ಅಜ್ಞೇಯತಾವಾದದ (ಖಚಿತವಾದ ಜ್ಞಾನ ಸಾಧ್ಯವಿಲ್ಲವೆಂದು ನಂಬುವವರ) ಕಾಲವಾಗಿತ್ತು. ವಿದ್ಯಾವಂತರ ಜನಸಮುದಾಯವು ದೇಶದ ಧಾರ್ಮಿಕ ಹಾಗೂ ಸಾಮಾಜಿಕ ಕ್ರಮಬದ್ಧ ರಚನೆಯು ತೃಪ್ತಿಕರವಾಗಿಲ್ಲವೆಂದೂ ಮತ್ತು ಅದಕ್ಕೆ ಯೂರೋಪಿಯನ್ನರ ಮಾದರಿಯಂತೆ ಹೊಸರೂಪ ಕೊಡಬೇಕೆಂದೂ ಪ್ರಯತ್ನಿಸುತ್ತಿದ್ದರು.

ಹತ್ತೊಂಬತ್ತನೆಯ ಶತಮಾನದಲ್ಲಿ ಯೂರೋಪಿಯನ್ನರ ಪ್ರಭಾವ ಎಷ್ಟು ಆಳವಾಗಿ ಬೇರೂರಿತ್ತು ಎಂದರೆ, "ಕಳೆದ ಶತಮಾನದ ಎಲ್ಲಾ ಸುಧಾರಕರೂ ಆಂಗ್ಲೋನ್ಮಾದಿಗಳಾಗಿದ್ದು ಪೂರ್ವ ಹಾಗೂ ಪಶ್ಚಿಮಗಳ ನಡುವೆ ತೂಗಾಡುತ್ತಿದ್ದರು. ಅವರ ಗುಣಗಳೂ, ಪೂರ್ವ ಮತ್ತು ಪಶ್ಚಿಮದ ಸಾಮರಸ್ಯವಿಲ್ಲದ, ಎಂದರೆ ಸಮಾನ ಗುರಿ ಹಾಗೂ ನಂಬಿಕೆಯನ್ನು ಹೊಂದಿದ್ದಂಥ ಜನರ ಗುಂಪನ್ನೇ ಒಟ್ಟುಗೂಡಿಸಿದವು," ಎಂದು ರೊಮೇಯ್ನ್ ರೋಲ್ಯಾಂಡ್, ನ್ಯಾಯವಾಗಿಯೇ ಗಮನಿಸಿದ್ದಾರೆ.

ಅವುಗಳಿಗೆಲ್ಲಾ ಹೊರತಾಗಿದ್ದದ್ದು, ದಕ್ಷಿಣೇಶ್ವರದಲ್ಲಿನ ಸಂತರೊಬ್ಬರು. ಅವರು ಪಾಶ್ಚಾತ್ಯ ಪ್ರಭಾವದಿಂದ ಪೂರ್ತಿಯಾಗಿ ಸ್ವತಂತ್ರರಾಗಿದ್ದರು ಮತ್ತು ಪುರಾತನ ಭಾರತೀಯ ಆದರ್ಶವಾದದ ಪರಿಪೂರ್ಣ ಮೂರ್ತರೂಪರಾಗಿದ್ದರು.

ಒಂದು ಉಚ್ಚ ಕ್ಷತ್ರಿಯ ಸಂಪನ್ನ ಕುಟುಂಬದಿಂದ ಬಂದ ನರೇಂದ್ರನಾಥದತ್ತರು, ೧೮೬೩ ನೆಯ ಇಸವಿ, ಜನವರಿ ಮಾಸದ ೧೨ನೇ ತಾರೀಖಿನ ಸೋಮವಾರದಂದು ಕಲ್ಕತ್ತಾದಲ್ಲಿ ಜನಿಸಿದರು.

ಉನ್ನತ ಶಿಕ್ಷಣ ಪಡೆದಿದ್ದ ಹಾಗೂ ರಾಜಘನತೆಗೆ ತಕ್ಕ ನಡವಳಿಕೆ ಇದ್ದ ಮಹಿಳೆಯಾದ ನರೇಂದ್ರನ ತಾಯಿ, ನರೇಂದ್ರರೇ ಹೇಳಿದಂತೆ, ಅವರ ಜೀವನ

ಹಾಗೂ ಕಾರ್ಯಗಳಿಗೆ, ಸತತ ಸ್ಫೂರ್ತಿಯ ಸೆಲೆಯಾಗಿದ್ದರು. ನರೇಂದ್ರರು ತಮ್ಮ ರಾಜಯೋಗ್ಯ ಸ್ವಭಾವ, ಅಸಾಧಾರಣ ನೆನಪಿನ ಶಕ್ತಿ ಮತ್ತು ನೈತಿಕ ಪಾವಿತ್ರ್ಯ ಎಲ್ಲವನ್ನೂ ಪಾರಂಪರ್ಯವಾಗಿ ಪಡೆದಿದ್ದರು. ಅವರಿಗೆ ಕಲಾತ್ಮಕ ಪ್ರಜ್ಞೆ, ಸಹಾನುಭೂತಿ ಮತ್ತು ಚುರುಕು ಬುದ್ಧಿ ಎಲ್ಲವೂ ತಂದೆಯಿಂದ ಬಂದಿತ್ತು. ಅವರ ತಂದೆ, ಸಾಫಲ್ಯತೆ ಪಡೆದಿದ್ದ ನ್ಯಾಯವಾದಿಯಾಗಿದ್ದು ಡಂಭಾಚಾರ ಮತ್ತು ಆತಂಕಯುಕ್ತ ಜೀವನವನ್ನು ನಡೆಸಿದರು.

ಸಿಸ್ಟರ್ ನಿವೇದಿತ ಅವರು, "ಅವರ ಜೀವನದಲ್ಲಿನ ರಚನೆಗೆ ಮುಂಚಿನ ಪ್ರಭಾವಗಳು, ಮೂರು ಬಾಗುಗಳನ್ನು ಹೊಂದಿದ್ದವು. ಮೊದಲನೆಯದಾಗಿ ಅವರ ಶಿಕ್ಷಣ, ಇಂಗ್ಲಿಷ್ ಮತ್ತು ಸಂಸ್ಕೃತ ಸಾಹಿತ್ಯದ್ದಾಗಿತ್ತು; ಎರಡನೆಯದಾಗಿ, ಅವರ ಗುರುವಿನ ಭವ್ಯ ವ್ಯಕ್ತಿತ್ವವು, ಎಲ್ಲಾ ಪವಿತ್ರ ಬರಹಗಳ ವಸ್ತುವಾಗಿದ್ದ ಜೀವನವನ್ನು ಪ್ರಮಾಣೀಕರಿಸಿ ಸ್ಪಷ್ಟಪಡಿಸಿತ್ತು; ಮತ್ತು ಮೂರನೆಯದಾಗಿ, ಭಾರತ ಮತ್ತು ಭಾರತೀಯರ ಬಗ್ಗೆ, ಅದೊಂದು ಅತಿಶಯವಾದ ಧಾರ್ಮಿಕ ಸೂಕ್ಷ್ಮ ಶರೀರಿ ಎಂಬ ಅವರ ಸ್ವಂತದ ಅರಿವು," ಎಂದು ಹೇಳಿದ್ದಾರೆ.

ಆಂಗ್ಲ ಶಿಕ್ಷಣ ಮತ್ತು ತಾರ್ಕಿಕ ಹಾಗೂ ವೈಜ್ಞಾನಿಕ ಚಿಂತನೆಗಳ ಗಡಿಯ ಪ್ರಭಾವಗಳಿಂದಾಗಿ, ಯುವಕ ನರೇಂದ್ರರು, ತಮ್ಮ ಕಾಲೇಜಿನ ದಿನಗಳಲ್ಲಿ, ಸ್ವಲ್ಪ ಸಮಯದವರೆಗೆ, ದೈವತ್ವದ ಬಗ್ಗೆ ಅಜ್ಞರಾಗಿದ್ದರು.

ಅವರಿಗೆ ಆಧ್ಯಾತ್ಮಿಕ ಉಪದೇಶಗಳ ಬಗ್ಗೆಯ ಆಧಾರವನ್ನು ಪರೀಕ್ಷಿಸಬೇಕು ಎಂಬ ತೀಕ್ಷ್ಣ ಆಸೆ ಇತ್ತು. ಅವರು, "ನೀವು ಭಗವಂತನನ್ನು ನೋಡಿದ್ದೀರೇನು?" ಎಂಬ ಪ್ರಶ್ನೆಯನ್ನು ಮುಂದಿಟ್ಟು, ಅನೇಕ ಮಂದಿ ಧಾರ್ಮಿಕ ಗುರುಗಳನ್ನು ಎದುರಿಸಿದ್ದರು. ಆದರೆ ಅವರಿತ್ತ ವಿವರಣೆ ಅಥವಾ ತಾರ್ಕಿಕ ಪ್ರತಿಪಾದನೆಯಿಂದ ತೃಪ್ತರಾಗದೆ, ಭಗವಂತನನ್ನು ಮುಖಾಮುಖಿಯಾಗಿ ಯಾರು ಕಂಡಿರುವರೋ ಅವರನ್ನು ಹುಡುಕುತ್ತಿದ್ದರು. ಶ್ರೀ ರಾಮಕೃಷ್ಣರಲ್ಲಿ ಅಂಥ ವ್ಯಕ್ತಿಯನ್ನು ಕಂಡುಕೊಂಡಾಗ ಅವರು, "ಹೌದು, ನನ್ನ ಕಂದ, ನಿನ್ನನ್ನು ನಾನು ಕಾಣುತ್ತಿರುವಂತೆಯೇ, ಭಗವಂತನನ್ನು ಕಂಡಿದ್ದೇನೆ, ಆದರೆ ಇನ್ನೂ ತೀವ್ರ ಭಾವಕ್ಕೊಳಗಾಗಿ, ಕಂಡೆ. ನಾನು ಭಗವಂತನೊಂದಿಗೆ ಮಾತನಾಡಿದೆ. ಆದರೆ ಈಗ ನಿನ್ನೊಂದಿಗೆ ನಾನು ಮಾತನಾಡುತ್ತಿರುವುದಕ್ಕಿಂತಲೂ ಇನ್ನೂ ಹೆಚ್ಚಿನ ಆತ್ಮೀಯತೆಯಿಂದ ನಾನು ಭಗವಂತನೊಂದಿಗೆ ಮಾತನಾಡಿದ್ದೇನೆ," ಎಂದರು.

ಭಗವಂತನ ಬಗ್ಗೆಯ ನಂಬಿಕೆಯನ್ನು ಕುರಿತು, ಚಿಕಾಗೋ ಪಾರ್ಲಿಮೆಂಟ್ ಆಫ್ ರಿಲಿಜನ್ಸಿನಲ್ಲಿ ಸ್ವಾಮಿ ವಿವೇಕಾನಂದರು, "ಆಧ್ಯಾತ್ಮಿಕತೆಯ ಸ್ಥಿತಿ ಏನೇ ಆಗಿರಲಿ, ತಾತ್ವಿಕ ಸಿದ್ಧಾಂತದ ಸ್ಥಿತಿ ಏನೇ ಆಗಿರಲಿ, ಎಲ್ಲಿಯವರೆಗೆ, ಮಾನವನ ಹೃದಯದಲ್ಲಿ ದೌರ್ಬಲ್ಯ ಅಥವಾ ನಡತೆಯಲ್ಲಿನ ದೋಷ ಎಂಬುದೇನಿದೆಯೋ,



ಎಲ್ಲಿಯವರೆಗೆ ಮನುಷ್ಯನ ಪ್ರತಿಯೊಂದು ದೌರ್ಬಲ್ಯದಲ್ಲಿಯೂ ಒಂದೊಂದು ಆಕ್ರಂದನ ಹೃದಯದಿಂದ ಆಚೆಗೆ ಹೋಗುತ್ತದೆಯೋ, ಆಗೆಲ್ಲ ಭಗವಂತನ ಬಗ್ಗೆ ಒಂದು ನಂಬಿಕೆ ಹುಟ್ಟುತ್ತದೆ", ಎಂದರು.

ನರೇಂದ್ರನಾಥ ಮತ್ತು ಶ್ರೀ ರಾಮಕೃಷ್ಣರ ಸಂಗಮದಲ್ಲಿ, ಒಬ್ಬರು ಕೌತುಕ ಪ್ರಕೃತಿ, ತೀವ್ರಾಸಕ್ತಿ, ಅಜ್ಞೇಯತಾವಾದ ಮತ್ತು ಆಧುನಿಕ ಯುಗದ ಅಪನಂಬಿಕೆಗಳನ್ನು ಪ್ರತಿನಿಧಿಸುತ್ತಿದ್ದರೆ, ಮತ್ತೊಬ್ಬರು, ಮೂರು ಯುಗಗಳ ಆಧ್ಯಾತ್ಮಿಕ ಸಂಸ್ಕೃತಿಯ ಪ್ರತೀಕವಾಗಿದ್ದು, ಅಗಾಧವಾದ ಅಂತಸ್ಸತ್ವ ಹೊಂದಿ ಭಾವಗರ್ಭಿತರಾಗಿದ್ದರು. ಈ ಅಪ್ಪಳಿಕೆಯು, ದಿವ್ಯತ್ವದ ಒಕ್ಕೂಟದಲ್ಲಿ ಉಚ್ಛ್ರಾಯ ಸ್ಥಿತಿ ತಲುಪಿತು. ಎಂದರೆ, ಆಧುನಿಕ ಭಾರತವು ಪುರಾತನ ಭಾರತದೊಂದಿಗೆ ಪುನರ್ಮಿಲನ ಪಡೆಯಿತು ಮತ್ತು ಸ್ವಾಮಿ ವಿವೇಕಾನಂದರ ನಿರ್ಮಾಣದಲ್ಲಿ ಕೊನೆಗೊಂಡಿತು. ಸ್ವಾಮಿ ವಿವೇಕಾನಂದರ ವ್ಯಕ್ತಿತ್ವವು, ದಕ್ಷಿಣೇಶ್ವರದ ವೃದ್ಧ ಸಂನ್ಯಾಸಿಯ ಮತ್ತು ಕಾಲೇಜಿನ ಯುವಕ ವಿದ್ಯಾರ್ಥಿ ನರೇಂದ್ರ ಈ ಇಬ್ಬರ ಬದುಕುಗಳ ಸಮ್ಮಿಶ್ರಣವನ್ನು ಪ್ರತಿಬಿಂಬಿಸುತ್ತದೆ.

ದಯಾಪೂರ್ಣರಾಗಿದ್ದು, ಎಡೆಬಿಡದೆ ಕಾವಲಿದ್ದ ಶ್ರೀ ರಾಮಕೃಷ್ಣರ ಗಮನದಲ್ಲಿ, ನರೇಂದ್ರರು ಹಿಂದೂ ಧರ್ಮಗ್ರಂಥಗಳಲ್ಲಿನ ಉಪದೇಶಗಳ ಪೂರ್ಣ ಪ್ರಾಧಾನ್ಯತೆಯನ್ನೂ ಮತ್ತು ಯೋಗ್ಯ ನಡೆವಳಿಕೆಗಳ ಬೋಧನ ಶಾಖೆಗಳ ಸಾರ್ಥಕತೆಯನ್ನೂ ಅರಿತುಕೊಂಡರು.

ಗುರುಗಳು ೧೮೮೬ನೇ ಆಗಸ್ಟ್‌ನಲ್ಲಿ ನಿರ್ವಾಣ ಹೊಂದಿದ ನಂತರ, ಶಿಷ್ಯರು, ನರೇಂದ್ರರ ಮುಖಂಡತ್ವದಲ್ಲಿ, ಬಾರಾನಾಗೋರ್ ಎಂಬಲ್ಲಿ ಒಂದು ಮಠವನ್ನು ಸ್ಥಾಪಿಸಿ, ತಮ್ಮ ಗುರುದೇವರ ಉಪದೇಶಗಳ ಸಾರ್ಥಕತೆಗಾಗಿ, ತಮ್ಮ ಜೀವನಗಳನ್ನು ಮುಡುಪಾಗಿಡಲು, ಸಂನ್ಯಾಸಿಗಳ ಒಂದು ವ್ಯವಸ್ಥೆಯನ್ನು ಮಾಡಿಕೊಂಡರು.

ಸ್ವಾಮಿ ವಿವೇಕಾನಂದರು ಎರಡು ವರ್ಷಗಳೊಳಗೇ ಮಠದಿಂದ ನಿರ್ಗಮಿಸಿ, ಮುಂದಿನ ಆರು ವರ್ಷಗಳನ್ನು ಪರಿವ್ರಾಜಕರಾಗಿ ಕಳೆಯಲೆಂದು, ಹಿಮಾಲಯದಿಂದ ಕನ್ಯಾಕುಮಾರಿವರೆಗೆ ಸಂಚರಿಸಿದರು. ಆ ಸಮಯದ ಅವರ ಸುತ್ತಾಟಗಳಿಂದ ಅವರಿಗೆ, ದೇಶದಲ್ಲಿನ ವಿವಿಧ ಸನ್ನಿವೇಶಗಳಲ್ಲಿ ಪ್ರಚಲಿತವಾಗಿದ್ದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಆಮೂಲಾಗ್ರ ಅರಿವುಂಟಾಯಿತು. ಅದರಿಂದ ದೇಶದ ನೈತಿಕ ಸುಧಾರಣೆಯ ಕೆಲಸವನ್ನು ಕೈಗೊಳ್ಳುವುದಂತೂ, ಬೆರಗುಗೊಳಿಸುವ ರೀತಿಯಲ್ಲಿ ಅವರಿಗೆ ಹೊಂದಿಕೊಂಡಿತು. ಇದು ಅವರು ಅಭಿನಯಿಸಬೇಕಾಗಿದ್ದ ಧರ್ಮೋಪದೇಶಕ, ದೈವಜ್ಞ, ದೇಶಪ್ರೇಮಿ ಮುಂತಾದ ಸಂಕೀರ್ಣ ಪಾತ್ರಗಳಿಗೆ ಸಿದ್ಧತೆಯಾಗಿತ್ತು.

ಸ್ವಾಮಿ ವಿವೇಕಾನಂದರು, ತಮ್ಮ ತಿರುಗಾಟದ ಅವಧಿಯಲ್ಲಿ ತಿಲಕರೊಂದಿಗೆ ಪುಣೆಯಲ್ಲಿದ್ದರು. ಆಗ ನಡೆದಿದ್ದ ಅವರ ನಡುವಿನ ಮಾತುಕತೆಗಳಲ್ಲಿ ತಿಲಕರು ರಾಷ್ಟ್ರೀಯತೆಗಾಗಿ ರಾಜಕೀಯದ ಕ್ಷೇತ್ರದಲ್ಲಿ ಕೆಲಸ ಮಾಡಬೇಕೆಂದೂ ಸ್ವಾಮಿ ವಿವೇಕಾನಂದರು ಧರ್ಮಶ್ರದ್ಧೆಯ ಕ್ಷೇತ್ರದಲ್ಲಿ ರಾಷ್ಟ್ರೀಯ ಭಾವನೆಗಾಗಿ ಕೆಲಸಮಾಡಬೇಕೆಂದು ಒಪ್ಪಂದವಾಗಿತ್ತು, ಎನ್ನಲಾಗಿದೆ. ತಿಲಕರು ಶಬ್ದಮಾಡುವ ಕಾರ್ಯಸ್ಥಳವು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಆಗಿದ್ದಾಗ, ಸ್ವಾಮೀಜಿಯವರ ಕಾರ್ಯಾಗಾರವು ಧರ್ಮಶ್ರದ್ಧೆಯದಾಗಿತ್ತು.

ರೊಮ್ಯೆನ್ ರೋಲ್ಯಾಂಡರು, "ತಾವು ಪರಿವ್ರಾಜಕರಾಗಿದ್ದ ದಿನಗಳಲ್ಲಿ ಸ್ವಾಮಿ ವಿವೇಕಾನಂದರು ತಮ್ಮನ್ನು ತಾವು ಕ್ರಮೇಣ, ಭಾರತದ ಧರ್ಮಪ್ರಜ್ಞೆ ಅದರ ಐಕ್ಯತೆ ಮತ್ತು ವಿಧಿಯಾಗಿಸಿಕೊಂಡರು. ಎಲ್ಲವೂ ಅವರಲ್ಲಿ ಮೂರ್ತೀಭವಿಸಿದ್ದವು ಮತ್ತು ಪ್ರಪಂಚವು ಅವೆಲ್ಲವನ್ನೂ ವಿವೇಕಾನಂದರಲ್ಲಿ ಕಂಡುಕೊಂಡಿತು" ಎಂದು ಹೇಳಿದ್ದಾರೆ.

೧೮೯೩ರಲ್ಲಿ ತಮ್ಮ ಭಕ್ತರ ಕೋರಿಕೆಯ ಮೇರೆಗೆ ಮತ್ತು ಆಂತರ್ಯದ ಕರೆಗೆ ಪ್ರತಿವರ್ತಿಸುತ್ತಾ, ಸ್ವಾಮಿ ವಿವೇಕಾನಂದರು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾಕ್ಕೆ ಹೊರಟರು. ಅಲ್ಲಿನ ಪಾರ್ಲಿಮೆಂಟ್ ಆಫ್ ರಿಲಿಜನ್ಸ್‌ನಲ್ಲಿ ತಮ್ಮ ಅಸಾಧಾರಣ ಯಶಸ್ಸನ್ನು ಗಳಿಸಿದ ನಂತರ, ಅವರು ಆ ದೇಶದಲ್ಲೆಲ್ಲಾ ಓಡಾಡಿ, ವಿಶ್ವವ್ಯಾಪಿ ಧರ್ಮವಾದ ವೇದಾಂತಗಳ ದಿವ್ಯಸಂದೇಶಗಳನ್ನು ನೀಡಿದರಲ್ಲದೆ, ಅಲ್ಲಿದ್ದ ಮೂರು ವರ್ಷಗಳ ಅವಧಿಯಲ್ಲಿ ಅವರು ಹಿಂದೂ ಪವಿತ್ರ ಗ್ರಂಥಗಳಲ್ಲಿನ ಒಗ್ಗೂಡಿಕೆಯ ಸಿದ್ಧಾಂತಗಳನ್ನು ಉಪದೇಶಿಸುತ್ತಿದ್ದರು. ಇಂಗ್ಲೆಂಡ್ ಮತ್ತು ಭೂಖಂಡವನ್ನೆಲ್ಲಾ ಸಂದರ್ಶಿಸಿದ ನಂತರ, ೧೮೯೭ನೆಯ ಇಸವಿಯ ಪ್ರಾರಂಭದಲ್ಲೇ ಅವರು ಭಾರತಕ್ಕೆ ಹಿಂದಿರುಗಿದಾಗ, 'ಮಹಾಪುರುಷರು' ಎಂದು ಸ್ವಾಗತಿಸಲ್ಪಟ್ಟರು.

ಹೊರದೇಶದಲ್ಲಿನ ಅವರ ಜಯಸಾಧನೆಯು, ಅವರ ಹಿರಿಮೆಯ ಬಗ್ಗೆ ಸ್ವಂತ ದೇಶದವರ ಕಣ್ಣು ತೆರೆಸಿತು. ಕೊಲಂಬೋದಿಂದ ಆಲ್ಮೋರಾವರೆಗಿನ ಅವರ ಮಹತ್ಸಾಧನೆಯ ಮುನ್ನಡೆಯಲ್ಲಿ, ಅವರು ತಮ್ಮ ಭಾಷಣಗಳಲ್ಲಿ ವಿತರಿಸಿದ ದಿವ್ಯ ಸಂದೇಶಗಳನ್ನು ಸ್ವೀಕರಿಸಲು ಭಾರತವು ಸಿದ್ಧವಾಗಿತ್ತು. ಅವರು ರಾಷ್ಟ್ರೀಯ ಅಧಃಪತನದ ಕಾರಣಗಳನ್ನು ಬೆರಳಿಟ್ಟು ತೋರಿಸಿ, ಅವುಗಳಿಗೆ ಪರಿಹಾರೋಪಾಯಗಳನ್ನು ಸೂಚಿಸಿದರು. ಅವರು ತಮ್ಮ ರಾಷ್ಟ್ರದ ಜನತೆಗೆ ದೇಶದ ಹಿರಿಮೆಯ ಅರಿವನ್ನುಂಟುಮಾಡಲು ಹವಣಿಸುತ್ತಿದ್ದು ಆ ಹಿರಿಮೆಯ ಅಂತರಾತ್ಮವೇ ಆಧ್ಯಾತ್ಮಿಕತೆ ಎಂದರು. ಜನರಿಗೆ, ಅವರ ಹಿಂದಿನ ಪೀಳಿಗೆಯವರು ಬಿಟ್ಟುಹೋಗಿದ್ದ ಶಾಶ್ವತ ಸತ್ಯಗಳನ್ನು ಬೋಧಿಸಿದರು ; ಮತ್ತು ಅವರಲ್ಲಿದ್ದ ಜಡತ್ವವನ್ನು ಝಾಡಿಸಿ ತೊಲಗಿಸಿಕೊಂಡು, ವಸ್ತುಗಳ ಅಧ್ಯಯನದ ಅರಿವಿನಿಂದ ತಮ್ಮನ್ನು ತಾವು ಪುನಯೌವನಗೊಳಿಸಿಕೊಳ್ಳಬೇಕೆಂದು ಒತ್ತಾಯಿಸಿದರು.



ಅವಿಚ್ಛಿನ್ನವಾದ ಶ್ರಮದಾಯಕ ಕಾರ್ಯವು, ಸ್ವಾಮಿ ವಿವೇಕಾನಂದರ ಆರೋಗ್ಯವನ್ನು ನುಚ್ಚುನೂರಾಗಿಸಿತು. ಅದನ್ನು ಮೂಲರೂಪಕ್ಕೆ ತಂದುಕೊಳ್ಳುವ ದೃಷ್ಟಿಯಿಂದ, ಅವರು, ೧೮೯೯ರಲ್ಲಿ ಪಾಶ್ಚಾತ್ಯ ದೇಶಗಳಿಗೆ ಎರಡನೆಯ ಬಾರಿ ಪ್ರಯಾಣ ಮಾಡಿದರಾದರೂ, ಒಂದೂವರೆ ವರ್ಷಗಳ ನಂತರವೇ ವಾಪಸ್ಸಾದರು.

ನಂತರ ಪೂರ್ವ ಬಂಗಾಳ ಮತ್ತು ಅಸ್ಸಾಂಗಳಿಗೆ ಚಿಕ್ಕ ಪ್ರವಾಸ ಕೈಗೊಂಡು, ಮುಗಿಸಿ, ೧೯೦೨ ನೇ ಇಸವಿಯ ಜುಲೈ ತಿಂಗಳ ನಾಲ್ಕರಂದು ಬೇಲೂರು ಮಠದಲ್ಲಿ ತಮ್ಮ ಕೊನೆಯ ಉಸಿರನ್ನು ಎಳೆಯುವವರೆಗೂ, ಅವರು ರಾಮಕೃಷ್ಣ ಮಿಷನ್ನಿನ ಸಂಸ್ಥೆಯ ಸಂಘಟನೆ ಕೇಂದ್ರೀಕರಣದಲ್ಲಿಯೇ ಮಗ್ನರಾಗಿದ್ದರು.

೨

ಇಲ್ಲಿ ಸ್ವಾಮಿ ವಿವೇಕಾನಂದರ ಜೀವನದ ಕೆಲವು ಕುತೂಹಲಕಾರಕ ಉಲ್ಲೇಖಗಳಿದ್ದು, ಅವು ಅವರ ಗುಣದ ಕೆಲವು ಅಂಶಗಳ ಬಗ್ಗೆ, ಪ್ರಕಾಶ ಬೀರುತ್ತವೆ ಅಥವಾ ಯಾವುದಾದರೂ ಉತ್ತಮ ಸತ್ಯತೆಯನ್ನು ವಿವರಿಸಿ, ಮನದಟ್ಟು ಮಾಡಿಸುತ್ತವೆ.

ಉತ್ತರ ಭಾರತದಲ್ಲಿ ಪ್ರಯಾಣ ಮಾಡುತ್ತಿದ್ದಾಗ, ಮೂರನೆಯ ದರ್ಜೆಯ ಟಿಕೆಟ್ ಮತ್ತು ಕಾವಿ ಮೇಲಂಗಿ ಬಿಟ್ಟು, ಮತ್ತೇನನ್ನೂ ಹೊಂದಿರದ ಮಧ್ಯವಯಸ್ಸಿನ ಉತ್ತರ ಭಾರತೀಯ ಬನಿಯನೊಬ್ಬನು, ಸಂನ್ಯಾಸವನ್ನು ಒಪ್ಪದೆ, ಹಣ ಸಂಪಾದನೆ ಮತ್ತು ಪ್ರಪಂಚವನ್ನು ತ್ಯಜಿಸಲು ಒಪ್ಪದೆ, ವಿವೇಕಾನಂದರನ್ನು ದಿನಪೂರ್ತಿ ಪೀಡಿಸುತ್ತಿದ್ದನು. ಏಕೆಂದರೆ ವಿವೇಕಾನಂದರು ದಿನಪೂರ್ತಿ ಉಪವಾಸ ಇದ್ದು, ಸಂನ್ಯಾಸಿಗಳು ಊಟವಿಲ್ಲದೆ ಕೊರಗುವುದೇ ಸರಿ ಎಂದು ಸಮರ್ಥಿಸುತ್ತಿದ್ದರು. ತಮ್ಮಲ್ಲಿ ಹಣವಿದ್ದುದರಿಂದ ಅವರು ಒಳ್ಳೆಯ ಕೇಕ್‌ಗಳನ್ನು, ಸಿಹಿತಿಂಡಿಗಳನ್ನು ತಿಂದು ತೇಗಿದ್ದರೆಂದು ಇತ್ತು, ಬನಿಯನ ಹೇಳಿಕೆ. ಜೊತೆಗೆ ಹಣ ಸಂಪಾದನೆಯನ್ನು ತಲೆಗೇ ಹಚ್ಚಿಕೊಳ್ಳದಿದ್ದಲ್ಲಿ, ಸಂನ್ಯಾಸಿಯು, ಒಣಗಿದ ಗಂಟಲು, ಖಾಲಿಹೊಟ್ಟೆ ಮತ್ತು ಕುಳಿತುಕೊಳ್ಳಲು ಬರಿದಾದ ನೆಲ, ಇವುಗಳಿಂದಲೇ ತೃಪ್ತನಾಗಿ ವಿಶ್ರಮಿಸಬೇಕು ಎಂದರು. ಅವನತ್ತ ವಿವೇಕಾನಂದರು ತಾಳ್ಮೆಯಿಂದ ನೋಡಿದರು. ಆಗ ಮನುಷ್ಯನೊಬ್ಬ ತಲೆಯ ಮೇಲೆ ಒಂದು ದೊಡ್ಡ ಹೊರೆ ಹೊತ್ತಿದ್ದು, ಒಂದು ಕೈಯಲ್ಲಿ ಮಡಕೆ, ಮತ್ತೊಂದರಲ್ಲಿ ಜಮಖಾನವನ್ನೂ ಹಿಡಿದು ಬಂದನು. ಜಮಖಾನವನ್ನು ಹಾಸಿ, ಸಾಮಾನುಗಳನ್ನೆಲ್ಲಾ ಜೋಡಿಸಿ, ವಿವೇಕಾನಂದರ ಬಳಿಗೆ ಬಂದು ಭೋಜನವನ್ನು ಸ್ವೀಕರಿಸಬೇಕೆಂದು ಬೇಡಿಕೊಂಡನು. ಸ್ವಾಮಿಗಳು ತಾವು ಅವನನ್ನೆಂದೂ ನೋಡಿಲ್ಲವೆಂದೂ ಮತ್ತು ಅವನು ಏನೋ ತಪ್ಪು ತಿಳಿದಿರುವನೆಂದೂ ಹೇಳಿದರು.

ಆ ಮನುಷ್ಯನು, "ನಾನು ನೋಡಿರುವ ಸ್ವಾಮಿಗಳು ನೀವೇ," ಎಂದನು.

ಸ್ವಾಮಿಗಳು ಆಶ್ಚರ್ಯವನ್ನು ವ್ಯಕ್ತಪಡಿಸಿದಾಗ, ಆತನು, "ನಾನು ಮಿಠಾಯಿಗಳನ್ನು ಮಾಡುವವನು, ಮಧ್ಯಾಹ್ನ ನಾನು ಊಟಮಾಡಿ ಮಲಗಿದ್ದಾಗ, ಶ್ರೀ ರಾಮರು ತಮ್ಮನ್ನು ತೋರಿಸಿ, ತಾವು ನಿನ್ನೆಯಿಂದಲೂ ಏನನ್ನೂ ತಿಂದೇ ಇಲ್ಲವೆಂದೂ, ಅದಕ್ಕಾಗಿ ಅವರಿಗೆ ಸಂಕಟವಾಗುತ್ತಿದೆಯೆಂದೂ ತಿಳಿಸಿದರು. ಜೊತೆಗೆ ನನ್ನನ್ನು ಕುರಿತು, ನೀನೇ ಅವರಿಗೆ ಕೂಡಲೆ ರೊಟ್ಟಿಗಳನ್ನು ಮಾಡಿಕೊಡು" ಎಂದರು. ಅದನ್ನು ಕೇವಲ ಕನಸೆಂದು ನೆನೆದು, ನಾನು ಮತ್ತೆ ನಿದ್ದೆ ಹೋದೆ. ಆಗಂತೂ ಶ್ರೀರಾಮರು ನನ್ನನ್ನು ಹಿಡಿದು ಅಲ್ಲಾಡಿಸಿ ಎಬ್ಬಿಸಿ, ತಕ್ಷಣ ತಾವು ಹೇಳಿದಂತೆ ಮಾಡೆಂದರು. ನಾನು ತಕ್ಷಣ ಕೆಲವು ರೊಟ್ಟಿಗಳನ್ನು ಮಾಡಿದೆ. ಬನ್ನಿ ದಯವಿಟ್ಟು ಊಟಮಾಡಿ" ಎಂದು ಬೇಡಿದನು.

ನಂತರ ಪ್ರೀತಿ ಮತ್ತು ಕೃತಜ್ಞತೆಗಳನ್ನು ಮುಖಭಾವದಲ್ಲಿ ಸೂಸುತ್ತಾ ಸ್ವಾಮಿಗಳು, ಆ ಸತ್ಪುರುಷ ಹೇಳಿದಂತೆ ಮಾಡಿದರು. ಅದನ್ನೆಲ್ಲಾ ನೋಡುತ್ತಿದ್ದ ಬನಿಯ ವೇದಾಂತಿಯು ವಿಸ್ಮಯಗೊಂಡು, ಅವರನ್ನೇ ಶೂನ್ಯವಾಗಿ ದೃಷ್ಟಿಸುತ್ತಾ ನೆಲಕ್ಕಂಟಿ ನಿಂತನು.

ಇಂಥದ್ದೇ ಪ್ರಕರಣವೊಂದು, ಶ್ರೇಷ್ಠ ಶಂಕರಾಚಾರ್ಯರ ಜೀವನದಲ್ಲಿಯೂ ನಡೆದಿದ್ದುದು, ಜ್ಞಾಪಕಕ್ಕೆ ಬರುತ್ತದೆ.

ರಾಜಪುತಾನಾದಲ್ಲಿ ಖೇತ್ರಿ ಮಹಾರಾಜನ ಬಳಿ ತಮ್ಮ ಪರಿವ್ರಾಜಕ ದಿನಗಳಲ್ಲಿ ತಂಗಿದ್ದರು. ಒಮ್ಮೆ ಸ್ವಾಮಿ ವಿವೇಕಾನಂದರು ರಾಜಕುಮಾರ ಮತ್ತು ಇತರರೊಂದಿಗಿದ್ದಾಗ, ನೃತ್ಯಗಾರ್ತಿಯೊಬ್ಬಳು ಬಂದಳು. ಅವಳನ್ನು ಕಂಡು ಸಂನ್ಯಾಸಿಗಳು ಹೊರಕ್ಕೆ ಹೊರಟರು. ಆದರೆ, ರಾಜಕುಮಾರನು ಬೇಡಿಕೊಂಡನೆಂದು ಹಿಂದುಳಿದರು. ಆ ಹೆಂಗಸು ಮತ್ತು ಅವಳ ಹಾಡು, ಅವರಿಗೆ ನಮ್ರತೆಯ ಪಾಠವನ್ನು ಕಲಿಸಿತಲ್ಲದೆ, ಜೊತೆಗೆ ಎಲ್ಲವೂ ಬ್ರಹ್ಮನೇ, ಎಲ್ಲಾ ಜೀವಿಗಳಲ್ಲಿಯೂ ದಿವ್ಯತ್ವವಿದೆ ಎಂಬ ಸತ್ಯವನ್ನು ದೃಷ್ಟಾಂತರೂಪದಲ್ಲಿ ಕಲಿಸಿತು :

"ಹೇ ದೇವ, ನೋಡಬೇಡ ನನ್ನ ಕೆಟ್ಟ ಗುಣಗಳನ್ನು,
ನಿನ್ನ ಹೆಸರು, ಹೇ ದೇವ, ಏಕಪ್ರಕಾರದ ದೃಷ್ಟಿ ಶಕ್ತಿ ಇರುವಂಥದ್ದು."
ನಮ್ಮಿಬ್ಬರನ್ನೂ ಅದೇ ಬ್ರಹ್ಮನಾಗಿಸು.
ಒಂದು ಚೂರು, ಕಬ್ಬಿಣ ವಿಗ್ರಹವಾಗಿ ದೇಗುಲದಲ್ಲಿದೆ
ಮತ್ತೊಂದು ಕಟುಕನ ಕೈಯ್ಯಲ್ಲಿನ ಕತ್ತಿಯಾಗಿದೆ.
ಆದರೆ, ಅವೆರಡೂ ತತ್ವನಿಷ್ಠರ ಕಲ್ಲನ್ನು ಮುಟ್ಟಿದಾಗ
ಒಟ್ಟಿಗೆ ಚಿನ್ನದ್ದಾಗಿಬಿಡುತ್ತವೆ !
ಆದ್ದರಿಂದ ಹೇ ದೇವ, ನನ್ನ ಕೆಟ್ಟಗುಣಗಳತ್ತ ಕಣ್ಣು ಹಾಯಿಸಬೇಡ !
ಪವಿತ್ರ ಯಮುನೆಯಲ್ಲಿ ಒಂದು ತೊಟ್ಟು ನೀರಿದೆ ಮತ್ತೊಂದು ಹನಿ ನೀರು ಬದಿಯ



ಮೋರಿಯಲ್ಲಿದೆ ಕೊಳಕಾಗಿ, ಆದರೆ ಅವೆರಡೂ ಗಂಗೆಗೆ ಬಿದ್ದಾಗ, ಪವಿತ್ರವಾಗುತ್ತವೆ ಒಂದೇ ಸಮಯದಲ್ಲಿ, ಒಟ್ಟಿಗೆ. ಆದ್ದರಿಂದ ದೇವ, ನನ್ನ ಕೆಟ್ಟ ಗುಣಗಳನ್ನು ಕಡೆಗಾಣಿಸು !"

ಸ್ವಾಮೀಜಿಯವರು ಪೂರ್ಣವಾಗಿ ಭಾವಪರವಶರಾದರು. ಆ ವಿನಯ ಸಂಪನ್ನವಾದ ಹಾಡಿನಲ್ಲಿ ವ್ಯಕ್ತವಾದ ಗಾಢ ಭರವಸೆಯನ್ನು, ಅವರು ಜೀವನ ಪೂರ್ತಿ ಮರೆಯಲಿಲ್ಲ. ಎಷ್ಟೋ ವರ್ಷಗಳ ನಂತರ, ಅವರು ಅದನ್ನು ಭಾವುಕತೆಯಿಂದ ಜ್ಞಾಪಿಸಿಕೊಂಡರು.

ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಎಂಬ ಮೂರು ದಾರ್ಶನಿಕ ಪದ್ಧತಿಗಳು, ಆತ್ಮಕ್ಕೆ ಮೂರು ವಿವಿಧ ರೀತಿಗಳ ಉತ್ಕೃಷ್ಟ ಹಾಗೂ ಪರಿಪೂರ್ಣ ಸಮರ್ಪಣೆಗಳಾಗಿ ಪರಿಗಣಿಸಲ್ಪಟ್ಟಿದ್ದವು. ಈ ಪದ್ಧತಿಗಳಲ್ಲಿ ಸ್ನೇಹ ಭಾವ ಮೂಡಿಸಿಕೊಳ್ಳುವ ಪ್ರಯತ್ನಗಳೇನೂ ನಡೆದಿರಲಿಲ್ಲ. ೧೮೯೭ರಲ್ಲಿ ಭಾರತಕ್ಕೆ ಹಿಂದಿರುಗಿದ ನಂತರ, ಸ್ವಾಮಿ ವಿವೇಕಾನಂದರು, ಮದ್ರಾಸಿನಲ್ಲಿ ಧೈರ್ಯವಾಗಿ ನಿಂತು, "ದ್ವೈತ ಮತ್ತು ವಿಶಿಷ್ಟಾದ್ವೈತದ ಕಟ್ಟಕಡೆಯ ಅರಿವುಗಳೂ ಸಹ, ಹಂತಗಳೇ ಆಗಿದ್ದು, ಅದ್ವೈತದ ಹಾದಿಗೇ ಬಂದು ಸೇರುವಂಥವು ಮತ್ತು ಅಂತಿಮ ಸುಖವು ಎಲ್ಲಕ್ಕೂ ಒಂದೇ ರೀತಿ ಇದ್ದು, ಎರಡನೆಯದೇ ಇಲ್ಲದಂಥ ಏಕತ್ವದಲ್ಲಿ ಐಕ್ಯವಾಗುವುದೇ ಆಗಿದೆ" ಎಂದು ಕೇಳಿಕೊಂಡರು.

ಪ್ರಶ್ನೆಗಳ ತರಗತಿಯೊಂದರಲ್ಲಿ ಅವರನ್ನು ಯಾರೋ, "ಅದೇ ಸತ್ಯವಾಗಿದ್ದರೆ, ಮೊದಲಿನ ಗುರುಗಳು ಯಾರೂ ಇದನ್ನು ಹೇಳಿಯೇ ಇರಲಿಲ್ಲವೇಕೆ?" ಎಂದು ಪ್ರಶ್ನಿಸಿದರು. ಆಗ ಸ್ವಾಮೀಜಿ, "ನಾನು ಇದಕ್ಕಾಗಿ ಹುಟ್ಟಿರುವುದರಿಂದ, ಅದನ್ನು ನನಗಾಗಿಯೇ ಬಿಟ್ಟರು" ಎಂದು ಧೈರ್ಯವಾಗಿ ಹೇಳಿದಾಗ, ನೆರೆದಿದ್ದ ಶ್ರೇಷ್ಠರ ಸಮೂಹವು ಚಕಿತಗೊಂಡಿತು.

ಅಲ್ಮೋರಾದಲ್ಲಿ ವಯಸ್ಕರೊಬ್ಬರು ಎದ್ದು ನಿಂತು, ಸ್ವಾಮಿ ವಿವೇಕಾನಂದರನ್ನು ಕರ್ಮದ ಬಗ್ಗೆ ಪ್ರಶ್ನಿಸುತ್ತಾ, "ಬಲಿಷ್ಠರು, ನಿಶ್ಶಕ್ತರನ್ನು ಶೋಷಿಸುವುದನ್ನು ನೋಡುವುದೇ ಕರ್ಮವಾಗಿರುವಂಥವರು ಏನು ಮಾಡಬೇಕು?" ಎಂದರು. ಅವರು ಆಶ್ಚರ್ಯಕರವಾದ ಕ್ರೋಧವನ್ನು ಪ್ರಕಟಿಸುತ್ತಾ, "ಏಕೆ? ಆಗ ಬಲಶಾಲಿಗಳನ್ನು ಹೊಡೆಯಬೇಕಷ್ಟೇ. ನೀವು ಈ ಕರ್ಮದಲ್ಲಿನ ನಿಮ್ಮ ಪಾತ್ರವನ್ನೇ ಮರೆತಿರೇನು? ನಿಮಗೆ, ಪ್ರತಿಭಟಿಸುವ ಹಕ್ಕಂತೂ ಸದಾಕಾಲಕ್ಕೂ ಇದೆ," ಎಂದರು.

೩

ಭಾರತದಾದ್ಯಂತ ಸಾಕಷ್ಟು ಪ್ರಯಾಣಮಾಡಿದ್ದ ಸ್ವಾಮಿ ವಿವೇಕಾನಂದರಿಗೆ, ಅಲ್ಲಿ ಚಾಲ್ತಿಯಲ್ಲಿದ್ದ ಪರಿಸ್ಥಿತಿಗಳೆಲ್ಲದರ ಪರಿಚಯ ಬಹಳ ಚೆನ್ನಾಗಿತ್ತು. ನಮ್ಮ ರಾಷ್ಟ್ರದ ಅವನತಿಗೆ ದಾರಿ ತೋರಿಸುವ ಕಾರಣಗಳನ್ನು ಗುರುತಿಸುವುದರಲ್ಲಿ ಅವರು ವಿಳಂಬ ಮಾಡಲಿಲ್ಲ. ನಿಜವಾದ ಮತದೊಂದಿಗೆ, ಪಂಥಾನುಯಾಯಿ

ಪೂರ್ವಾಗ್ರಹಗಳು ಮತ್ತು ಮತ ಪ್ರಕ್ರಿಯೆಗೆ ಸಂಬಂಧಿಸಿದ ಮತಗಳ ಅಡ್ಡಪ್ರವೃತ್ತಿ; ಕಡು ಬಡತನ, ಮೌಢ್ಯ ಮತ್ತು ದುರ್ದೆಸೆಯಲ್ಲಿದ್ದ ಜನಗಳ ಮೇಲೆ ದಬ್ಬಾಳಿಕೆ; ಹಿಂದಿನ ನಿರ್ದಿಷ್ಟವಾದ ತಪ್ಪಾಗಿ ತಿಳಿಯಲಾಗದ ಪಾಠದ ಬಗ್ಗೆ ಅನಾದರ, ಜೀವನದ ಬಗ್ಗೆ ತಪ್ಪು ಅಂತರಾರ್ಥ ನಿರೂಪಣೆ; ಜೀವನದ ಸಂಕುಚಿತ ಸಾಂಪ್ರದಾಯಿಕತೆಯಿಂದ ಪರಿಣಮಿಸುವ ಪೃಥಕ್ಕರಣ (ಏಕಾಂಗಿತನ) ಮತ್ತು ಸಾಂಸ್ಕೃತಿಕ ಜಡತ್ವ; ಶ್ರದ್ಧೆ, ಆತ್ಮಸ್ಥೈರ್ಯ, ನಿರ್ಭಯತೆ ಮತ್ತು ಶಕ್ತಿಗಳ ಅಗತ್ಯ; ಇತ್ಯಾದಿಗಳೆಲ್ಲವೂ ನಮ್ಮ ಅಧಃಪತನಕ್ಕೆ ಕಾರಣಗಳೆಂದು ಅವರಿಂದ ಪಟ್ಟಿಮಾಡಲ್ಪಟ್ಟಿದ್ದವು.

ಈ ಅಧರ್ಮಗಳನ್ನು ನಿವಾರಿಸಿ, ಭಾರತವನ್ನು ಅದರ ನಿಷ್ಕಳಂಕ ಘನತೆಗೆ ಏರಿಸಲೆಂದು, ಸ್ವಾಮಿ ವಿವೇಕಾನಂದರು, ಯೋಗ್ಯವಾದ ಬೋಧನೆ ಮತ್ತು ಸತ್ಯವಾದ ಆಧ್ಯಾತ್ಮಿಕ ಮನೋಭಾವನೆಗಳನ್ನು ತೆರೆದು ತೋರಿಸಬೇಕೆಂದು, ಆದೇಶಿಸಿದರು. ಅದರಿಂದ ಪೌರುಷದ ಗಂಡುಗಾರಿಕೆಯು, ಶ್ರದ್ಧೆ, ಸ್ಥೈರ್ಯ ಮತ್ತು ಆಧ್ಯಾತ್ಮಿಕತೆಯ ಪ್ರಸಾರದಲ್ಲಿ ಮುಕ್ತಾಯವಾಗಬೇಕು; ಸಾಮಾಜಿಕ ಪರಿಷ್ಕರಣವು, ಮನೋಧರ್ಮದ ಬದಲಾವಣೆಯಿಂದಾಗಬೇಕು, ಬಡತನ, ದಾರಿದ್ರ್ಯಗಳ ನಿರ್ಮೂಲನದಿಂದ, ಜನಸಾಮಾನ್ಯರ ಸುಧಾರಣೆಯಾಗಬೇಕು; ಸ್ತ್ರೀಯರ ಮಾನ್ಯತೆ ಏರಿಸಬೇಕು, ಎಂದರು.

ಮಾತೃಭೂಮಿಯ ಆತ್ಮೋನ್ನತಿಗಾಗಿ, ತಮ್ಮ ಕಾರ್ಯಯೋಜನೆಗಳನ್ನು ಆಚರಣೆಗೆ ತರಲು, ಸ್ವಾಮಿ ವಿವೇಕಾನಂದರಿಗೆ, ಪರಾಕ್ರಮಿ ಕೆಲಸಗಾರರ ಒಂದು ವ್ಯವಸ್ಥಿತ ಗುಂಪೇ ಬೇಕಾಗಿತ್ತು. "ಒಂದು ಲಕ್ಷ ಪುರುಷರು, ಸ್ತ್ರೀಯರು, ಪಾವಿತ್ರ್ಯತೆಯ ಬಗ್ಗೆ ಕಾವೇರಿದವರಾಗಿದ್ದು, ಭಗವಂತನ ಬಗ್ಗೆ ಶಾಶ್ವತ ಶ್ರದ್ಧೆಯುಳ್ಳವರಾಗಿದ್ದು, ಬಡವರ ಬಗ್ಗೆ, ಮುಗ್ಗರಿಸಿ ಬಿದ್ದವರ ಬಗ್ಗೆ, ದಬ್ಬಾಳಿಕೆಗೆ ಒಳಗಾದವರ ಬಗ್ಗೆ ತಮ್ಮ ತಾಳ್ಮೆಯಿಂದ ಸಿಂಹದ ಸ್ಥೈರ್ಯ ಹೊಂದಿದ್ದವರಾಗಿರಬೇಕಿತ್ತು. ದೇಶದ ಉದ್ದ ಅಗಲದಲ್ಲೆಲ್ಲಾ ಪ್ರಯಾಣ ಮಾಡಿ, ಮುಕ್ತಿ, ನೆರವು, ಸಾಮಾಜಿಕ ಉತ್ಥಾನ ಹಾಗೂ ಸಮಾನತೆಯ ಪರಮಸತ್ಯವನ್ನು ಸಾರುವಂಥವರಾಗಬೇಕಿತ್ತು." ಅವರು ಒಂದು ಎಚ್ಚರಿಕೆಯನ್ನು ನೀಡುತ್ತಾ, "ಸಂಪತ್ತನ್ನು ನಂಬಬೇಡಿ...." ಎಂದಿದ್ದರು. ಅದು ಕೇವಲ ಸಮಾಜ ಸೇವೆಯಷ್ಟೇ ಆಗಿರದೆ, ಭಗವಂತನಿಗೆ ಸಲ್ಲಿಸುವ ಪೂಜೆಯಂಥದ್ದೇ ಆದ ಮಾನವ ಸೇವೆ ಎಂದು ಸ್ವಾಮೀಜಿಯವರ ಬೋಧನೆಯಾಗಿತ್ತು. ಅವರ ಪ್ರಕಾರ, ಪ್ರತಿಯೊಬ್ಬ ಪ್ರಾಮಾಣಿಕ ಕಾರ್ಯಕರ್ತನಿಗೂ ಪ್ರೇಮಪೂರ್ಣ ಹೃದಯ, ಶುದ್ಧ ಉದ್ದೇಶ ಮತ್ತು ದುಡಿತಕ್ಕೆ ಬೇಕಾದ ನ್ಯಾಯವಾದ ಪಥದ ಅರಿವಿರಬೇಕು ಎಂದಿತ್ತು.

೪

"ಧರ್ಮ ಶ್ರದ್ಧೆಯು ನೈತಿಕ ಸುಧಾರಣೆಯ ಕಾರ್ಯಯೋಜನೆಯಲ್ಲಿ ಪ್ರಧಾನ ಸ್ಥಾನವನ್ನು ಪಡೆಯುತ್ತದೆ" ಎಂದಿದ್ದ ಸ್ವಾಮಿ ವಿವೇಕಾನಂದರ ಕಲ್ಪನೆಯಂತೆ,



ಅವರು, "ಭಾರತದಲ್ಲಿನ ಪ್ರತಿಯೊಂದರ ಸುಧಾರಣೆಗೂ, ಧರ್ಮದ ಮಹಾಪರಿವರ್ತನೆಯೇ ಮೊತ್ತ ಮೊದಲು ಉಂಟಾಗಬೇಕು" ಎಂದರು. ಅವರ ಪರ್ಯಟನಗಳಲ್ಲಿಯೂ ಅವರು ಕಂಡುಕೊಂಡದ್ದು, "ರಾಷ್ಟ್ರದ ಮುನ್ನಡೆಗೆ, ಜನತೆಗೆ ಬಲಪ್ರದಾನ ಮಾಡುವುದು ಅತ್ಯವಶ್ಯ. ಹಾಗೆ ಮಾಡುವುದು, ವೇದಾಂತದ ಉದ್ದೇಶಗಳನ್ನು ತುಂಬಿ ಪುನರ್ಯೌವನಗೊಳಿಸಿದ ಮತ್ತು ಹೊಸ ಚೈತನ್ಯ ನೀಡಿದ ಧರ್ಮದಿಂದ ಮಾತ್ರ ಸಾಧ್ಯ" ಎಂಬುದನ್ನೇ ಅವರು "ಧರ್ಮದಲ್ಲಿ ಭಾರತದ ಚೈತನ್ಯವೇ ಇದೆ. ಎಲ್ಲಿಯವರೆಗೆ ಹಿಂದೂ ಜನತೆಯು ತಮ್ಮ ಪೂರ್ವಿಕರಿಂದ ಬಂದ ಉತ್ತಮ ಪಿತ್ರಾರ್ಜಿತ ಬಾಧ್ಯತೆಗಳನ್ನು ಮರೆಯುವುದಿಲ್ಲವೋ, ಅಲ್ಲಿಯವರೆಗೆ ಧರೆಯಲ್ಲಿ ಅವರನ್ನು ನಾಶಮಾಡುವಂಥ ಯಾವ ಶಕ್ತಿಯೂ ಇರುವುದಿಲ್ಲ" ಎಂದರು.

ಅವರಿಗೆ ಬೇಕಿದ್ದದ್ದು ಎಂತಹ ಧರ್ಮ ಎಂದರೆ, ಅದು ನಮ್ಮಲ್ಲಿ ನಮಗೆ ನಂಬಿಕೆಯನ್ನುಂಟುಮಾಡಿಸುವಂಥದ್ದು, ಒಂದು ದೇಶದ ಆತ್ಮಗೌರವ ಮತ್ತು ಶಕ್ತಿಯ ಬಳಕೆಯಿಂದ ಹೊಟ್ಟೆ ತುಂಬಾ ಊಟಕ್ಕಿಟ್ಟು, ವಿದ್ಯೆ ಕಲಿಸುವಂಥದ್ದು ಮತ್ತು ನಮ್ಮ ಸುತ್ತಲಿನ ದುರ್ದೆಸೆಯಿಂದ ನಮ್ಮನ್ನು ಹಗುರಗೊಳಿಸುವಂಥದ್ದು ಆಗಿರಬೇಕಿತ್ತು.

ಭಾರತೀಯ ಚರಿತ್ರೆಯ ಅವರ ಅಧ್ಯಯನವು, ಸ್ವಾಮೀಜಿ ಅವರನ್ನು ತಮ್ಮ ಧಾರ್ಮಿಕ ಸಿದ್ಧಾಂತವಾಗಿದ್ದ, "ಆಧ್ಯಾತ್ಮಿಕತೆ, ಭಾರತೀಯ ಸಂಸ್ಕೃತಿಯ ಮತ್ತು ಭಾರತೀಯ ಹಿರಿಮೆಯ ಅಡಿಪಾಯ. ಭಾರತದೇಶವು ಎದುರಿಸಿದ ಎಲ್ಲಾ ಸಾಮಾಜಿಕ ಹಾಗೂ ರಾಜನೈತಿಕ ತೊಂದರೆಗಳನ್ನೂ ಆಧ್ಯಾತ್ಮಿಕ ದೃಷ್ಟಿಯಿಂದ ವಿಶ್ಲೇಷಿಸಿ ನೋಡಬೇಕಾಗಿ ಬಂದಿದೆ; ಎಂಬುದರ ಬಗ್ಗೆ ಪುಷ್ಟಿಗೊಳಿಸುತ್ತಿತ್ತು. ರಾಜಕೀಯ ಕ್ರಾಂತಿಯು ಆಧುನಿಕ ಸಮಯದ ಆವಶ್ಯಕತೆಯೇ ಆಗಿದ್ದರೂ, ನಮ್ಮ ರಾಷ್ಟ್ರದ ಜೀವನದಲ್ಲಿ ರಾಜಕೀಯ ಎಂದಿಗೂ ಮುಖ್ಯ ವಿಷಯವಾಗಿರಲೇ ಇಲ್ಲ. ಉಪನಿಷತ್ತುಗಳಿಗೇ ಸೀಮಿತವಾಗಿದ್ದ ಅದ್ಭುತ ಸತ್ಯತೆಗಳನ್ನು, ಗ್ರಂಥಗಳಿಂದ, ಆಶ್ರಮಗಳಿಂದ, ಅರಣ್ಯಗಳಿಂದ ತಂದು, ವಿದೇಶಗಳಲ್ಲಿ ಅವೆಲ್ಲವೂ ಹರಡಿ ಹೋಗುವಂತೆ ಮಾಡಬೇಕು ಎಂದು ಅವರ ಆಸೆ ಇತ್ತು.

ಅವರು, "ಆಧ್ಯಾತ್ಮಿಕ ಜ್ಞಾನವನ್ನು ಬೋಧಿಸಿದ ನಂತರ, ಅದರೊಂದಿಗೆ ಜಾತ್ಯತೀತ ಜ್ಞಾನ ಹಾಗೂ ನಿಮಗೆ ಬೇಕಾದ ಎಲ್ಲಾ ಜ್ಞಾನಗಳ ಅರಿವೂ ಉಂಟಾಗುತ್ತದೆ," ಎಂದರು. ತಮ್ಮ ದೇಶ ಬಾಂಧವರಿಗೆ, ಎಂದರೆ ಯಾರು ಪಾಶ್ಚಾತ್ಯ ದೇಶಗಳ ಆಕರ್ಷಣೆಗೆ ಒಳಗಾಗಿದ್ದು, ಪಾಶ್ಚಾತ್ಯ ಕಾರ್ಖಾನೆಗಳು ಮತ್ತು ಕಾರ್ಯಯೋಜನೆಗಳನ್ನು ಭಾರತಕ್ಕೆ ಸ್ಥಳಾಂತರಿಸುವ ಬಗ್ಗೆ ಯೋಚಿಸುತ್ತಿದ್ದರೋ, ಅವರಿಗೆ ಸ್ವಾಮಿ ವಿವೇಕಾನಂದರು, "ರಾಷ್ಟ್ರೀಯ ಜಾಗೃತಿ ಮತ್ತು ಐಕಮತ್ಯವನ್ನು ಉಂಟುಮಾಡಿಸಲು ಇರುವ ಏಕೈಕ ಫಲಪ್ರದ ವಿಧಾನವು ಕೇವಲ ಧರ್ಮನಿಷ್ಠೆಯಲ್ಲಿದೆ," ಎಂದರು.

ಅವರು ಮತ್ತೆ, "ಭಾರತದ ಸಮಸ್ಯೆಗಳು, ಇತರ ದೇಶದ ತೊಂದರೆಗಳಿಗಿಂತ ಹೆಚ್ಚು ಜಟಿಲವಾದವುಗಳು, ಹೆಚ್ಚು ಮಹತ್ವಪೂರ್ಣವಾದವುಗಳು. ಜಾತಿ, ಧರ್ಮ, ಭಾಷೆ, ಸರ್ಕಾರ, ಎಲ್ಲವೂ ಸೇರಿ ಒಂದು ರಾಷ್ಟ್ರವಾಗುತ್ತವೆ. ಆದ್ದರಿಂದ ಭವಿಷ್ಯದ ಭಾರತದ ನಿರ್ಮಾಣಕ್ಕೆ ಬೇಕಾದ ಮೊದಲನೆಯ ಕಾರ್ಯಾಂಶವು, ಜಾತಿಯ ಒಕ್ಕೂಟ. ರಾಜಕೀಯ ಅಥವಾ ಸಾಮುದಾಯಿಕ ಸುಧಾರಣೆಗಳು ಅವಶ್ಯಕವಲ್ಲ ಎಂದು ನಾನು ಹೇಳುತ್ತಿಲ್ಲ. ಆದರೆ ಜಾತಿಯು ಮೊಟ್ಟಮೊದಲಿನದು, ಎಂದು ಮಾತ್ರ", ಎಂದರು.

ಇತರ ಕಾರ್ಯಕ್ಷೇತ್ರಗಳು, ವಿವಿಧ ರಾಷ್ಟ್ರಗಳ ವಿಶಿಷ್ಟವಾದ ಲಕ್ಷಣಗಳನ್ನು ನಿರೂಪಿಸುವಂತೆಯೇ, ಇಡೀ ಪ್ರಪಂಚದಲ್ಲಿ ಭಾರತವೊಂದೇ ರಾಷ್ಟ್ರವು ಬಹಳ ಹಿಂದಿನಿಂದ ಕೆಲಸಮಾಡಿ, ಧರ್ಮವನ್ನು, ತನ್ನ ರಾಷ್ಟ್ರೀಯ ಜೀವನದ ಒಂದು ವೈಶಿಷ್ಟ್ಯಪೂರ್ಣ ಗುರುತನ್ನಾಗಿ ಮಾಡಿಕೊಂಡಿದೆ. "ಭಾರತೀಯರ ಆ ಆಯ್ಕೆಯೇ, ಅವರು ಅಷ್ಟೊಂದು ರಾಜಕೀಯದ ಹಾಗೂ ಸಾಮಾಜಿಕ ವಿಪ್ಲವಗಳಿಂದ ಪಾರಾಗಿ ಬದುಕಿರುವಂತೆ, ಮತ್ತು ಶತಮಾನಗಳಿಂದ ತಮ್ಮದೇ ಆದ ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿಕೊಳ್ಳುವಂತೆ ಮಾಡಿದೆ" ಎಂದು ನಮ್ಮ ಪೂರ್ವಿಕರ ಆಯ್ಕೆಯ ಯೋಗ್ಯತೆಯನ್ನು ಚರಿತ್ರೆಯಲ್ಲಿ ಎತ್ತಿಹಿಡಿಯಲಾಗಿದೆ.

ಜನತೆಯ ಉದ್ಧಾರಕ್ಕೆಂದು ಅವರಿಗೆ ಮತಾತೀತ ಶಿಕ್ಷಣವನ್ನು ನೀಡುವುದು ಮತ್ತು ಜೀವನದ ಉತ್ತಮ ಆದರ್ಶಯುಕ್ತ ಜೀವನಕ್ಕಾಗಿ ಕೆಲಸ ಮಾಡುವಂತೆ ಅವರನ್ನು ಅಣಿಗೊಳಿಸುವುದು ಎರಡೂ, ಸ್ವಾಮೀಜಿ ಅವರ ಹಂಚಿಕೆಗಳಾಗಿತ್ತು. ಆದರೆ ಅವರ ದೃಷ್ಟಿಯಲ್ಲಿ, ಈ ಮತಾತೀತ ಶಿಕ್ಷಣವನ್ನು, ಮತದ ಮೂಲಕವೇ ನೀಡಬೇಕೆಂದೂ ಇತ್ತು. ಏಕೆಂದರೆ ಮತದ ಮೂಲಕ ಮಾತ್ರದಿಂದಲೇ, ಭಾರತದಲ್ಲಿ ಸಾಮಾಜಿಕ ಮತ್ತು ರಾಜಕೀಯ ಮುನ್ನಡೆಗಳಿಗೆ ಬೇಕಾದ ಸಮದೃಷ್ಟಿಯ ಭಾವನೆಗಳು ಬೇರೂರುತ್ತವೆ.

ಅವರು, 'ಧರ್ಮಕ್ಕೆ ಹಾನಿಯನ್ನುಂಟುಮಾಡದೆ, "ಜನಸಾಮಾನ್ಯರ ಉನ್ನತಿ" ಎಂಬ ಆದರ್ಶವಾಕ್ಯವನ್ನು ನಿಮ್ಮ ಮುಂದಿಟ್ಟುಕೊಳ್ಳಿ,' ಎಂದು ಬೋಧಿಸಿದರು. ಧರ್ಮವು ಅಸ್ಪೃಶ್ಯತೆ, ಅಡಿಗೆ ಶಾಲೆ ಮತ್ತು ಅಡಿಗೆ ಪಾತ್ರೆಗಳ ವ್ಯಾಪ್ತಿಯನ್ನು ನಿರ್ಧರಿಸುತ್ತಿತ್ತು. ಸ್ವಾಮಿ ವಿವೇಕಾನಂದರು, ಶುದ್ಧ ರೂಪದ ಉಪನಿಷತ್ತಿನ ಕರ್ಮಾನುಷ್ಠಾನವನ್ನು ಮತ್ತೆ ಪ್ರತಿಷ್ಠಾಪಿಸಲು ಇಷ್ಟಪಟ್ಟಿದ್ದರು. "ಕರ್ಮಾನುಷ್ಠಾನ ಎಂದರೇನು?" ಎಂಬುದರ ಬಗ್ಗೆಯ ಅವರ ಸುಂದರವಾದ ಮುಖ್ಯಾಂಶಗಳ ನಿರೂಪಣೆಯು, ಚಿಂತಕರ ಗಮನಕ್ಕೆ ಯೋಗ್ಯವಾಗಿದೆ. "ಪ್ರತಿಯೊಂದು ಸಾಕಾರ ರೂಪವೂ ಸುಪ್ತರೂಪದ ದಿವ್ಯತೆ. ಹೊರಗಿನ ಮತ್ತು ಒಳಗಿನ ಪ್ರಕೃತಿಯನ್ನು ಹಿಡಿತದಲ್ಲಿಟ್ಟು, ಈ ಅಂತಸ್ಥ ದಿವ್ಯತೆಯನ್ನು ಸ್ಪಷ್ಟವಾಗಿಸುವುದೇ ಗುರಿ. ಇದನ್ನು



ಕೆಲಸದಿಂದ, ಪೂಜೆಯಿಂದ, ಅತೀಂದ್ರಿಯ ಶಕ್ತಿಯಿಂದ ಅಥವಾ ವೇದಾಂತದಿಂದ, ಹೀಗೆ ಯಾವುದಾದರೂ ಒಂದರಿಂದ ಅಥವಾ ಎರಡರಿಂದ, ಇಲ್ಲದಿದ್ದರೆ ಎಲ್ಲದರಿಂದಲೂ ಮಾಡಿ ಮುಗಿಸಿ, ಸ್ವತಂತ್ರರಾಗಿರಿ. ಇದೇ ಧರ್ಮದ ಸಮಗ್ರತೆ. ಧಾರ್ಮಿಕ ಸಿದ್ಧಾಂತಗಳು ಅಥವಾ ಮತತತ್ವಗಳು ಅಥವಾ ವಿಧಿವತ್ತಾದ ನಡವಳಿಕೆಗಳು, ಅಥವಾ ಪುಸ್ತಕಗಳು ಅಥವಾ ದೇವಸ್ಥಾನಗಳು, ಅಥವಾ ಆಕಾರಗಳು, ಎಲ್ಲವೂ ಕೇವಲ ಗೌಣ ಸೂಕ್ಷ್ಮ ವಿವರಣೆಗಳು" ಎಂದಿದ್ದಾರೆ.

ಈ ಸಂದರ್ಭದಲ್ಲಿ, ಅಷ್ಟೊಂದು ಪರಹಿತ ಚಿಂತನೆಯಿಂದ, ಸ್ವಾಮಿ ವಿವೇಕಾನಂದರಿಂದ ಸಿದ್ಧಗೊಳಿಸಲ್ಪಟ್ಟ ರಾಮಕೃಷ್ಣ ಮಿಷನ್ನಿನವರ ಲಾಂಛನದ ಬಗ್ಗೆ ಪ್ರಸ್ತಾಪ ಮಾಡಬಹುದು. ಅದು ನಾಲ್ಕು ಯೋಗಗಳ ಸಾಮರಸ್ಯವನ್ನು ಸೂಚಿಸುತ್ತದೆ. ಕರ್ಮಯೋಗದ ಪ್ರತೀಕವಾಗಿ ಏರಿಳಿಯುತ್ತಿರುವ ನೀರು; ಭಕ್ತಿಯ ಕಮಲ; ಉದಯಿಸುತ್ತಿರುವ ಜ್ಞಾನ ಸೂರ್ಯ; ಮತ್ತು ರಾಜಯೋಗವು ಮುಕ್ತಿಗೊಳಿಸುವ ಮರೆಯಾಗಿರುವ ವಿಶಿಷ್ಟ ಇಂದ್ರಿಯಗತ ಶಕ್ತಿಯ ಪ್ರತೀಕವಾದ, ಸುತ್ತಿಕೊಂಡಿರುವ ಹಾವು.

ಆಧುನಿಕ ಯುಗದ ವಿಜ್ಞಾನ, ತಾರ್ಕಿಕತೆ ಹಾಗೂ ಮಾನವ ಹಿತಾಸಕ್ತಿಗಳನ್ನೊಳಗೊಂಡಿರುವ ಆಧುನಿಕಯುಗದ ಮನೋಭಾವದೊಂದಿಗೆ ಒಪ್ಪುವಂತೆ ಇರಬೇಕಾದರೆ, ಒಂದು ಧರ್ಮವು, ವೈಜ್ಞಾನಿಕವಾಗಿಯೂ, ತರ್ಕಾಧಾರಿತವಾಗಿಯೂ ಮತ್ತು ಅತ್ಯಂತ ಉನ್ನತ ಮಟ್ಟದಲ್ಲಿ ಮಾನವಾಸಕ್ತವಾಗಿಯೂ, ಇರಬೇಕು.

ಸ್ವಾಮಿ ವಿವೇಕಾನಂದರು ಬೋಧಿಸಿದ ವಿಶ್ವವ್ಯಾಪಿ ಧರ್ಮವು, ಈ ಎಲ್ಲಾ ಅಗತ್ಯಗಳನ್ನೂ ವಿಶೇಷವಾದ ರೀತಿಯಲ್ಲಿ ಈಡೇರಿಸುತ್ತದೆ... "ವಿಶ್ವವ್ಯಾಪಿ ಧರ್ಮಕ್ಕೆ ಕಾಲ ಹಾಗೂ ಸ್ಥಳಗಳಿರುವುದಿಲ್ಲ. ಬೋಧಿಸಿರುವ ಭಗವಂತನಂತೆಯೇ ಅದೂ ಸಹ ಅಪಾರವಾದದ್ದಾಗಿರುತ್ತದೆ, ಮತ್ತು ಕೃಷ್ಣನ ಹಾಗೂ ಕ್ರೈಸ್ತನ ಅನುಯಾಯಿಗಳು ಸಂತರು ಮತ್ತು ಪಾಪಿಗಳು, ಎಲ್ಲರ ಮೇಲೂ, ಅದರ ಸೂರ್ಯನು ಒಂದೇ ಸಮನೆ ಪ್ರಕಾಶಿಸುತ್ತಿರುತ್ತಾನೆ. ಅದರಲ್ಲಿ ಬ್ರಾಹ್ಮಣರದು, ಬೌದ್ಧರದು, ಕ್ರಿಶ್ಚಿಯನ್ನರದು, ಮುಸಲ್ಮಾನರದು ಎಂದೇನೂ ಇರುವುದಿಲ್ಲ. ಒಟ್ಟಿನಲ್ಲಿ ಅದು, ತನ್ನ ಸಂಪ್ರದಾಯ ಬದ್ಧತೆಯ ಲೆಕ್ಕವಿಲ್ಲದಷ್ಟು ತೋಳುಗಳಿಂದ, ಅತ್ಯಂತ ಕೀಳು ದರ್ಜೆಯ ನಿಷ್ಕರುಣಿ ಕಿರಾತನಿಂದ ಹಿಡಿದು, ಉತ್ತಮ ಪುರುಷನವರೆಗೆ ಎಂದರೆ ತಲೆ ಮತ್ತು ಹೃದಯಗಳ ಗುಣಗಳ ಮಾನವೀಯತೆಗಿಂತಲೂ ಸುಮಾರು ಮೇಲಕ್ಕೇರಿರುವ ಪ್ರತಿಯೊಬ್ಬ ಮಾನವನಿಗೂ, ಉಪದೇಶಿಸುತ್ತದೆ. ಅದು ಒಂದು ಧರ್ಮವಾಗಿದ್ದು, ಅದರ ಸೌಜನ್ಯತೆಯಲ್ಲಿ ಹಿಂಸೆ ಅಥವಾ ಅಸಹಿಷ್ಣುತೆಗೆ ಅವಕಾಶವೇ ಇಲ್ಲವಾಗಿದೆ; ಪ್ರತಿಯೊಬ್ಬ ಮಾನವನ ಹಾಗೂ ಹೆಂಗಸಿನ ವೈವಿಧ್ಯತೆಗಳನ್ನು ಗುರುತಿಸುತ್ತದೆ; ಅದರ ಇಡೀ

ವ್ಯಾಪ್ತಿಯು, ಇಡೀ ಕಾರ್ಯಪ್ರವೃತ್ತಿಯು, ಮಾನವತೆಗೆ ನೆರವಾಗಿ, ಅದು ತನ್ನ ನಿಜವಾದ ದಿವ್ಯ ಸ್ವಭಾವವನ್ನು ಅರಿತುಕೊಳ್ಳುವಂತೆ ಸಹಾಯಮಾಡುವತ್ತ ಕೇಂದ್ರೀಕೃತವಾಗಿರುತ್ತದೆ" ಎಂದಿದ್ದಾರೆ.

ಪ್ರಖರವಾದ ರಾಷ್ಟ್ರೀಯ ಪುನರ್ನಿರ್ಮಾಣದ ಕಾರ್ಯಯೋಜನೆಯಲ್ಲಿ, ಧರ್ಮದ ಪ್ರಮುಖ ಪಾತ್ರದ ಬಗ್ಗೆಯ ಅವರ ವಾದವು, ಸ್ವಾಮಿ ವಿವೇಕಾನಂದರನ್ನು, ಧರ್ಮದ ಹೆಸರಿನಲ್ಲಿ ಅದರ ಅಂಧಾಭಿಮಾನಿ ಅನುಯಾಯಿಗಳಿಂದ ಉಂಟಾದ ವ್ಯಾಪಕ ಹಾನಿಯ ಬಗ್ಗೆ ವಿಸ್ಮೃತಿಗೊಳಿಸಲಿಲ್ಲ.

ಅವರು ಮುಚ್ಚುಮರೆ ಇಲ್ಲದೆ ಧೈರ್ಯವಾಗಿ, "ಮಾನವನಿಗೆ ಧರ್ಮಕ್ಕಿಂತ ಹೆಚ್ಚು ದೈವಾನುಗ್ರಹವನ್ನು ಉಂಟುಮಾಡಿರುವುದು ಬೇರೆ ಯಾವುದು ಇಲ್ಲದಿದ್ದರೂ, ಅದೇ ಧರ್ಮಕ್ಕಿಂತ ಹೆಚ್ಚು ಮನಶ್ಶಾಂತಿ ಮತ್ತು ಪ್ರೇಮವನ್ನು ಉಂಟುಮಾಡಿರುವುದೂ ಯಾವುದೂ ಇಲ್ಲ. ಆದರೂ ಧರ್ಮಕ್ಕಿಂತ ಬೇರೆ ಯಾವುದೂ ಇಷ್ಟು ಆವೇಶಪೂರ್ಣ ಹಗೆತನಕ್ಕೆ ಜನ್ಮ ನೀಡಿಲ್ಲ. ಮಾನವನ ಭ್ರಾತೃತ್ವವನ್ನು ಧರ್ಮಕ್ಕಿಂತ ಹೆಚ್ಚು ವಾಸ್ತವವನ್ನಾಗಿ ಯಾವುದೂ ಮಾಡಿಲ್ಲದಿದ್ದಾಗ್ಯೂ, ಮನುಷ್ಯರ ನಡುವೆಯೇ ಅತ್ಯಂತ ಕಹಿಯಾದ ಶತೃತ್ವವನ್ನು, ಧರ್ಮಕ್ಕಿಂತ ಹೆಚ್ಚಾಗಿ ಯಾವುದೂ ಪೋಷಿಸಿಲ್ಲ. ಧರ್ಮಕ್ಕಿಂತ ಹೆಚ್ಚಾಗಿ, ಧಾರ್ಮಿಕ ಸಂಸ್ಥೆಗಳು, ಮನುಷ್ಯರಿಗೆ ಹಾಗೂ ಪ್ರಾಣಿಗಳಿಗೆ ಹೆಚ್ಚಿನ ಆಸ್ಪತ್ರೆಗಳನ್ನು ಎಲ್ಲಿಯೂ ಕಟ್ಟಿಲ್ಲ. ಆದರೆ ಧರ್ಮಕ್ಕಿಂತ ಹೆಚ್ಚಾಗಿ ಪ್ರಪಂಚದಲ್ಲಿ ರಕ್ತದ ಮಹಾಪೂರವನ್ನು ಹರಿಸಿದ್ದೂ ಬೇರೆ ಯಾವುದೂ ಇಲ್ಲ", ಎಂದು ಹೇಳಿದರು. ಸ್ವಾಮಿ ವಿವೇಕಾನಂದರು.

೫

ಇಷ್ಟೆಲ್ಲಾ ಧರ್ಮವನ್ನು ಕೊಂಡಾಡಿದ ನಂತರ, ಸ್ವಾಮಿ ವಿವೇಕಾನಂದರು, 'ಅದು ಖಾಲಿ ಹೊಟ್ಟೆಯವರಿಗಲ್ಲ' ಎಂಬುದಕ್ಕೆ ಮಹತ್ವವನ್ನು ನೀಡಿದ್ದರು. ಎಷ್ಟೋ ಹೇಳಿಕೆಗಳಲ್ಲಿ, ಜನಸಾಮಾನ್ಯರ ದಾರಿದ್ರ್ಯ ಹಾಗೂ ಬಡತನದ ನಿವಾರಣೆಗೆ ಅವರು ಆದ್ಯತೆ ನೀಡಿದ್ದಾರೆ. ಅವರ ಪ್ರಕಾರ, ಜನರ ದಾರಿದ್ರ್ಯವೇ ಭಾರತದ ಎಲ್ಲಾ ತೊಂದರೆಗಳಿಗೂ ಮೂಲಕಾರಣ ಎಂದಿತ್ತು. "ಅವರ ದಾರಿದ್ರ್ಯ ಮತ್ತು ನರಳಿಕೆಗಳನ್ನು ಮೊದಲು ನಿರ್ಮೂಲಗೊಳಿಸದೆ, ಧರ್ಮದ ಬಗ್ಗೆ ಅವರಿಗೆ ಬೋಧಿಸುವುದು ವ್ಯರ್ಥ. ಮೊದಲು ರೊಟ್ಟಿ, ನಂತರ ಧರ್ಮ. ಬಡಪಾಯಿಗಳು ಹಸಿವಿನಿಂದ ಕಂಗಾಲಾಗಿರುವಾಗ, ನಾವು ಅವರಿಗೆ ಧರ್ಮದ ಬಗ್ಗೆ ಅತಿಯಾಗಿ ತುರುಕುತ್ತೇವೆ," ಎಂದರು.

ಅವರು, ಅದಕ್ಕಾಗಿಯೇ, ಪ್ರತಿದಿನವೂ ಒಬ್ಬ ಹಸಿದ ನಾರಾಯಣನನ್ನೋ, ಕುಂಟ ನಾರಾಯಣನನ್ನೋ, ಕುರುಡ ನಾರಾಯಣನನ್ನೋ ಅಥವಾ ತಮಗೆ ಸಾಧ್ಯವಾಗುವಂತಿದ್ದರೆ ಆರು ಅಥವಾ ಹನ್ನೆರಡು ಜನರನ್ನು ಮನೆಗೆ ಕರೆದೊಯ್ದು,



ಊಟಕ್ಕೆ ಬಡಿಸಿ, ದೇವಸ್ಥಾನದಲ್ಲಿನ ಶಿವನಿಗೋ, ವಿಷ್ಣುವಿಗೋ ನೀಡುವಂಥ ಪೂಜೆಯನ್ನೇ ಅವರಿಗೂ ಮಾಡಬೇಕೆಂದು ಬೋಧಿಸಿದರು.

ಕೆಲವೊಮ್ಮೆ ಅವರು, ಜೀವನದ ಇತರ ಹಿತಾಸಕ್ತಿಗಳಿಗೂ ಅನ್ವಯಿಸುವಂತೆ ಧರ್ಮವನ್ನು ಅಧೀನಪಡಿಸಿಕೊಂಡು, ತಮ್ಮ ಧರ್ಮವನ್ನು ವ್ಯಾಖ್ಯಾನಿಸುತ್ತಾ, "ನನ್ನ ದೇಶದಲ್ಲಿ ಎಲ್ಲಿಯವರೆಗೆ ಒಂದು ನಾಯಿಯಾದರೂ ಉಪವಾಸವಿರುತ್ತದೆಯೋ, ಅದಕ್ಕೆ ಹೊಟ್ಟೆಗೆ ಹಾಕಿ, ನೋಡಿಕೊಳ್ಳುವುದೇ ನನ್ನ ಧರ್ಮ ಮತ್ತು ಬಾಕಿ ಎಲ್ಲವೂ ಧರ್ಮವಲ್ಲದ್ದು ಅಥವಾ ಗೌಣಧರ್ಮ ಅಷ್ಟೇ", ಎಂದು ಮೇರೆ ಗೊತ್ತುಪಡಿಸಿದ್ದಾರೆ.

ಸೂಕ್ತ ಕ್ರಮ ವಿಧಾನದಲ್ಲಿ ವಿದ್ಯಾಭ್ಯಾಸದ ಪ್ರಸಾರವಾಗುವಿಕೆ, ಜೊತೆಗೆ, ಪ್ರಾಪಂಚಿಕ ಅಧಿಕಾರ ಮತ್ತು ಉನ್ನತಿಯ ಗಳಿಕೆ ಎರಡೂ, ಜನಗಳ ದಾರಿದ್ರ್ಯ ಮತ್ತು ಬೇಗುದಿಗಳ ನಿರ್ಮೂಲನಕ್ಕೆ ಸಾಧನಗಳು.

೬

ಸ್ವಾಮಿ ವಿವೇಕಾನಂದರು, ಪಾಶ್ಚಾತ್ಯ ದೇಶಗಳ ವಿವಿಧ ಕಲೆಗಳು ಮತ್ತು ವಿಜ್ಞಾನಗಳ ಶಿಕ್ಷಣವನ್ನು ಭಾರತೀಯರು ಕಲಿಯಬೇಕಾಗಿದ್ದುದರ ಆವಶ್ಯಕತೆಯ ಪರವಾಗಿ ವಾದಿಸುತ್ತಿದ್ದರು. ಅದರಿಂದ ತಕ್ಷಣವೇ ದೇಶದಲ್ಲಿದ್ದ ಎದೆ ಬಿರಿಯುವಂಥ ಆರ್ಥಿಕ ಸಮಸ್ಯೆಯ ಪರಿಹಾರವೂ ಮತ್ತು ಅದನ್ನು ಪಡೆಯಲು ಬೇಕಾದ ಹೋರಾಟಕ್ಕೆ ಜನರನ್ನು ಸಮರ್ಥರನ್ನಾಗಿಸುವುದೂ ಸಾಧ್ಯ ಎಂದೂ ಅವರ ಭಾವನೆ ಇತ್ತು.

ಅವರು, "ಜೀವನದ ಸಂಘರ್ಷಗಳಿಗೆ ತಮ್ಮನ್ನು ಒಡ್ಡಿಕೊಳ್ಳಲು ಜನರಿಗೆ ಸಹಾಯಕವಾಗದಂಥ ವಿದ್ಯೆ, ಗುಣದ ಶಕ್ತಿ, ಪರೋಪಕಾರದ ಬುದ್ಧಿ ಮತ್ತು ಸಿಂಹಸ್ಥೈರ್ಯಗಳನ್ನು ಹೊರಕ್ಕೆ ತರದಂಥ ವಿದ್ಯೆಗೆ ಬೆಲೆಯಿದೆಯೇ? ತನ್ನ ಕಾಲುಗಳ ಮೇಲೆ ತಾನು ನಿಲ್ಲುವಂತೆ ಸ್ಥೈರ್ಯ ಮೂಡಿಸುವುದೇ ನಿಜವಾದ ವಿದ್ಯೆ" ಎಂದರು.

ವಿದ್ಯೆಯ ಪರಿಧಿಯನ್ನು ಅವರು ಧಾರ್ಮಿಕ ಸತ್ಯತೆಗಳ ಜ್ಞಾನಕ್ಕಷ್ಟೇ ಸೀಮಿತಗೊಳಿಸಲಿಲ್ಲ. ಬದಲಿಗೆ, ಆಧ್ಯಾತ್ಮಿಕ ಮತ್ತು ಐಹಿಕ ಮಾನವೀಯ ಸಂಸ್ಕೃತಿಗಳ ಎಲ್ಲಾ ರೂಪಗಳನ್ನೂ ಅದರೊಂದಿಗೆ ಸೇರಿಸಿಕೊಳ್ಳುವಂತೆ ವಿಸ್ತರಿಸಿದರು.

ಅವರು ಸ್ತ್ರೀಯರಿಗೆ ಕಲಿಸಲೆಂದು ಸೂಚಿಸಿದ್ದ ಶಿಕ್ಷಣವು ಸರಿಯಾದ ರೀತಿಯ ಶಿಕ್ಷಣವಾಗಿದ್ದು, ಜನರ ಭಾವನೆಗಳು ಮತ್ತು ಬುದ್ಧಿಗೆ ಹೊಂದುವಂಥದ್ದಾಗಿತ್ತು. ಅದರಿಂದ ಅವರು, ತಮ್ಮ ಸಾಂಸಾರಿಕ ಜೀವನದ ಧ್ಯೇಯಗಳನ್ನು ಅಭ್ಯಾಸ ಮಾಡಿಕೊಳ್ಳುವುದರೊಂದಿಗೆ, ರಾಷ್ಟ್ರದ ಸಂಸ್ಥೆಗಳ ಚಟುವಟಿಕೆಗಳನ್ನೂ ಸುಲಭವಾಗಿ ಪ್ರಭಾವ ಬೀರುವಂತೆ ರೂಪಿಸಿಕೊಳ್ಳಬಹುದಾಗಿತ್ತು. 'ತಮ್ಮ ಮಿತಭೋಗಿತ್ವದ ಆದರ್ಶವನ್ನು ಹೆಚ್ಚಿಸಿಕೊಳ್ಳುವುದರೊಂದಿಗೆ ಅವರು ಆತ್ಮಗೌರವ, ಆತ್ಮವಿಶ್ವಾಸ, ಮಾತೃಭೂಮಿಯ ಪ್ರೇಮ ಹಾಗೂ ತ್ಯಾಗದ ಭಾವನೆಗಳನ್ನೂ

ಗಾಢಗೊಳಿಸಿಕೊಳ್ಳುವಂತೆ ಅವರಿಗೆ ಕಲಿಸಿಕೊಡಬೇಕು', ಎಂದಿದ್ದರು ಸ್ವಾಮಿ ವಿವೇಕಾನಂದರು.

"ಯುಗದ ಸದ್ಯದ ಆವಶ್ಯಕತೆಗಳ ಅಧ್ಯಯನದಿಂದ ಕೆಲವರಿಗೆ ವೈರಾಗ್ಯದ ಆದರ್ಶಗಳನ್ನೂ ಹೇಳಿಕೊಟ್ಟು ತರಬೇತಿ ನೀಡುವುದು ಅಗತ್ಯವೆನಿಸುತ್ತದೆ. ಆಗ ಅವರು ಜೀವನ ಪೂರ್ತಿಯ ಸಂನ್ಯಾಸದ ದೀಕ್ಷೆ ಹೊಂದಿ, ನರೆಗೂದಲಿನ ಪ್ರಾಚೀನರಿಂದ ತಮ್ಮ ಜೀವರಕ್ತದಲ್ಲಿ ಸ್ವಾಭಾವಿಕವಾಗಿ ಬಂದಿರುವ, ಮಿತಭೋಗಿತ್ವದ ಶಕ್ತಿಯ ಚೈತನ್ಯದಿಂದ ಕೂಡಿದವರಾಗಿರುತ್ತಾರೆ."

"ಅದರೊಂದಿಗೆ ಅವರಿಗೆ ವಿಜ್ಞಾನಗಳು ಮತ್ತು ಇತರ ವಿಷಯಗಳನ್ನೂ ಹೇಳಿಕೊಟ್ಟು, ಅವರಿಗೇ ಅಲ್ಲದೆ, ಇತರರಿಗೂ ಪ್ರಯೋಜನಕಾರಿಯಾಗಿರುವಂತೆ ಮಾಡಬೇಕು." ವಿದ್ಯಾಭ್ಯಾಸವು ರಾಷ್ಟ್ರದ ಪರಂಪರೆಯನ್ನು ಅವಲಂಬಿಸಿರಬೇಕು. ಆದರೆ ಪಾಶ್ಚಾತ್ಯ ಆದರ್ಶಗಳನ್ನಲ್ಲ. ಸೀತೆ, ಸಾವಿತ್ರಿಯರೊಂದಿಗೆ, ಮೀರಾಬಾಯಿ, ಅಹಲ್ಯಾಬಾಯಿ, ಝಾನ್ಸಿರಾಣಿಯರನ್ನೂ, ಭಾರತೀಯ ಸ್ತ್ರೀಯರ ಎದುರಿನಲ್ಲಿ, ಪರಿಶುದ್ಧತೆ, ಉದಾತ್ತತೆ, ಧೈರ್ಯ, ದೃಢನಿಶ್ಚಯ, ಭಕ್ತಿ, ಶೌರ್ಯ, ಪ್ರೀತಿ ಮತ್ತು ದೈವಭಕ್ತಿ ಎಲ್ಲವನ್ನೂ ಸುಂದರವಾದ ಸಾಮರಸ್ಯತೆಯಿಂದ ಒಂದುಗೂಡಿರುವ ಆದರ್ಶಗಳಂತೆ, ಸ್ಥಾಪಿಸಬೇಕು.

ವಿದ್ಯಾಭ್ಯಾಸದ ಗುರಿ, ಅಂಥ ಒಬ್ಬ ಶಕ್ತಿಸಮತೋಲದ ಚರಿತ್ರಾರ್ಹ ವ್ಯಕ್ತಿಯನ್ನು ಪ್ರಕಟಗೊಳಿಸುವುದೇ ಆಗಿದೆ. ಸೂಕ್ತ ವಿದ್ಯಾಭ್ಯಾಸದಿಂದ, ಭಾರತೀಯ ಸ್ತ್ರೀಯರು, ತಮ್ಮ ಸ್ವಂತದ ತೊಂದರೆಗಳನ್ನು ಬಗೆಹರಿಸಿಕೊಳ್ಳಬಲ್ಲವರಾಗುತ್ತಾರೆ.

## ೭

ಸ್ವಾಮಿ ವಿವೇಕಾನಂದರು, ಶಕ್ತಿಯ ಹಿರಿಯ ಸಮರ್ಥಕರಾಗಿದ್ದರು. ಅಸಂಖ್ಯಾತ ಉದ್ಧೃತ ಭಾಗಗಳು, ಶಕ್ತಿ, ನಿರ್ಭಯತೆ, ಶ್ರದ್ಧೆ ಮತ್ತು ಸ್ಥೈರ್ಯಗಳ ಬಗ್ಗೆಯ ಅವರ ದಿವ್ಯಸಂದೇಶಗಳನ್ನು ಮುಂದಕ್ಕೆ ಸಾಗಿಸಿವೆ.

ಅವರ ಪ್ರಕಾರ, "ವೇದಗಳ ಮತ್ತು ವೇದಾಂತದ ಅತ್ಯಂತ ಸಾರವತ್ತಾದ ಭಾಗವು, 'ಶಕ್ತಿ' ಎಂಬ ಒಂದೇ ಒಂದು ಪದದಲ್ಲಿದೆ. 'ಎಲ್ಲಕ್ಕಿಂತ ಹೆಚ್ಚಾಗಿ, ನಮ್ಮ ಯುವಕರು ಶಕ್ತಿವಂತರಾಗಬೇಕು. ಧರ್ಮವು ನಂತರ ಬರುತ್ತದೆ'. ಭಗವದ್ಗೀತೆಯನ್ನು ಓದುವುದರ ಬದಲಿಗೆ, ಫುಟ್‌ಬಾಲ್‌ನಿಂದ ನೀವು ಸ್ವರ್ಗಕ್ಕೆ ಸಮೀಪವಿರುತ್ತೀರಿ." "ನಿಮ್ಮ ರಟ್ಟೆಗಳ ಮಾಂಸಖಂಡಗಳು, ಸ್ವಲ್ಪ ಹೆಚ್ಚು ಬಲಶಾಲಿಯಾಗಿದ್ದರೆ, ನೀವು ಗೀತೆಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವಿರಿ". "ದೇಶಕ್ಕಾಗಿ ಅಗತ್ಯವಿರುವುದು, ಕಬ್ಬಿಣದಂಥ ಮಾಂಸಖಂಡಗಳು, ಉಕ್ಕಿನ ನರಗಳು ಮತ್ತು ಬೃಹದಾಕಾರದ ಸಂಕಲ್ಪ ಶಕ್ತಿಗಳು. ಅವುಗಳನ್ನು ಯಾರೂ ತಡೆಯಲಾರರು ಮತ್ತು ಅವು ಯಾವುದೋ



ರೀತಿಯಲ್ಲಿ ತಮ್ಮ ಗುರಿಯನ್ನು ಸಾಧಿಸಿಕೊಳ್ಳಬಲ್ಲವು." ಇವು, ಶಕ್ತಿಯ ಉಪಾಸನಾ ವಿಧಾನದ ಬಗ್ಗೆ ವಾದಿಸುತ್ತಾ ಅವರು ಹೇಳಿದ ಕೆಲವು ಉಕ್ತಿಗಳು.

ಜನರಿಗೆ ತಮ್ಮ ಸ್ವಂತ ಶಕ್ತಿಯ ಬಗ್ಗೆ ಸಂಪೂರ್ಣ ನಂಬಿಕೆ ಮತ್ತು ಆತ್ಮವಿಶ್ವಾಸ ಎರಡೂ ಇರಬೇಕಾದದ್ದು, ರಾಷ್ಟ್ರದ ನೈತಿಕ ಸುಧಾರಣೆಗೆ ಬೇಕಾದ ಅತ್ಯಂತ ಮೂಲಭೂತ ಆವಶ್ಯಕತೆಗಳಲ್ಲಿ ಒಂದಾಗಿತ್ತು. ಆದರೆ ಅದು ತಾತ್ಕಾಲಿಕವಾಗಿ ತನ್ನ ಲಂಗರನ್ನು ಕಳೆದುಕೊಂಡಿತ್ತಾದರೂ ಸ್ವಾಭಾವಿಕವಾಗಿ ಆಚೆಗೆ ತಳ್ಳುವ ಶಕ್ತಿಯನ್ನು ಮಾತ್ರ ಕಳೆದುಕೊಂಡಿರಲಿಲ್ಲ.

ಸ್ವಾಮಿ ವಿವೇಕಾನಂದರು, ಶಕ್ತಿಯ ಪರದ ತಮ್ಮ ವಾದದಲ್ಲಿ ಬಹಳ ಮುಂದೆ ಹೋಗಿ, "ತನ್ನನ್ನು ತಾನು ಶಕ್ತಿವಂತನಾಗಿಯೂ, ಮಾನವವಾಗಿಯೂ, ಎಲ್ಲಿಯವರೆಗೆ ಸಾಧಿಸುತ್ತಾನೆಯೋ ಅಂಥ ಕೇಡಿಗನೂ ಸಹ, ಒಂದು ದಿನ ತನ್ನ ಅಂತಸ್ಥ ಕೇಡಿಗತನವನ್ನು ಬಿಟ್ಟು, ಸತ್ಯತೆಯನ್ನು ಅರಿಯಲು ಸಾಧ್ಯವಾಗುವಂತೆ ಆತ್ಮವನ್ನು ಹುಡುಕಿಕೊಳ್ಳುವಂಥ ಉಪಾಯದತ್ತ, ಅವನ ಅಂತಶ್ಶಕ್ತಿಯು ಅವನನ್ನು ಕರೆದೊಯ್ಯುತ್ತದೆ" ಎಂದರು.

ಶಕ್ತಿಯ ಪರದ ವಾದದಲ್ಲಿಯೇ ಸ್ವಾಮೀಜಿ ಅವರ ದೌರ್ಬಲ್ಯದ ಬಗ್ಗೆಯ ಖಂಡನೆಯೂ, ಮರ್ಮಭೇದಿಯಾದ ಮತ್ತು ಅಳೆಯಲಾಗದ ಶಬ್ದಗಳಲ್ಲಿ ಕಂಡುಬರುತ್ತದೆ. ದೌರ್ಬಲ್ಯ ಮತ್ತು ಹೆದರಿಕೆ ಎರಡೂ ಘೋರ ಅಪರಾಧಗಳು ಎಂಬುದೇ ಅವರ ಭಾವನೆಯಾಗಿತ್ತು.

ಅವರ ಮಾತ್ರಕ್ಕೆ, "ಶಕ್ತಿಯೇ ಜೀವನ ; ದೌರ್ಬಲ್ಯವೇ ಸಾವು", "ಈ ದೌರ್ಬಲ್ಯವೇ ಪ್ರಪಂಚದ ಎಲ್ಲಾ ತೊಂದರೆಗಳಿಗೂ ಕಾರಣ," ಎಂದಿತ್ತು. ಶಕ್ತಿಯು ಪರಿಹಾರವೂ ಆಗಿತ್ತು, ನಿಜ. ಆದರೆ ಶಕ್ತಿಯೊಂದಿಗೆ ನಂಬಿಕೆಯೂ ಬೆಳೆಯಬೇಕು. ಅವರು ತಮ್ಮ ದೇಶವಾಸಿಗಳಿಗೆ, "ಸದಾಕಾಲವೂ ನಂಬಿಕೆಯನ್ನಿಟ್ಟುಕೊಳ್ಳಿ" ಎಂದೇ ನಿರಂತರವಾಗಿ, ಕಳೆದುಹೋದುದ್ದರ ಬಗ್ಗೆ ಮತ್ತು ಮುಂದೆ ಆಗುವುದರ ಬಗ್ಗೆ ಬಲವಂತಪಡಿಸುತ್ತಿದ್ದರು.

ಅವರು, "ನಿಮ್ಮಲ್ಲಿ ನಂಬಿಕೆ ಒಂದಿದ್ದರೆ, ಪ್ರತಿಯೊಂದೂ ನಿಮ್ಮನ್ನರಸಿ ಬರುತ್ತದೆ" ಎಂದು ಆಶ್ವಾಸನೆ ನೀಡುತ್ತಿದ್ದರು. ಉಪನಿಷತ್ತುಗಳನ್ನು ಅವುಗಳಲ್ಲಿರುವ ನಿರ್ಭಯತೆಯ ವೇದವಾಕ್ಯಗಳಿಗಾಗಿಯೇ ಅವರು ಸದಾ ಪ್ರಶಂಸಿಸುತ್ತಿದ್ದರು.

"ಯಾವುದಾದರೂ ಹೇಳಿಕೊಡಬೇಕಾದ ಧರ್ಮ ಎಂಬುದಿದ್ದರೆ, ಅದು ನಿರ್ಭಯತೆಯ ಧರ್ಮ ಮಾತ್ರ" ಎಂದು ಹೇಳಿದ್ದರು, ಸ್ವಾಮಿ. ಅವರ ಪ್ರಕಾರ, ಸ್ವಾತಂತ್ರ್ಯ, ದೈಹಿಕ ಸ್ವಾತಂತ್ರ್ಯ, ಮಾನಸಿಕ ಸ್ವಾತಂತ್ರ್ಯ ಮತ್ತು ಆಧ್ಯಾತ್ಮಿಕ ಸ್ವಾತಂತ್ರ್ಯ ಎಲ್ಲವೂ ಉಪನಿಷತ್ತುಗಳ ಧ್ಯೇಯವಾಕ್ಯಗಳಾಗಿದ್ದವು.

ಸ್ವಾಮೀಜಿ, ದೈವೀ ಪ್ರೇಮದ ಭಕ್ತರಾಗಿದ್ದರೂ ಆವಶ್ಯಕತೆ ಇದ್ದಾಗ, ಶಕ್ತಿಯ

ಉಪಯೋಗದಲ್ಲಿಯೂ ನಂಬಿಕೆಯನ್ನು ಹೊಂದಿರುತ್ತಿದ್ದರು. ಆದರೆ, ಆವಶ್ಯಕತೆ ಇದ್ದಾಗ, ಕೇವಲ ಭೌತಿಕವಾದಿಗಳಿಗೆ, ಪೂರ್ಣಮಾಪನದ ಭದ್ರವಾದ ಹಿಡಿತವನ್ನು ನೀಡಲು ಒಪ್ಪುತ್ತಿರಲಿಲ್ಲ.

## ೮

ಹಿಂದೂ ಧರ್ಮವನ್ನು ಮೊದಲಿಗೆ ಜೀವಿಗಳಿಗೆ ಸಂಬಂಧಿಸಿದ ಐಕ್ಯತೆಗೆ ಪ್ರಾಶಸ್ತ್ಯ ನೀಡಲೆಂದು ಯೋಜಿಸಿದ್ದರೂ, ಎಂದೂ ಅಷ್ಟು ಕಟ್ಟುನಿಟ್ಟಿನದಾಗಿರಲಿಲ್ಲದ ಜಾತಿಪದ್ಧತಿಯು ಈಗ ಮರಗಟ್ಟಿತ್ತು. ಪೈಪೋಟಿಗಳನ್ನು ಹತ್ತಿರ ಸೇರಿಸದಂತೆ ಮಾಡಲು ಮತ್ತು ಆಧ್ಯಾತ್ಮಿಕ ಜ್ಞಾನದ ಹಿರಿಮೆಯನ್ನು (ಬ್ರಾಹ್ಮಣ ಎಂದು ಉದಾಹರಿಸುವುದೇ ಹೊರತು ಹಾಗೆ ಹುಟ್ಟಿದವರಲ್ಲ) ಇತರ ಮಿಲಿಟರಿ ಶಕ್ತಿ, ಸಂಪತ್ತು, ಅಥವಾ ವ್ಯವಸ್ಥೆಗೊಳಿಸಿದ ದುಡಿತ (ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ಪ್ರತಿನಿಧಿಸಲ್ಪಟ್ಟರೇ ಹೊರತು, ಹಾಗೆ ಕೇವಲ ಹುಟ್ಟಿದವರಲ್ಲ).

ಬ್ರಾಹ್ಮಣರಿಗೆ ಪ್ರಾಮುಖ್ಯತೆಯನ್ನು ನೀಡುವುದರ ಉದ್ದೇಶವು, ಬ್ರಾಹ್ಮಣನಾಗಿ ಹುಟ್ಟಿದವನಿಗೆ, ಕ್ಷತ್ರಿಯರು, ವೈಶ್ಯರು, ಶೂದ್ರರು ಎಂದು ಹುಟ್ಟಿದವರೆಲ್ಲರ ಮೇಲೆ ಹಿರಿಮೆಯನ್ನು ಪ್ರತಿಪಾದಿಸುವ ಉದ್ದೇಶವಾಗಿರಲಿಲ್ಲ. ನಿಜವಾದ ಉದ್ದೇಶವು, "ಬ್ರಾಹ್ಮಣತ್ವ ಎಂಬುದರಲ್ಲಿ ಪ್ರಾಪಂಚಿಕತೆ ಪೂರ್ಣವಾಗಿ ಇಲ್ಲವಾಗುತ್ತದೆ ಮತ್ತು ನಿಜವಾದ ವಿವೇಕವು ಸಮೃದ್ಧವಾಗಿರುತ್ತದೆ. ಅದೇ ಹಿಂದೂ ಕುಲದ ಆದರ್ಶವಾದ" ಎಂಬುದರ ಹಿರಿಮೆಯನ್ನು ದೃಢಪಡಿಸಿಕೊಳ್ಳುವುದಾಗಿತ್ತು. ಮತ್ತೊಂದು ಸಂದರ್ಭದಲ್ಲಿ ಅವರು, "ಜಾತಿಯಿಂದಲೇ, ಮುನ್ನೂರು ದಶಲಕ್ಷ ಜನರೂ, ಒಂದು ಚೂರು ರೊಟ್ಟಿಯನ್ನು ತಿನ್ನಲು ಸಾಧ್ಯವಾಗಿದೆ. ಅದೊಂದು ಅಷ್ಟು ಸರಿಯಾಗಿಲ್ಲದ ಆಚಾರಕ್ರಮ. ಅನುಮಾನವೇ ಇಲ್ಲ. ಆದರೆ ಅದು, ಜಾತಿಗಲ್ಲದೇ ಇದ್ದಿದ್ದರೆ ನಿಮ್ಮ ಬಳಿ ಓದುವುದಕ್ಕೆ ಯಾವ ಸಂಸ್ಕೃತದ ಪುಸ್ತಕಗಳೂ ಇರುತ್ತಿರಲಿಲ್ಲ", ಎಂದರು.

ಸಮಾಜದಲ್ಲಿನ ಮತಭೇದಗಳು, ಸ್ವಾಭಾವಿಕ ಹಾಗೂ ಅನಿವಾರ್ಯವಾದವುಗಳು ಮತ್ತು ಒಂದಲ್ಲ ಒಂದು ರೀತಿಯಲ್ಲಿ ಎಲ್ಲಾ ದೇಶಗಳಲ್ಲಿಯೂ ಇವು ಇದ್ದದ್ದೇ ಎಂಬುದನ್ನು ಸ್ವಾಮಿ ವಿವೇಕಾನಂದರು ಅರಿತಿದ್ದರು.

ಅವರು ರಕ್ತ ಸಂಬಂಧದ ಜಾತಿಯ ಬಗ್ಗೆ ವಿರುದ್ಧವಾಗಿರಲಿಲ್ಲ. "ಜಾತಿ ಹೋಗಬಾರದು, ಆದರೆ ಸೂಕ್ತವಾಗಿ ಅದನ್ನು ಪುನಃ ಹೊಂದಿಸಿಕೊಳ್ಳಬೇಕು" ಎಂಬುದು ಅವರ ಅಭಿಪ್ರಾಯವಾಗಿತ್ತು. ಜಾತಿಯ ತೊಡಕಿಗೆ, ಅದರ ಸಂಸ್ಕೃತಿ ಮತ್ತು ವಿದ್ಯಾಭ್ಯಾಸಗಳಿಂದ ಕೆಳಗಿನ ಜಾತಿಯವರು ಹಿರಿಯ ಜಾತಿಯ ಧ್ಯೇಯವನ್ನು ಅರಿತುಕೊಳ್ಳಬೇಕು ಮತ್ತು ಅದರ ಮೂಲಕ ಅದನ್ನು ಆ ಬ್ರಾಹ್ಮಣ ಜಾತಿಯ ಎತ್ತರಕ್ಕೆ ನಿಲ್ಲಿಸಬೇಕು ಎಂಬುದೇ, ಈ ಜಾತಿಯ ತೊಡಕಿಗೆ, ಅವರಿತ್ತ



ಪರಿಹಾರವಾಗಿತ್ತು. ಅವರ ಆದರ್ಶ ಸಮತಟ್ಟು ಮಾಡುವುದಾಗಿತ್ತು. ಅವರು, "ಈ ಹಿರಿಯ ಸಮಸ್ಯೆಗೆ, ಉತ್ತಮವು, ಹಿರಿಯದನ್ನು ಕೆಳಕ್ಕೆ ತರುವುದರಲ್ಲಿಲ್ಲದೆ, ಕೆಳಗಿನದನ್ನು ಮೇಲಿನದರ ಎತ್ತರಕ್ಕೆ ಏರಿಸುವುದೇ ಆಗಿದೆ. ಒಂದು ತುದಿಯಲ್ಲಿ ಬ್ರಾಹ್ಮಣನ ಆದರ್ಶವಿದ್ದರೆ, ಮತ್ತೊಂದು ತುದಿಯ ಆದರ್ಶ ಚಂಡಾಲನದು. ಈ ಚಂಡಾಲನನ್ನು ಬ್ರಾಹ್ಮಣನ ಮಟ್ಟಕ್ಕೇರಿಸುವುದೇ ಇಡೀ ಕೆಲಸ", ಎಂದರು.

## ೯

ಪಾಶ್ಚಿಮಾತ್ಯ ದೇಶಗಳಲ್ಲಿ ಸ್ವಾಮಿ ವಿವೇಕಾನಂದರು, ಆಧ್ಯಾತ್ಮಿಕ ಸಂದೇಶಗಳನ್ನು ಹೊತ್ತಿರುವ ಹಿಂದೂಧರ್ಮದ ಪ್ರವರ್ತಕರಾಗಿದ್ದರೆ, ಭಾರತದಲ್ಲಿ ಅವರು ಸ್ವದೇಶಾಭಿಮಾನಿಯೇ ಆಗಿದ್ದು, ತಮ್ಮ ಮಾತೃಭೂಮಿಯ ಪುನರುಜ್ಜೀವನಕ್ಕೆ ಕೆಲಸಮಾಡುತ್ತಿದ್ದ ಕಾರ್ಯಕರ್ತರಾಗಿದ್ದರು. ದೇಶಪ್ರೇಮಿಗಳು ಮತ್ತು ರಾಜನೀತಿಜ್ಞರ ಮುಂದಿನ ಪೀಳಿಗೆಗಳಿಗೆ, ಸ್ಫೂರ್ತಿದಾಯಕರಾಗಿದ್ದ, ಅವರು ನಿಜವಾಗಿಯೂ ಒಬ್ಬ ಹಿರಿಯ ದೇಶಪ್ರೇಮಿ ಆಗಿದ್ದರು. ರಾಜಕೀಯದ ಬಗ್ಗೆ, ತಮ್ಮದೇ ಆಗಿದ್ದ ಭಾವನೆಯನ್ನು ಹೊಂದಿದ್ದು, ನಿರ್ದಿಷ್ಟ ಉದ್ದೇಶವನ್ನು ಹೊತ್ತು, "ನೀವು ದೇಶಪ್ರೇಮದ ಬಗ್ಗೆ ಮಾತನಾಡುತ್ತೀರಿ. ಆದರೆ ನಿಮ್ಮ ಮಾತೃಭೂಮಿಯ ಯೋಚನೆಯು, ನಿಮ್ಮ ನಿದ್ದೆ ಕೆಡಿಸುವಷ್ಟು ಮತ್ತು ನಿಮ್ಮನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿದೆಯೇನು? ಅದೇ ನಿಜವಾದ ದೇಶಪ್ರೇಮ", ಎಂದು ಕೇಳಿದರು. ಅವರು ತಮ್ಮನ್ನು ತಾವು ರಾಜಕೀಯದೊಂದಿಗೆ ಸಿಕ್ಕಿಸಿಕೊಳ್ಳಲಿಲ್ಲ ಮತ್ತು ತಮ್ಮ ಸಂಸ್ಥೆಗಳೆಲ್ಲವನ್ನೂ ರಾಜಕೀಯದಿಂದ ಕಟ್ಟುನಿಟ್ಟಾಗಿ ದೂರವಿಟ್ಟದ್ದರು. ಅವರು ರಾಜಕೀಯದೊಂದಿಗಿನ ಯಾವುದೇ ಸಂಬಂಧವನ್ನು ಒತ್ತುಕೊಟ್ಟು ಹೇಳಿದಂತೆ, ನಿರಾಕರಿಸಿದರು. ಭಾರತವು ಅವರ ಪ್ರೇಮವಾಗಿತ್ತು. ಅವರು ಭಾರತಕ್ಕಾಗಿಯೇ ಜೀವಿಸಿದ್ದು, ನಂತರ ಮೃತರಾದರು. ಭಾರತವು ಅವರ ಜೀವನದೊಂದಿಗೆ, ಪ್ರತ್ಯೇಕಿಸಲಾಗದ ರೀತಿಯಲ್ಲಿ, ಸೀಮಿತವಾಗಿತ್ತು.

ಅವರ ಆಳವಾದ ಅಧ್ಯಯನ, ಕೂಲಂಕಷವಾದ ಅವಲೋಕನ, ಭಾವುಕತೆ ಇಲ್ಲದ ಚಿಂತನೆ, ವಿವೇಕಯುಕ್ತವಾದ ಬಳಿಸಾರುವಿಕೆ ಮತ್ತು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಂಗತಿಗಳು ಮುಂತಾದವನ್ನು ಆಧರಿಸಿದ್ದ, ಅವರ ಎಷ್ಟೋ ಭವಿಷ್ಯ ನುಡಿಗಳು, ಈಗ ಆಶ್ಚರ್ಯಕರವಾದ ರೀತಿಯಲ್ಲಿ ನಿಜವಾಗಿದೆ. ಅವರ ಸಮಕಾಲೀನರು ಯಾರೂ ಆ ಬಗ್ಗೆ ತಮ್ಮ ಕನಸಿನಲ್ಲಿಯೂ ಕಂಡಿರಲಿಲ್ಲ.

ಅವರು ಮಹಾಯುದ್ಧಗಳ ಬಗ್ಗೆ, ಕಾರ್ಮಿಕ ವರ್ಗದವರ ಪ್ರಾಬಲ್ಯ, ವಿಶ್ವಶಾಂತಿಗೆ ಮಿಲಿಟರಿ ಶಕ್ತಿಯ ನಿಷ್ಪ್ರಯೋಜಕತೆ ಮುಂತಾದವುಗಳ ಬಗ್ಗೆ ಮುನ್ಸೂಚನೆ ನೀಡಿದ್ದರು.

ಅವರು, ಇಂದು ನಾವೆಲ್ಲರೂ ಅನುಭವಿಸುತ್ತಿರುವ, ಜನಸಾಮಾನ್ಯರ

ಸುಪ್ತಶಕ್ತಿಯ ಬಗ್ಗೆ ತಮ್ಮ ವಿದ್ಯಾವಂತರ ದುರ್ದೆಸೆಯ ಬಗ್ಗೆ ಹೇಳುತ್ತಾ, "ರೈತ, ಮೋಚಿ, ಝಾಡಮಾಲಿ ಮತ್ತು ಅಂಥವೇ ಇತರ ಕೆಳಗಿನ ಭಾರತೀಯ ವರ್ಗಗಳಲ್ಲಿ, ನಿಮಗಿಂತ ಹೆಚ್ಚಿನ ಕಾರ್ಯದಕ್ಷತೆ ಮತ್ತು ಸ್ವಾವಲಂಬನೆ ಇದೆ. ಅವರೆಲ್ಲರೂ ಬಹಳ ಹಿಂದಿನಿಂದಲೂ ಮೌನವಾಗಿ ಕೆಲಸಮಾಡಿಕೊಂಡು ಬಂದು, ಯಾವ ದೂರೂ ಇಲ್ಲದೆ, ಪೂರ್ಣವಾಗಿ ಜಮೀನಿನಲ್ಲಿ ಐಶ್ವರ್ಯವನ್ನು ಉತ್ಪಾದಿಸುತ್ತಿದ್ದಾರೆ. ಶೀಘ್ರದಲ್ಲೇ ಸ್ಥಾನಮಾನದಲ್ಲಿ, ಅವರು ನಿಮಗಿಂತ ಉನ್ನತ ಸ್ಥಿತಿಗೇರುತ್ತಾರೆ. ಕ್ರಮಶಃ ಬಂಡವಾಳವು, ಅವರ ಹಸ್ತಗಳಿಗೆ ಅನಿಶ್ಚಿತವಾಗಿ ಸಾಗುತ್ತಿದೆ ಮತ್ತು ಆವಶ್ಯಕತೆಗಳಿಗಾಗಿ ನಿಮ್ಮಷ್ಟು ಅವರು ತೊಂದರೆಪಡುತ್ತಿಲ್ಲ. ಆಧುನಿಕ ಶಿಕ್ಷಣವು ನಿಮ್ಮ ಶೈಲಿಯನ್ನೇ ಬದಲಾಯಿಸಿದೆ. ಆದರೆ ಸಂಪತ್ತಿನ ಹೊಸ ಮಾರ್ಗಗಳು, ಆವಿಷ್ಕರಣದ ಅಸಾಧಾರಣ ಪ್ರತಿಭೆಯ ಅಭಾವದಿಂದಾಗಿ, ಪತ್ತೆ ಹಚ್ಚಲಾಗದೆ ಉಳಿದಿವೆ. ನೀವೆಲ್ಲರೂ ಇಲ್ಲಿಯವರೆಗೂ ತಾಳ್ಮೆಯುಕ್ತ ಜನತೆಯನ್ನು ತಲೆ ಎತ್ತದಂತೆ ಮಾಡಿಟ್ಟಿದ್ದಿರಿ. ಈಗ ಅವರ ಮರುಮುಯ್ಯಿಗೆ ಕಾಲ ಒದಗಿದೆ. ನೀವೆಲ್ಲರೂ ಕೆಲಸಗಳನ್ನು ಹುಡುಕಿಕೊಳ್ಳುವುದರಲ್ಲೇ ಕಾಲ ಕಳೆದು, ಅದನ್ನೇ ನಿಮ್ಮ ಜೀವನದ ಇರವು ಮತ್ತು ಅಳಿವು ಎಂದುಕೊಂಡು ನಿರ್ನಾಮವಾಗುವಿರಿ," ಎಂದರು.

"ಯಾವ ದೇಶಕ್ಕೂ ಒಂಟಿತನದಲ್ಲಿ ಪ್ರವರ್ಧಮಾನವಾಗುವುದು ಸಾಧ್ಯವಿಲ್ಲ" ಎಂಬುದನ್ನು ಅವರು ಗುರುತಿಸಿದ್ದರು. ಪಾಶ್ಚಾತ್ಯ ದೇಶಗಳು, ವೇದಾಂತವಿಲ್ಲದೆ ಬದುಕುವುದು ಅಸಾಧ್ಯವಾದರೆ, ಭಾರತವು ವಿಜ್ಞಾನದ ವಿದ್ಯೆಯಿಲ್ಲದೆ ಮುನ್ನಡೆಯಲು ಸಾಧ್ಯವಿಲ್ಲ ಮತ್ತು ಈ ವಿನಿಮಯದಲ್ಲೇ ಮಾನವೀಯತೆಗೆ ಮುಕ್ತಿ ಎಂಬುದನ್ನು ಅವರು ಅರಿತಿದ್ದರು.

## ೧೦

ಸ್ವಾಮಿ ವಿವೇಕಾನಂದರು, ತಮ್ಮ ಬಗ್ಗೆ ಹೇಳಿಕೊಳ್ಳುತ್ತಾ ನಿಜವಾಗಿಯೂ, ತಮ್ಮನ್ನು ಘನೀಕೃತ ಭಾರತ ಎಂದು ಹೇಳಿಕೊಂಡಿದ್ದರು. ಅವರ ಜೀವನ ಹಾಗೂ ಕೆಲಸಗಳಲ್ಲಿ ಇಂದು ಭಾರತವು ಅನುಭವಿಸುತ್ತಿರುವ ಅಥವಾ ಮುಂದೆ ಅನುಭವಿಸುವ ಎಷ್ಟೋ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಅಥವಾ ಧಾರ್ಮಿಕ ತೊಂದರೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಬಹುದಾಗಿದೆ. ಅವರ ಹೇಳಿಕೆಗಳು, ನಿಜಕ್ಕೂ, ಭವಿಷ್ಯತ್ಕಾಲದ ಸಂಪೂರ್ಣ ವೇದವೇ ಆಗಿ ನಿಯೋಜಿತವಾಗಿದೆ. ಶಾಶ್ವತ ನಿರ್ಭಯತೆ ಮತ್ತು ನಮ್ಮ ಸ್ವಂತದ ಬಗ್ಗೆ ನಿರಂತರ ನಂಬಿಕೆ ಎಂಬುದು ಅವರ ಜೀವನದ ವೇದವಾಕ್ಯವಾಗಿತ್ತು. ನಮ್ಮ ಮನಸ್ಸಿನಿಂದ, ಅಶಕ್ತತೆಯ ಎಲ್ಲಾ ಭಾವನೆಗಳನ್ನೂ ತೊಡೆದುಹಾಕುವುದೇ ಅವರ ನಿರಂತರ ಒತ್ತಾಯವಾಗಿತ್ತು. "ಆತ್ಮದ ದಿವ್ಯತೆಯ ವೇದಾಂತದ ಸತ್ಯತೆ ಮತ್ತು ಅಸ್ತಿತ್ವದಲ್ಲಿನ ಏಕತೆ, ಎರಡೂ ಒಂದೆಡೆಯಲ್ಲಿ ಭಾರತೀಯ



ಜನತೆಯ ಬಾಹ್ಯ ಮನಸ್ತಾಪಗಳನ್ನು ಹಿತಗೊಳಿಸಿದರೆ, ಮತ್ತೊಂದೆಡೆ ರಾಷ್ಟ್ರದಲ್ಲಿ ಅಪಾರ ಮನಸ್ತಾಪಗಳನ್ನು ತುಂಬುತ್ತದೆ" ಎಂಬುದು ಅವರ ದೃಢ ನಂಬಿಕೆಯಾಗಿತ್ತು. ಅವರ ಐಕ್ಯತೆ ಮತ್ತು ಶಾಶ್ವತ ಧರ್ಮಗಳ ವಿಶ್ವೈಕ್ಯವಾದದಲ್ಲಿ, ವಿಶ್ವವ್ಯಾಪಿ ಸಾರ್ವಜನಿಕ ಹೊಂದಾಣಿಕೆಯ ನೆಲೆಗಳೇ ಕಾಣಬಹುದು.

* * * *

# ೩. ಸ್ವಾಮಿ ರಾಮತೀರ್ಥರು

ನವೀನ ಭಾರತದ ಆಗಮನವನ್ನು ಪೋಷಿಸಿದ ಅತ್ಯಂತ ಗಮನಾರ್ಹ ಗಣ್ಯವ್ಯಕ್ತಿಗಳಲ್ಲಿ ಸ್ವಾಮಿ ರಾಮತೀರ್ಥರೂ ಒಬ್ಬರಾಗಿದ್ದರು. ಅವರು ೧೮೭೩ನೆಯ ಇಸವಿಯಲ್ಲಿ ಪಂಜಾಬಿನ ಮುರಳೀವಾಲ ಎಂಬ ಹಳ್ಳಿಯಲ್ಲಿ ಹುಟ್ಟಿದರು. ಒಮ್ಮೆ ಗಂಗೆಯಲ್ಲಿ ಸ್ನಾನಮಾಡುತ್ತಾ, ಹಿಮಾಲಯದ ತೆಹ್ರಿ ಘರ್‌ವಾಲ್‌ನಲ್ಲಿ ೧೯೦೬ನೆಯ ಇಸವಿಯಲ್ಲಿ ಆಕಸ್ಮಿಕದಿಂದಾಗಿ ಮರಣಹೊಂದಿದರು. ಆಗ ಅವರ ವಯಸ್ಸು ಕೇವಲ ಮೂವತ್ಮೂರು ವರ್ಷಗಳು.

ಕಾಯಕಗಳಲ್ಲಿ ನಾವು ಜೀವಿಸುವುದು, ದಿನಗಳಲ್ಲಲ್ಲ;
ಭಾವನೆಗಳಲ್ಲಿ, ಉಸಿರಿನಲ್ಲಲ್ಲ;
ಅನುಭವಗಳಲ್ಲಿ, ಮುಖಫಲಕಗಳ ಅಂಕೆಗಳಲ್ಲಲ್ಲ.

ಯಾವಾಗ ಹೆಚ್ಚು ಚಿಂತಿಸುವನೋ, ಉದಾತ್ತತೆಗಳನ್ನು ಅನುಭವಿಸುವನೋ, ಉತ್ತಮವಾಗಿ ಕಾರ್ಯ ನಿರ್ವಹಿಸುವನೋ, ಅವನು ಹೆಚ್ಚು ಕಾಲ ಬಾಳುತ್ತಾನೆ ;

"ಹಾಗಾದರೆ ದುಡಿಯಿರಿ ; ದುಡಿಯಿರಿ ; ಹೃತ್ಪೂರ್ವಕವಾಗಿ ಕೆಲಸಮಾಡಿ; ನಿಮ್ಮ ಶಕ್ತಿಯನ್ನೆಲ್ಲಾ ಉಪಯೋಗಿಸಿ ದುಡಿಯಿರಿ; "ಕಾಯಕವೇ ಕೈಲಾಸ" ಎಂದು ದುಡಿಯಿರಿ. ಕೆಲಸವೇ ಜೀವನ ಎಂಬುದನ್ನು ನೆನಪಿಡಿ. ಅಸಾಧಾರಣ ಪ್ರತಿಭೆಯ ಕೆಲಸವು, ತನ್ನನ್ನೇ ಪುರಸ್ಕರಿಸಿಕೊಳ್ಳುತ್ತದೆ. ಕೆಲಸವೇ ಮಾನವನ ಸಹಜಸ್ಥಿತಿ"– ತೀರ್ಥರಾಮ ಗೋಸಾಯಿನ್ ಎಂ.ಎ. (ಭವಿಷ್ಯತ್ಕಾಲದ ಸ್ವಾಮಿ ರಾಮತೀರ್ಥರು), ಲಾಹೋರಿನ ಫಾರ್‌ಮನ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಗಣತದ ಪ್ರೊಫೆಸರ್ ಆಗಿದ್ದರು. ಆಗ "ಗಣಿತದಲ್ಲಿ ಮೇಲ್ಮೆಯನ್ನು ಗಳಿಸುವುದು ಹೇಗೆ", ಎಂಬ ವಿಷಯದಲ್ಲಿ ಭಾಷಣ ನೀಡುತ್ತಾ, ಮೇಲಿನ ಪದಗಳನ್ನು ಉಚ್ಚರಿಸಿದರು. ಎರಡೇ ವರ್ಷಗಳ ನಂತರ, ಅವರು ಹಿಮಾಲಯಕ್ಕೆ ನಿರ್ಗಮಿಸಿ, ಸಂನ್ಯಾಸಿಯಾದರು. ನಂತರ ಜಪಾನ್, ಅಮೆರಿಕಾ ಸುತ್ತಿ ೧೯೦೪ರಲ್ಲಿ ಭಾರತಕ್ಕೆ ವಾಪಸ್ಸು ಬಂದರು, ೧೯೦೬ನೆಯ ವರ್ಷದಲ್ಲಿ ಆಕಸ್ಮಿಕವಾಗಿ ಮೇಲೆ ತಿಳಿಸಿದಂತೆ ಮುಳುಗಿ ಸತ್ತರು. "ಒತ್ತಾಗಿ ತುಂಬಿದ ಗೌರವದ ಒಂದು ಗಂಟೆಯು, ಒಂದು ಹೆಸರಿಲ್ಲದ ಯುಗದಷ್ಟು ಪ್ರಶಂಸಾರ್ಹ" ಎಂದು ಘೋಷಿಸಿದ ಮಹಾತ್ಮ ಗಾಂಧಿ ಅವರು, "ಸ್ವಾಮಿ ರಾಮ ಅವರ



ಬೋಧನಗಳನ್ನು ಪ್ರಸಾರಮಾಡಬೇಕು. ಅವರು ಭಾರತಕ್ಕಷ್ಟೇ ಅಲ್ಲದೆ, ಇಡೀ ಪ್ರಪಂಚಕ್ಕೇ ಸೇರಿದ, ಉತ್ತಮ ಜೀವಿಗಳಲ್ಲಿ ಒಬ್ಬರಾಗಿದ್ದರು. ನಾನು ಅವರ ಆದರ್ಶಗಳಿಗೆ ತಲೆಬಾಗುತ್ತೇನೆ," ಎಂದಿದ್ದಾರೆ.

ಸ್ವಾಮಿ ರಾಮತೀರ್ಥರ ಹಿರಿಮೆ, ಅಸಾಧಾರಣ ಪ್ರತಿಭೆ ಮತ್ತು ಆದರ್ಶಗಳ ಮಿನುಗು ನೋಟವನ್ನು, ಅವರ ಜೀವನವಿಧಾನ, ಬರಹಗಳು ಅಥವಾ ಭಾಷಣಗಳ ಸಂಕ್ಷಿಪ್ತ ಅವಲೋಕನ ಮಾತ್ರದಿಂದ ಪಡೆಯಬಹುದು. ಬಿಸಿಲಿನಲ್ಲಿ ಕಳೆದ ಕೆಲವು ಕ್ಷಣಗಳು, ಅದರ ಪ್ರಕಾಶದ ಮೂಲದ ಬಗ್ಗೆ ನಮಗೆ ಅರಿವು ಮೂಡಿಸುತ್ತದೆ.

ತಮ್ಮ ಬಾಲ್ಯದಿಂದ ಅರಳಿಕೊಂಡೆದ್ದು, ನವಭಾರತದ ಧರ್ಮಪ್ರವರ್ತಕರಾಗಿ ಶೋಭಿಸಿದವರೆಗಿನ, ತೀರ್ಥರಾಮ ಗೋಸಾಯಿನ್ ಅವರ ಜೀವನಯಾತ್ರೆಯು ಬಹಳ ಪ್ರಭಾವ ಬೀರುವಂಥದ್ದಾಗಿದೆ. ಶಾಲೆಯಲ್ಲಿ ಅವರು ಗುಲಿಸ್ತಾನ್ ಮತ್ತು ಬೋಸ್ತಾನ್‌ಗಳ ವಾಚನದಿಂದ (ನಿರೂಪಣೆಯಿಂದ), ಇಂಗ್ಲಿಷ್ ಸಾಹಿತ್ಯ, ಗಣಿತ ಮತ್ತು ಸಂಸ್ಕೃತಗಳ ಪಾರಂಗತರಾದರು.

ಬಿ.ಎ. ಪರೀಕ್ಷೆಯ ದಿನ ಹೆಚ್ಚಿನ ವಿದ್ಯಾರ್ಥಿಗಳಿಗೆ ಗಣಿತದ ಪ್ರಶ್ನೆಪತ್ರಿಕೆ ಬಹಳ ಕಷ್ಟವಾಗಿತ್ತು ಎನಿಸಿತ್ತು. ಜೊತೆಗೆ ಅದರ ಬಗ್ಗೆ ಸಾರ್ವಜನಿಕ ಮುದ್ರಣಾಲಯದಲ್ಲಿ ದೂರುಗಳೆದ್ದವು. ಹದಿಮೂರು ಪ್ರಶ್ನೆಗಳಲ್ಲಿ ಒಂಬತ್ತು ಪ್ರಶ್ನೆಗಳನ್ನು ಪ್ರಯತ್ನಿಸಬೇಕಾಗಿತ್ತು. ಆದರೆ ರಾಮತೀರ್ಥರು ಎಲ್ಲಾ ಹದಿಮೂರು ಲೆಕ್ಕಗಳನ್ನು ಮಾಡಿ ಮುಗಿಸಿ, ಪರೀಕ್ಷಕರನ್ನೇ ತಮಗೆ ಬೇಕಿದ್ದ ಒಂಬತ್ತು ಪ್ರಶ್ನೆಗಳನ್ನು ಆಯ್ಕೆಮಾಡಿಕೊಳ್ಳುವಂತೆ ಬೇಡಿಕೊಂಡಿದ್ದರು. ಅವರು ಕಡೆಗೆ, ತೊಂಬತ್ತೆಂಟು ಅಂಕಗಳನ್ನು ಗಳಿಸಿದ್ದರು. ಎಂ.ಎ. ಪರೀಕ್ಷೆ ಮುಗಿಸಿದ ನಂತರ ತಮ್ಮ ಕಾಲೇಜಿನಲ್ಲೇ ಪ್ರೊಫೆಸರರಾಗಿ ಕೆಲಸವನ್ನು ಪಡೆದುಕೊಂಡರು ಎಂದರೆ ಆಶ್ಚರ್ಯವೇನಿಲ್ಲ !

ಅವರು ಜನಿಸಿದ್ದು ಒಂದು ಸಾಧಾರಣವಾದ ಹಳ್ಳಿಯಲ್ಲಿ. ಹುಟ್ಟಿದ ತಕ್ಷಣವೇ ತಾಯಿಯನ್ನು ಕಳೆದುಕೊಂಡರು. ಅವರ ತಂದೆ, ಒಬ್ಬ ನಿರ್ಗತಿಕ ಪೂಜಾರಿಯಾಗಿದ್ದರು. ಈ ಎಲ್ಲಾ ಅಡ್ಡಿಗಳೊಂದಿಗೆ ಅವರು ಶಾಲೆ, ಕಾಲೇಜು ಎಲ್ಲದರಲ್ಲಿಯೂ ವಿದ್ಯಾರ್ಥಿವೇತನಗಳ ಮೇಲೆ ವಿದ್ಯಾರ್ಥಿವೇತನಗಳನ್ನು ಗಳಿಸುತ್ತಾ, ಸುಮಾರು ಹಣ ಖರ್ಚುಮಾಡಿ ಪುಸ್ತಕಗಳನ್ನು ಕೊಳ್ಳುತ್ತಿದ್ದರು. ಅವರು ತಮಗಿಂತ ದರಿದ್ರರಾಗಿದ್ದ ಹುಡುಗರಿಗೂ ಸಹಾಯ ಮಾಡುತ್ತಿದ್ದರು. ಅವರ ಉಡುಪು ಹಾಗೂ ಆಹಾರಗಳು ಅತ್ಯಂತ ಸಾಮಾನ್ಯತರದ್ದಾಗಿರುತ್ತಿದ್ದವು. ತಮ್ಮ ದೀವಟಿಕೆಗೆ ಎಣ್ಣೆ ತರಲೆಂದು ಅವರು ಬರೀಹೊಟ್ಟೆಯಲ್ಲೇ ಹೋಗುತ್ತಿದ್ದುದುಂಟು. ದಿನನಿತ್ಯದ ಅಭ್ಯಾಸಗಳು ಮತ್ತು ಅಂಗಸಾಧನೆಗಳಿದ್ದರೂ, ಅವರ ದೇಹದಾರ್ಢ್ಯ ಅತ್ಯಂತ ಕಳಪೆ ಮಟ್ಟದ್ದಾಯಿತು. ನಂತರ ಅವರು ತಮ್ಮ ಆತ್ಮಸಂಯಮದಿಂದ, ಅವುಗಳನ್ನು ಉತ್ಪಾದಿಸಿಕೊಂಡರು. ಅವರ ಚೇತರಿಕೆಯು ಎಂಥ ಪವಾಡ ಸದೃಶವಾಗಿತ್ತು ಎಂದರೆ, ಕೇವಲ ತಮಾಷೆಗಾಗಿ

ಅವರು ನಿರಾಯಾಸವಾಗಿ, ಆರಾಮವಾಗಿ, ಹಿಮಾಲಯದಲ್ಲಿ ನಲವತ್ತು ಮೈಲಿಗಳ ಯಾತ್ರೆ ಮುಗಿಸಿ ಬಂದರು. ಅವರು ಯು.ಎಸ್.ಎ. ನಲ್ಲಿದ್ದಾಗ ಒಂದು ಪೂರ್ಣವೇಗದ ಪಂದ್ಯದಲ್ಲಿ ಅಮೇರಿಕದ ಸಿಪಾಯಿಗಳನ್ನೇ ಸೋಲಿಸಿದರು.

ಅವರು, ತಮ್ಮ ಆಧ್ಯಾತ್ಮಿಕ ಮಾರ್ಗದರ್ಶಿ ಭಗತ್ ಧನ್ನಾಜಿ ಅವರಿಗೆ, ಬರೆದಿದ್ದ ಸಾವಿರಕ್ಕೂ ಹೆಚ್ಚು ಪತ್ರಗಳು ನಮ್ಮ ಅದೃಷ್ಟದಿಂದ ಇಂದಿಗೂ ಲಭ್ಯವಾಗಿವೆ. ಅವು ಉರ್ದು ಭಾಷೆಯಲ್ಲಿದ್ದು ಪುಸ್ತಕದ ರೀತಿಯಲ್ಲಿವೆ. ಅದರಲ್ಲಿ ನಾವು ರಾಮತೀರ್ಥರ ವಿದ್ಯಾರ್ಥಿ ಜೀವನವನ್ನು, ಕನ್ನಡಿಯಲ್ಲಿ ಕಾಣುವಂತೆ ಸ್ಪಷ್ಟವಾಗಿ ಕಾಣಬಹುದು. ಅವರು ಸೂರ್ಯೋದಯಕ್ಕಿಂತ ಮುಂಚೆ, ಬೆಳಗ್ಗೆ ಐದು ಘಂಟೆಗೇ ಏಳುತ್ತಿದ್ದರು. ರಾತ್ರಿ ಹತ್ತೂವರೆಯ ಮೇಲೆ ಮಲಗುತ್ತಿದ್ದರು. ಈ ಅವಧಿಯಲ್ಲಿ ಅವರು ಒಂದು ಕ್ಷಣವನ್ನೂ ವ್ಯರ್ಥಮಾಡುತ್ತಿರಲಿಲ್ಲ.

ಸ್ವಾಮಿ ರಾಮ ಅವರು, ಟೋಕಿಯೋ ಮತ್ತು ಸ್ಯಾನ್‌ಫ್ರಾನ್ಸಿಸ್ಕೋಗಳಲ್ಲಿ ನೀಡಿದ ಎರಡು ಭಾಷಣಗಳನ್ನು ಇಲ್ಲಿ ಉದಾಹರಿಸಬಹುದು. ಮೊದಲನೆಯದು "ಯಶಸ್ಸಿನ ಗುಟ್ಟು" ಎಂಬುದು, ಎರಡನೆಯದು ಭಾರತದ ಪರವಾಗಿ ಅಮೇರಿಕನ್ನರಿಗೆ ಮನವಿ ಎಂಬುದು. ಅವರ ಭಾಷೆಯು ಸರಳವೂ, ನೇರವೂ ಹಾಗೂ ಶಕ್ತಿಯುತವಾಗಿಯೂ ಇದ್ದು, ಭಾಷಣಗಳಲ್ಲಿ ದೃಷ್ಟಾಂತ ಕಥೆಗಳು ಮತ್ತು ಐತಿಹ್ಯಗಳು ತುಂಬಿರುತ್ತಿದ್ದವು. ನಾನು ಮೆಟ್ರಿಕ್ಯೂಲೇಷನ್ನಿನ ಪರೀಕ್ಷೆಯನ್ನು ಮುಗಿಸಿಕೊಳ್ಳುವುದಕ್ಕಿಂತ ಮುಂಚೆ, ಅವರ ಬರಹಗಳನ್ನು ಓದಿದಾಗ, ಅವರು ನನ್ನ ಆತ್ಮಕ್ಕೆ ಅಗ್ನಿಸ್ಪರ್ಶ ಮಾಡಿದರು. ಅವು ನನಗೆ ಈಗಲೂ ಸ್ಫೂರ್ತಿ ನೀಡುತ್ತಿವೆ.

ಸ್ವಾಮಿ ರಾಮ ಅವರ ಪ್ರಕಾರ, ವಿಜಯದ ಗುಟ್ಟು ಇರುವುದು (೧) ಕೆಲಸದಲ್ಲಿ, (೨) ಸ್ವಾವಲಂಬನೆಯಲ್ಲಿ, (೩) ಸ್ವ–ನಿರ್ಲಕ್ಷ್ಯತೆಯಲ್ಲಿ, (೪) ವಿಶ್ವವ್ಯಾಪಿ ಪ್ರೇಮದಲ್ಲಿ, (೫) ಪ್ರಸನ್ನತೆಯಲ್ಲಿ ಮತ್ತು (೬) ನಿರ್ಭಯತೆಯಲ್ಲಿ. ಎಲ್ಲವನ್ನೂ ಒಂದುಗೂಡಿಸಿ, ಅವರು, "ನನ್ನ ಅಧ್ಯಾತ್ಮವನ್ನು ಒಂದೇ ಪದದಲ್ಲಿ ಹೇಳಬೇಕೆಂದು ಯಾರಾದರೂ ಕೇಳಿದರೆ, ನಾನು, 'ಸ್ವಾವಲಂಬನೆ' ಎಂತಲೇ ಹೇಳುತ್ತೇನೆ," ಎಂದಿದ್ದಾರೆ. ಜೊತೆಗೆ, "ರಾಮ ಜಪಾನಿಗೆ ತರುವ ಧರ್ಮವು, ವಾಸ್ತವವಾಗಿ ಶತಮಾನಗಳ ಹಿಂದೆ ಬುದ್ಧನ ಅನುಯಾಯಿಗಳು ತಂದ ಧರ್ಮವೇ ಆಗಿದೆ... ಆದರೆ, ಪಾಶ್ಚಾತ್ಯ ವಿಜ್ಞಾನ ಮತ್ತು ಜೀವನಕ್ರಮದ ದೃಷ್ಟಿಯಲ್ಲಿ ಅದನ್ನು ಪ್ರಕಾಶಮಾನವಾಗಿಸಬೇಕಾಗಿದೆ," ಎಂತಲೂ ಸೇರಿಸಿದ್ದಾರೆ.

ಅಮೇರಿಕನ್ನರನ್ನು ಕುರಿತ ತಮ್ಮ ಮನವಿಯಲ್ಲಿ, ಅವರು, "ಇಡೀ ಪ್ರಪಂಚಕ್ಕಾಗಿ ಭಾರತದ ಧ್ಯೇಯವನ್ನು ಪ್ರಾರಂಭಿಸಬೇಕೆಂದು ರಾಮ ಕೇಳುತ್ತಾನೆ. ಸತ್ಯ, ಧರ್ಮಗಳ ಹೆಸರಿನಲ್ಲಿ, ಭಾರತದ ಕಾರಣವನ್ನ ದೃಢಸಂಕಲ್ಪದಿಂದ ಮುಂದುವರಿಸಬೇಕೆಂದು, ರಾಮ, ನಿಮ್ಮನ್ನು ಕೇಳಿಕೊಳ್ಳುತ್ತಾನೆ" ಎಂದಿದ್ದಾರೆ.



ಅವರ ಭಾಷಣದ ರೀತಿಯು, ಅದ್ಭುತವಾಗಿಯೂ ಮತ್ತು ಮನಸ್ಸನ್ನು ಸೂರೆಗೊಳ್ಳುವಂತೆಯೂ ಇತ್ತು. ಅವರು, "ಮಹಿಳೆಯರು ಮತ್ತು ಮಹನೀಯರ ರೂಪದಲ್ಲಿರುವ ನನ್ನ ಆತ್ಮನೇ" ಎಂದು ಪ್ರಾರಂಭಿಸಿ, ನಂತರ ತಮಗೇ ಉತ್ತಮ ಪುರುಷರಲ್ಲಿ 'ರಾಮ' ಎಂದು ಪ್ರಸ್ತಾಪ ಮಾಡಿಕೊಳ್ಳುತ್ತಿದ್ದರು.

ಅವರು ಭಾರತದ ಭವಿಷ್ಯದ ಬಗ್ಗೆ ಮುನ್ಸೂಚನೆ ನೀಡುತ್ತಾ, "ಅನೇಕ ಆತ್ಮಗಳ ಮೂಲಕ ಕೆಲಸಮಾಡುತ್ತಿದ್ದರೂ ಸರಿ ಅಥವಾ ಒಂಟಿಯಾಗಿದ್ದರೂ ಸರಿ, ರಾಮ ಗಂಭೀರವಾಗಿ ಆಶ್ವಾಸನೆ ನೀಡುವುದು, ಅವರು ಮುಂದಿನ ಹತ್ತು ವರ್ಷಗಳಲ್ಲಿ ಭಾರತದಲ್ಲಿ ಕರಾರುವಾಕ್ಕಾದ ಜೀವನವನ್ನು ತುಂಬಿ, ಅಲ್ಲಿರುವ ದೌರ್ಬಲ್ಯಗಳು ಮತ್ತು ಅಜ್ಞಾನವನ್ನು ನಿರ್ಮೂಲ ಮಾಡುತ್ತಾರೆ ಎಂತಲೇ ಹೌದು. ಜೊತೆಗೆ ಇಪ್ಪತ್ತನೆಯ ಶತಮಾನದ ಮೊದಲ ಅರ್ಧಭಾಗದಲ್ಲಿ ಭಾರತವು ತನ್ನ ಮೂಲಭೂತ ಘನತೆಗಿಂತಲೂ ಹೆಚ್ಚಾಗಿ, ಉತ್ತಮ ಸ್ಥಿತಿಗೆ ಬರುತ್ತದೆ", ಎಂದಿದ್ದರು. ಹೀಗೆ ಸುಮಾರು ಅರವತ್ತು (ನೂರು) ವರ್ಷಗಳಿಗೆ ಹಿಂದಿನ ಭವಿಷ್ಯವಾಣಿಯ ಪದನಿಷ್ಠಪೂರ್ಣ ವಿಕಾಸಕ್ಕೆ ನಾವು ಸಾಕ್ಷಿಗಳಾಗಿಲ್ಲವೇ!

ಸ್ವಾಮಿ ರಾಮ, ಕೇವಲ ಆದರ್ಶಪ್ರಾಯದ ಕಲ್ಪನಾವಿಹಾರಿ ಆಗಿರಲಿಲ್ಲ. ಅವರಲ್ಲಿ ರಚನಾತ್ಮಕವಾದ ಹಾಗೂ ಸೃಷ್ಟಿ ಶೀಲ ಭಾವನೆಗಳು ತುಂಬಿ ತುಳುಕುತ್ತಿದ್ದವು. ಅವರು ಜಪಾನಿನಲ್ಲಿದ್ದರೂ ಸರಿ, ನಾರ್ವೆಯಲ್ಲಿದ್ದರೂ ಸರಿ, ಅಥವಾ ಹಿಮಾಲಯದಲ್ಲಿ ಸುತ್ತುತ್ತಿದ್ದರೂ ಸರಿ, ಅವರ ಭಾವನೆಗಳಂತೂ ಭಾರತ ಮಾತೆಯನ್ನೆ ಎಂದರೆ ಅವರ "ಇಷ್ಟ ದೇವತೆಯನ್ನೇ," ಸುತ್ತುತ್ತಿದ್ದವು. ಅವರು "ಎಲ್ಲಿಯವರೆಗೂ ತನ್ನ ದೇಹದೊಳಗಿನ ಪ್ರತಿಯೊಂದು ನರವೂ, ಇಡೀ ರಾಷ್ಟ್ರದೊಳಗಿನ ಐಕ್ಯತೆಗಾಗಿ, ಜೋರಾಗಿ ಮಿಡಿಯುವುದಿಲ್ಲವೋ ಅಲ್ಲಿಯುವರೆಗೆ, ಮನುಷ್ಯನಿಗೆ ಭಗವಂತನೊಂದಿಗಿನ–ಸರ್ವಸ್ವದೊಂದಿಗಿನ ಐಕ್ಯತೆಯ ಅರಿವು ಎಂದಿಗೂ ಉಂಟಾಗದು. ಪ್ರತಿಯೊಬ್ಬ ಪುತ್ರನಲ್ಲಿಯೂ, ಇಡೀ ಭಾರತವೇ ಮೈತಳೆದು ನಿಂತಿದೆ ಎಂಬುದನ್ನರಿತು, ಭಾರತದ ಪ್ರತಿಯೊಬ್ಬ ಪುತ್ರನೂ, ಸಮಗ್ರ ಭಾರತದ ಸೇವೆಗಾಗಿ, ಎದ್ದು ನಿಲ್ಲಲಿ. ರಾಷ್ಟ್ರೀಯ ಧರ್ಮಕ್ಕಿಂತ ಹೆಚ್ಚಾಗಿ, ಸ್ವಂತದ ಅಥವಾ ಸ್ಥಳೀಯ ಧರ್ಮಗಳಿರಬಾರದು... ಒಂದು ದೇಶ ಶಕ್ತಿಶಾಲಿಯಾಗುವುದು ಹಿರಿಯರ ಅಲ್ಪದೃಷ್ಟಿಗಳಿಂದಲ್ಲದೆ, ಅಲ್ಪರ ಉತ್ತಮ ದೃಷ್ಟಿಗಳಿಂದ ಮಾತ್ರ," ಎಂದರು.

"ಉತ್ತಮ ದೃಷ್ಟಿಗಳು" ಎಂದರೆ, ಅವರ ಅರ್ಥದಲ್ಲಿ, "ಮೌಲ್ಯಮಾಪನೆಯಲ್ಲದೆ, ಶ್ಲಾಘನೀಯ ಉತ್ಸಾಹ, ಸೌಂದರ್ಯದ ಚಿತ್ತವೃತ್ತಿ, ಸಮನ್ವಯಗಳ ಸಹಜಪ್ರವೃತ್ತಿ, ಕರ್ತವ್ಯಗಳ ಸಂಘಟನೆ ಮತ್ತು ದುಡಿಮೆಯ ಸಂಪನ್ನತೆ," ಎಲ್ಲವೂ ಆಗಿದ್ದವು. ಅವರು, "ಕಾಲಗಣನೆಗನುಗುಣವಾಗಿ, ನೀವು ಹಿಮಾಲಯದ ಋಷಿಗಳ ಅನುವಂಶಿಕತೆಗೆ ಸೇರಿರಬಹುದು. ಆದರೆ, ಮುಕ್ತ ಅವಕಾಶದಲ್ಲಿ, ನೀವು ಕಲೆ

ಮತ್ತು ವಿಜ್ಞಾನದ ವಾಸ್ತವಾಂಶದ ಅರಿವಿಲ್ಲದೆ, ಪ್ರಭಾವ ಚಲಾಯಿಸುವ ಅಥವಾ ಅಧಿಕಾರವನ್ನು ಹೊಂದಿರುವ ಯೂರೋಪಿಯನ್ನರು ಮತ್ತು ಅಮೆರಿಕನ್ನರೊಂದಿಗಿನ ಸಂಬಂಧವನ್ನು ನಿರಾಕರಿಸಲಾರಿರಿ. ಭಾರತವು ಏನಾಗಿತ್ತು ಎಂಬುದರ ಬಗ್ಗೆ ಚಿಂತಿಸಿ, ಸಮಯವನ್ನು ವ್ಯರ್ಥಮಾಡಬೇಡಿ. ನಿಮ್ಮಲ್ಲಿರುವ ಅಪಾರ ಶಕ್ತಿಯನ್ನು ಜ್ಞಾಪಿಸಿಕೊಳ್ಳಿ ಮತ್ತು ಭಾರತ ಹೇಗಿರುತ್ತದೆ ಎಂಬುದನ್ನು ಅನುಭವಿಸಿ; ಅನುಭವಿಸಿ," ಎಂದರು.

ಅವರು, ನಿಗದಿತ ಶಬ್ದಗಳಲ್ಲಿ, "ಸ್ತ್ರೀಯರ, ಮಕ್ಕಳ ಮತ್ತು ಕಾರ್ಮಿಕ ವರ್ಗದವರ ವಿದ್ಯಾಭ್ಯಾಸವನ್ನು ಕಡೆಗಾಣಿಸುವುದಂತೂ, ನಮಗೆ ಆಸರೆಯನ್ನು ನೀಡುತ್ತಿರುವ ಕೊಂಬೆಗಳನ್ನೇ ಕಡಿದಂತೆ. ಇಲ್ಲ, ಅದು ನಮ್ಮ ಪ್ರಜಾಧಿಕಾರ ಸತ್ವದ ಮರದ ಬೇರನ್ನೇ ತುಂಡರಿಸಿಹಾಕಿದಂತೆ," ಎಂದರು.

ಸದ್ಯದಲ್ಲಿ ಪ್ರಚಲಿತವಾಗಿರುವ ಕೋಮುವಾರಿನ ಸಾಂಗತ್ಯರಹಿತತೆಯ ಬಗ್ಗೆ ಮಾತನಾಡುತ್ತಾ, ಅವರು "ಮಾನವಿಕಗಳ (ಮನುಷ್ಯನ ಬಾಳಿಗೆ ಸಂಬಂಧಿಸಿದ ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮುಂತಾದ ವ್ಯಾಸಂಗ ವಿಷಯ) ಶಿಕ್ಷಣ, ವಿವೇಕಯುಕ್ತ ತಿಳಿವಳಿಕೆ, ಪ್ರಾಯೋಗಿಕ ತಪಾಸಣೆ ಅಥವಾ ಒಂದು ವೈಜ್ಞಾನಿಕ ಭಾವನೆಯ ಕಟ್ಟುಪಾಡಿನ ಅಭ್ಯಾಸ, ಎಲ್ಲದರ ಸಾರಸಂಗ್ರಹದ ವಿಧಾನವನ್ನೇ ಶುದ್ಧಗೊಳಿಸದೆ, ಈ ಸ್ವಾರ್ಥಪರ ಭಾವನೆಗಳನ್ನು ಹೋಗಲಾಡಿಸುವುದು ಸಾಧ್ಯವಿಲ್ಲ" ಎಂದು ಸ್ಪಷ್ಟಪಡಿಸಿದರು.

ಪ್ರಗತಿಯಲ್ಲಿದ್ದ ಜಾತೀಯ ಅಸಾಂಗತ್ಯದ ಬಗ್ಗೆ ಮಾತನಾಡುತ್ತಾ, ತಾವು ಒಂದು, ಬದುಕಿನ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಬೇಕೆಂದಿದ್ದರು. ಆದರೆ ದುರಾದೃಷ್ಟದಿಂದ, ಅದನ್ನು ನೋಡಲು, ಅವರು ಬದುಕಿರಲಿಲ್ಲ. ಅದರಲ್ಲಿ ಪುರಾತನ ಭಾರತೀಯ ಜ್ಞಾನ ಮತ್ತು ಆಧುನಿಕ ಯೂರೋಪಿಯನ್ ಜ್ಞಾನ ಎರಡನ್ನೂ, ಪ್ರಯೋಗಶಾಲೆಗಳಲ್ಲಿನ ಪ್ರಯೋಗಗಳೊಂದಿಗೆ ಹೇಳಿಕೊಡುವುದೆಂದಿತ್ತು. ವಿದ್ಯಾರ್ಥಿಗಳೂ ಮತ್ತು ಗುರುಗಳೂ ಒಟ್ಟಿಗೆ ಜೀವಿಸಬೇಕಾಗಿತ್ತು. ವೈಯಕ್ತಿಕ ವಿದ್ಯಾಭ್ಯಾಸಕ್ಕೂ ಉತ್ತೇಜನವಿರುತ್ತಿತ್ತು. ಮತ್ತು ಅದರ ಪರಿಣಾಮಗಳನ್ನು, ಗುರುಗಳ ಮಾರ್ಗದರ್ಶನದಲ್ಲಿ ಸಂಘಟಿತಗೊಳಿಸಿ ಸಮನ್ವಯಗೊಳಿಸುವುದಿತ್ತು. ಕ್ರಮೇಣ ಈ ಮಾನವಿಕ ಶಾಸ್ತ್ರಗಳ ವಿದ್ಯಾಭ್ಯಾಸವು ಔದ್ಯೋಗಿಕ ಕೌಶಲ್ಯತೆಗಳೊಂದಿಗೆ ಸೇರಿಹೋಗುವುದಿತ್ತು.

ಅಮೆರಿಕದಲ್ಲಿನ ಹಿರಿಯ ವಿಶ್ವವಿದ್ಯಾನಿಲಯಗಳಾದ ಯೇಲ್ ಮತ್ತು ಹಾರ್ವರ್ಡ್‌ಗಳು ಖಾಸಗಿ ಸಂಸ್ಥೆಗಳಾಗಿದ್ದವು ಎಂಬುದನ್ನು ಸ್ವಾಮಿ ಅವರು ಗುರುತಿಸಿದ್ದು "ಅದೊಂದು ಅನ್ಯಾಯ. ಭಾರತೀಯರು ಸರ್ಕಾರಿ ಸಂಸ್ಥೆಗಳನ್ನೇ ತಮ್ಮ ವಿದ್ಯಾಭ್ಯಾಸಕ್ಕಾಗಿ ಹುಡುಕುತ್ತಾರೆ. ಅವರು ತಮ್ಮ ಸ್ವಂತದ ಆವಶ್ಯಕತೆಗಳಿಗೆ



ಗಮನಕೊಡುವುದಿಲ್ಲ" ಎಂದರು.

ಅವರು ಸರಳವಾದ ಸಾಧಾರಣವಾದ ಹಿಂದಿ ಭಾಷೆಯಲ್ಲಿ, ಅಶಿಕ್ಷಿತ ಜನರಿಗೆ ವಿದ್ಯೆ ಕಲಿಸಬೇಕಾಗಿದ್ದುದರ ಕ್ಷಿಪ್ರ ಆವಶ್ಯಕತೆಯನ್ನು ಅರಿತಿದ್ದರು. "ಸ್ವಾಭಾವಿಕವಾಗಿರಿ: ನಿಮಗೆ ಬೇಕಾದ ಹಾಗೆ ಬರೆಯಿರಿ," ಎಂದು ಹೇಳಿ, ಮತ್ತೆ, "ಯಾರನ್ನೂ ಅನುಕರಣೆ ಮಾಡಬೇಡಿ. ಸಾರ್ವಜನಿಕ ಶಾಲೆಗಳ ಪದ್ಧತಿಗಾಗಿ, ಕಾಯುತ್ತ ಕೂರಬೇಡಿ. ಪವಿತ್ರ ಹೊಣೆಗಾರಿಕೆ ನಿಮ್ಮ ಹೆಗಲುಗಳ ಮೇಲಿದೆ. ಭಾರತವು ಬದುಕಬೇಕಾದರೆ, ನಿಮ್ಮ ದೇಶದಲ್ಲಿ ಯಾವ ಮಹಿಳೆಯೂ, ಬಡಮನುಷ್ಯನೂ ನಿರಕ್ಷರಸ್ಥನಾಗಿರಬಾರದು ಎಂಬುದನ್ನು ನೋಡಿಕೊಳ್ಳಿ. ದೇಶದ ಮುಖದಿಂದ, ಈ ಮೌಢ್ಯತೆಯ ಗುರುತನ್ನು ಅಳಿಸಿಹಾಕಿ" ಎಂದರು.

ಅವರೊಮ್ಮೆ, "ನಿಮ್ಮ ಅಕ್ಕಪಕ್ಕದಲ್ಲಿರುವ ಝಾಡಮಾಲಿ ಹೆಂಗಸಿಗೆ ಪಾಠ ಕಲಿಸಲು, ನಿಮಗೆ ನಾಚಿಕೆಯೇನು?" ಎಂದು ಪ್ರಶ್ನಿಸಿ, "ಹಾಗಾದರೆ ನಿಮ್ಮ ಶೈಲಿಗಳನ್ನು ಮತ್ತು ನೀತಿಗಳನ್ನು ಬದಲಿಸಿಕೊಳ್ಳಿ" ಎಂದರು.

ಅವರು ಬಹಳ ಮುಂದುವರಿದ ದೇಶಗಳಂತೆ ಕೃಷಿ ಉತ್ಪನ್ನದ ಕಲೆಗಳು ಮತ್ತು ಉದ್ಯಮಗಳನ್ನು ಪಡೆದುಕೊಳ್ಳಲು ಒಂದು ಅತ್ಯಂತ ನೇರವಾದ ಮತ್ತು ಅತ್ಯಗತ್ಯವಾದ ಆವಶ್ಯಕತೆ ಇದೆ, ಎಂದು ಯೋಚಿಸಿದರು.

ಭಾರತದ ಭವಿಷ್ಯದ ಬಗ್ಗೆಯ ತಮ್ಮ ಸ್ಫೂರ್ತಿ ಮತ್ತು ಶುಭಪ್ರತೀಕ್ಷೆಯನ್ನು, ಅವರು ಪ್ರಕೃತಿಯಿಂದ ಸೆಳೆದುಕೊಂಡರು. ಪೂರ್ವದಲ್ಲಿ ಉದಯಿಸುವ ಸೂರ್ಯ, ಪಶ್ಚಿಮಕ್ಕೆ ಸಾಗುತ್ತಾನೆ. ಆದರೆ ದಿನವನ್ನು, ಮತ್ತೆ ಪೂರ್ವದಿಂದಲೇ ಪ್ರಾರಂಭಿಸುತ್ತಾನೆ. "ಪ್ರಕೃತಿಯ ವಿಧಿವಿಧಾನಗಳನ್ನು ನಂಬಬೇಕಾದರೆ, ಐಶ್ವರ್ಯ ಮತ್ತು ಬುದ್ಧಿಮತ್ತತೆಯ ಸೂರ್ಯ ತನ್ನ ಪ್ರದಕ್ಷಿಣೆಯನ್ನು ಪೂರೈಸಿದ ನಂತರವೇ ಮತ್ತೆ ದ್ವಿಗುಣಿತವಾಗಿಸಿಕೊಂಡ ಪ್ರಭೆಯಿಂದ ಮತ್ತೊಮ್ಮೆ ಭಾರತದಲ್ಲೇ ಹೊಳೆಯುತ್ತಾನೆ."

ಅವರ ಪ್ರಕಾರ, ಉನ್ನತಿಯ ಸಿದ್ಧಾಂತವು, "ರಚನೆ ಮತ್ತು ಕಾರ್ಯದ ಭೇದಾತ್ಮಕತೆಯನ್ನು, ಆದರೆ, ಭಾವನೆ ಮತ್ತೆ ಸ್ಫೂರ್ತಿಯ ಸಮನ್ವಯವನ್ನು" ಆಗ್ರಹಪೂರ್ವಕವಾಗಿ ಕೇಳುತ್ತದೆ. "ಒಂದು ಗಿಡವು ಗಾಳಿ, ಭೂಮಿ, ಗೊಬ್ಬರ ಮತ್ತು ನೀರು ಎಲ್ಲವನ್ನೂ ಜೀರ್ಣಿಸಿಕೊಳ್ಳುತ್ತದೆ" ಎನ್ನುತ್ತಾ ಅವರು, "ಅದೇ ರೀತಿಯಲ್ಲಿ, ನೀವೂ ಸಹ ಹೊರಗಿನ ಮಾಹಿತಿಗಳಲ್ಲಿ ಲೀನರಾಗಿ, ಚೆನ್ನಾಗಿ ಅರ್ಥಮಾಡಿಕೊಂಡು, ಅಭಿವೃದ್ಧಿ ಹೊಂದಿ, ಚೆನ್ನಾಗಿ ಬಾಳಿ ಬದುಕಬೇಕು. ಆದರೆ ನಿಮ್ಮ ಅಂತಃಕರಣಗಳಲ್ಲಿ ಮತ್ತು ಉಸಿರಾಟದಲ್ಲಿ ಶೃತಿಗಳ ಮೂಲ ಚೈತನ್ಯವು ಮೌನವಾಗಿ ಸ್ಪಂದಿಸುತ್ತಿರಬೇಕು," ಎಂದರು.

ರಾಷ್ಟ್ರೀಯ ಶಿಕ್ಷಣದ ಆದರ್ಶಗಳನ್ನು ಸ್ವಾಮಿ ರಾಮತೀರ್ಥರ ಈ ಕೆಳಕಂಡ ಪದಗಳಿಗಿಂತ ಚೆನ್ನಾಗಿ ನಿರೂಪಿಸುವುದು ಅಸಾಧ್ಯ. ಅವರು, "ಕರಾರುವಾಕ್ಕಾದ

ಶಿಕ್ಷಣದ ಧ್ಯೇಯವು, ದೇಶದ ಮೂಲಸಂಪತ್ತನ್ನು ಉಪಯೋಗಿಸಿಕೊಳ್ಳುವಂತೆ, ನಮಗೆ ಶಕ್ತಿ ನೀಡಬೇಕು. ಸೂಕ್ತ ಶಿಕ್ಷಣವು ಜನರಿಗೆ ಹೆಚ್ಚು ಶಕ್ತಿಯನ್ನು ನೀಡಿ, ಅವರು ಭೂಮಿಯನ್ನು ಹೆಚ್ಚು ಫಲವತ್ತಾಗಿ ಮಾಡುವಂತೆ, ಗಣಿಗಳನ್ನು ಹೆಚ್ಚು ಉತ್ಪಾದನೆಯ ಸಾಮರ್ಥ್ಯವುಳ್ಳಂತೆ ವ್ಯಾಪಾರವು ಹೆಚ್ಚು ಪ್ರವರ್ಧಮಾನವಾಗುವಂತೆ, ದೇಹಗಳು ಹೆಚ್ಚು ಕಾರ್ಯನಿರತವಾಗುವಂತೆ, ಮನಸ್ಸುಗಳು ಹೆಚ್ಚು ಸ್ವಂತಿಕೆ ಪಡೆಯುವಂತೆ, ಹೃದಯಗಳು ಹೆಚ್ಚು ಪವಿತ್ರವಾಗಿರುವಂತೆ, ಉದ್ದಿಮೆಗಳು ಹೆಚ್ಚು ವೈವಿಧ್ಯವಾಗಿರುವಂತೆ ಮತ್ತು ರಾಷ್ಟ್ರವು ಹೆಚ್ಚು ಸಂಯುಕ್ತವಾಗಿರುವಂತೆ ಮಾಡಬೇಕು," ಎಂದಿದ್ದಾರೆ.

ದೇಶಭಕ್ತಿಯ ಬಗ್ಗೆಯ ಅವರ ಭಾವನೆ ಸಾಟಿಯಿಲ್ಲದ್ದಾಗಿತ್ತು ಮತ್ತು ಉತ್ಸಾಹವನ್ನುಂಟುಮಾಡುವಂತಿತ್ತು. ಅವರು, "ನಿನಗೆ ದೇಶಪ್ರೇಮಿ ಆಗುವ ಇಚ್ಛೆ ಇದೆಯೇ?" ಎಂದು ಕೇಳಿದರು. ಮತ್ತೆ, "ಹಾಗಾದರೆ, ನಿನ್ನ ದೇಶ ಹಾಗೂ ಜನರೊಂದಿಗೆ ನಿನ್ನ ಪ್ರೀತಿಯನ್ನು ಸಾಮರಸ್ಯವಾಗಿ ಹೊಂದಿಸಿಕೊ. ಅವರೊಂದಿಗೆ ನಿನ್ನ ಐಕಮತ್ಯವನ್ನು ಅನುಭವಿಸು. ನಿನ್ನ ಸದ್ಯದ ವ್ಯಕ್ತಿತ್ವದ ನೆರಳೂ ಸಹ, ನಿನ್ನ ಮತ್ತು ನಿನ್ನ ಜನರ ನಡುವಿನ ತೆಳುವಾದ ಗಾಜಿನ ಗೋಡೆಯಾಗದಿರಲಿ. ದೇಶದ ಹಿತಾಸಕ್ತಿಗಾಗಿ, ನಿನ್ನ ಸ್ವಂತದ ಜೀವನವನ್ನು ಒಪ್ಪಿಸಿ, ನೀನೊಬ್ಬ ಪ್ರಾಮಾಣಿಕನಾದ ಆಧ್ಯಾತ್ಮಿಕ ಸಿಪಾಯಿಯಂತಿರು. ಇರುವ ಅಲ್ಪಸ್ವಲ್ಪ ಅಹಮಿಕೆಯನ್ನೂ ಇಲ್ಲದಂತೆ ಮಾಡಿಕೊಂಡು, ಇಡೀ ರಾಷ್ಟ್ರವೇ ನೀನಾಗಿ, ಏನನ್ನಾದರೂ ಭಾವಿಸು. ಆಗ ದೇಶವೂ ನಿನ್ನೊಂದಿಗೆ ಅದನ್ನೇ ಭಾವಿಸುತ್ತದೆ. ಒಂದು ನಿರ್ದಿಷ್ಟ ಗುರಿಯತ್ತ ಸಾಗು. ಆಗ ನಿನ್ನ ದೇಶವೂ ನಿನ್ನನ್ನು ಹಿಂಬಾಲಿಸುತ್ತದೆ. ಆರೋಗ್ಯವನ್ನು ಅನುಭವಿಸು. ನಿನ್ನವರೂ ಆರೋಗ್ಯವಾಗಿರುತ್ತಾರೆ. ನಿನ್ನ ಶಕ್ತಿಯು, ನಿನ್ನ ನರಗಳಲ್ಲಿ ಲಯಬದ್ಧವಾಗಿ ತುಡಿಯಲು ಪ್ರಾರಂಭಿಸುತ್ತದೆ" ಎಂದರು.

ಅವರು, ಭಾರತದೊಂದಿಗೆ ತಮ್ಮನ್ನು ತಾವು ಒಂದಾಗಿ, ಭಾವಿಸಿಕೊಂಡಿದ್ದರು. "ಭಾರತದ ಭೂಸ್ವತ್ತು ನನ್ನ ಸ್ವಂತ ದೇಹವೇ ಆಗಿದೆ. ಕಾಮೋರಿನ್ ನನ್ನ ಪಾದಗಳಾಗಿದ್ದರೆ, ಹಿಮಾಲಯವು ನನ್ನ ಶಿರ. ನನ್ನ ಕೂದಲುಗಳಿಂದ ಗಂಗೆ ಹರಿಯುತ್ತಾಳೆ. ನನ್ನ ತಲೆಯಿಂದ ಬ್ರಹ್ಮಪುತ್ರ ಮತ್ತು ಸಿಂಧೂನದಿಗಳು ಹೊರಡುತ್ತವೆ. ವಿಂಧ್ಯಾಚಲವು ನನ್ನಟೊಂಕದ ಸುತ್ತುಗಟ್ಟಿದೆ. ಕೋರಮಂಡಲವು ನನ್ನ ಬಲಗಾಲು, ಮಲಬಾರ್‌ನನ್ನ ಎಡಗಾಲು. ನಾನು ಇಡೀ ಭಾರತದೇಶ. ಅದರ ಪೂರ್ವಪಶ್ಚಿಮ ಭಾಗಗಳು ನನ್ನ ತೋಳುಗಳು. ಅವನ್ನು ಹರಡಿ ನಾನು ಮನುಷ್ಯವರ್ಗವನ್ನು ತಬ್ಬಿಕೊಳ್ಳುತ್ತೇನೆ. ನನ್ನ ಪ್ರೀತಿಯಲ್ಲಿ ನಾನು ವಿಶ್ವವ್ಯಾಪಿ. ಆಹಾ! ನನ್ನ ದೇಹದ ನಿಲುವು ಹಾಗಿದೆ. ಅದು ಎದ್ದು ನಿಂತು, ಊಹಾತೀತ ಅಂತರಿಕ್ಷವನ್ನು ಎವೆಯಿಕ್ಕದೆ ನೋಡುತ್ತಿದೆ. ಆದರೆ ನನ್ನ ಅಂತರಾತ್ಮವು, ಸಕಲರ ಆತ್ಮವೂ ಆಗಿದೆ. ನಾನು



ನಡೆದಾಗ, ಭಾರತವೇ ನಡೆಯುತ್ತಿದೆ ಎಂದು ಭಾವಿಸುತ್ತೇನೆ. ನಾನು ಉಸಿರಾಡಿದಾಗ, ಭಾರತವೇ ಉಸಿರಾಡಿದಂತೆ ಭಾವಿಸುತ್ತೇನೆ. ನಾನು ಮಾತನಾಡಿದಾಗ, ಭಾರತವೇ ಮಾತನಾಡಿದಂತೆನಿಸುತ್ತದೆ. ನಾನು ಭಾರತ...... ಇದು ದೇಶಪ್ರೇಮದ ಉತ್ತಮೋತ್ತಮ ಅರಿವು (ಸಿದ್ಧಿ) ಮತ್ತು ಅದೇ ಕಾರ್ಯೋಪಯೋಗಿ ವೇದಾಂತ" ಎಂದು ಅವರು ಸಾರಿದರು.

ಇದರಿಂದ ನಾವು, ರವೀಂದ್ರನಾಥ ಟ್ಯಾಗೂರರು ಹೆಸರಿಸಿದ, "ಭೂಗೋಳಶಾಸ್ತ್ರದಲ್ಲಿ ಅತಿಭಕ್ತಿ" ಎಂಬುದರ ಪರವಾಗಿ ವಾದಿಸಿದ್ದಾರೆ ಎಂದು ಭಾವಿಸುವಂತಿಲ್ಲ. ಇಲ್ಲ. ಅವರು ಸ್ಪಷ್ಟಪಡಿಸುತ್ತಾ, "ರಾಮನು ಎಷ್ಟು ಭಾರತೀಯನೋ, ಅಷ್ಟೇ ಅಮೆರಿಕದವನೂ ಆಗಿದ್ದಾನೆ. ಇಡೀ ಪ್ರಪಂಚವೇ, ನನ್ನ ಮನೆ ಮತ್ತು ನನ್ನ ಧರ್ಮವಂತೂ ಒಳ್ಳೆಯದನ್ನು ಮಾಡುವುದೇ ಆಗಿದೆ. ರಾಮನ ಹೃದಯಕ್ಕೆ ಕ್ರಿಸ್ತನು ಎಷ್ಟು ಹತ್ತಿರದವನೂ, ಪ್ರಿಯನೂ ಆಗಿರುವನೋ, ಅಷ್ಟೇ ಕೃಷ್ಣನೂ ಆಗಿದ್ದಾನೆ. ರಾಮನಿಗೆ ಬುದ್ಧನು ಶಂಕರನಷ್ಟೇ ಆತ್ಮೀಯನು. ರಾಮನು ಯಾವುದೇ ಜಾತಿಗೂ ಸೇರಿಲ್ಲ. ರಾಮನೂ ನಿನ್ನವನು; ಸತ್ಯವೂ ನಿನ್ನದು," ಎಂದರು.

ಅವರ ಪರಿಕಲ್ಪನೆ ಆಳಕ್ಕಿಳಿಯಿತು. ಅವರು, "ಸತ್ಯದ ಹೆಸರಿನಲ್ಲಿ ನಮಗೆ ಹುತಾತ್ಮರು ಬೇಕಾಗಿದ್ದಾರೆ. ನಿಜವಾದ ಕೆಲಸಗಾರರು, ಆತ್ಮಾಹುತಿಗೆ ಸಿದ್ಧರಾದ ಜನರು, ಶೋಷಿತರೊಂದಿಗೆ ನೆಲದ ಮೇಲೆ ಮಲಗಲು ಸಿದ್ಧರಾಗುವವರು, ಅವರೊಂದಿಗೆ ಸಂತೋಷದಿಂದ ಗಟ್ಟಿಯಾಗಿ ಒಣಗಿದ ರೊಟ್ಟಿಗಳನ್ನು ಅಥವಾ ಬೇಯದ ರೊಟ್ಟಿಗಳನ್ನು ಹಂಚಿಕೊಳ್ಳಲು ಸಿದ್ಧರಾಗುವವರು, ಕಡೆಗೆ ಅವರೊಂದಿಗೆ ಅನ್ನವಿಲ್ಲದೆ ಸೊರಗಲೂ ಸಹ ಸಿದ್ಧರಾಗಿರುವವರು ನಮಗೆ ಬೇಕು. ಯಾರು ತಮ್ಮ ಇಂದ್ರಿಯಗತ ನಲಿವುಗಳನ್ನು ತ್ಯಜಿಸಲು ಸಿದ್ಧರೋ ಮತ್ತು ತಮ್ಮ ದುರಾಸೆಯ ವಿನೋದಗಳನ್ನು ತ್ಯಜಿಸಲು ಆಸಕ್ತರೋ....."

"ಇದನ್ನೊಂದು, ಉಪಕಾರ ಸ್ಮರಿಸದ ಕೆಲಸವೆನ್ನಬೇಡಿ. ಇದಕ್ಕೆ ಸಾಕಷ್ಟು ಪುರಸ್ಕಾರವಿದೆ. ಸ್ವಂತದ ಅನುಭವ ಹೇಳುವುದೇನೆಂದರೆ, ನಾವು ಮತ್ತೊಬ್ಬರನ್ನು ಮೇಲೇರಿಸಲು ಪ್ರಯತ್ನಿಸಿದರೆ, ಅವನು ಮೇಲೇರಬಹುದು ಅಥವಾ ಇಲ್ಲದೆಯೂ ಇರಬಹುದು. ಆದರೆ ನಾವಂತೂ ನಿಜವಾಗಿಯೂ ಉದ್ಧಾರವಾಗುತ್ತೇವೆ".

"ಭಗವಂತನು ನಿಮ್ಮೆದುರಿಗೆ ಭಾರತೀಯನಾಗಿ ಹಸಿದು ಬರುತ್ತಾನೆ. ಅವನಿಗೆ ಊಟ ಕೊಡಿ. ಭಗವಂತ ನಿಮ್ಮೆದುರಿಗೆ ಬರಿ ಮೈಯಲ್ಲಿ ಹಿಂದೂಗಳ ದೇಹವಾಗಿ ಬರುತ್ತಾನೆ. ಅವನಿಗೆ ಬಟ್ಟೆ ಕೊಡಿ. ಭಗವಂತ ನಿಮ್ಮೆದುರಿನಲ್ಲಿ ದರಿದ್ರನಾಗಿ ಬರುತ್ತಾನೆ, ಕ್ಷೋಭೆಗೊಳಗಾಗಿ, ಜನರ ರೂಪ ಧರಿಸಿ ಬರುತ್ತಾನೆ ಅವನವರಾಗಿದ್ದು ಶುಶ್ರೂಷೆ ಮಾಡಿ. ಅವರೆಲ್ಲರೂ ತೊಂದರೆಗೊಳಗಾಗಿದ್ದರೂ ಸಹ, ಸನ್ನಡತೆಯವರಾಗಿದ್ದು ನೀವುಗಳು ದಾನ ಮತ್ತು ಪ್ರೀತಿಯನ್ನು ನೀಡಬಹುದಾಗಿದೆ. ಈ ಸದವಕಾಶವನ್ನು

ನೀವು ಬಳಸಿಕೊಳ್ಳಿ. ಸಂತೋಷವಾಗಿ, ಉತ್ಸಾಹದಿಂದ, ಅವರಿಗೆ ನೆರವಾಗಿ" ಎಂದರು.

ಸ್ವಾಮಿ ವಿವೇಕಾನಂದರು, ''ಬಡವರು ಮತ್ತು ನೋವನ್ನು ಅನುಭವಿಸುತ್ತಿರುವವರನ್ನು ಕಂಡು ಯಾರ ಹೃದಯದಿಂದ ರಕ್ತ ಒಸರುತ್ತದೆಯೋ ಅವನು ನಿಜಕ್ಕೂ ಮಹಾತ್ಮನೇ" ಎಂದಿದ್ದಾರೆ.

ಮಹಾತ್ಮ ಗಾಂಧಿಯವರು ಸ್ವಾಮಿ ರಾಮ ಅವರ ಬಗ್ಗೆ ಹೇಳುತ್ತಾ, "ನೀನು ಅವರ ಆದರ್ಶಗಳನ್ನು ಗೌರವಿಸುತ್ತೇನೆ" ಎಂದಾಗ, ಅವರ ಮನಸ್ಸಿನಲ್ಲಿಯೂ ಇದೇ ಭಾವನೆ ಇದ್ದಿರಬಹುದು.

ಸ್ವಾಮಿ ರಾಮ ಅವರು, ತಮ್ಮ ಅತ್ಯಂತ ಆದರ್ಶವಾದಿ ಭಾವನೆಯಲ್ಲಿ ಇದ್ದಾಗಲೂ, ಅತ್ಯಂತ ಕ್ರಿಯಾಶೀಲರಾಗಿರುತ್ತಿದ್ದರು. ಅವರು, "ಸಹನೆ ಇಲ್ಲದೆ ಯಾರು ನೂರು ಹೆಜ್ಜೆಗಳನ್ನು ಹಾಕುತ್ತಾರೋ ಅವರು ಶವವಸ್ತ್ರವನ್ನು ತೊಟ್ಟು, ತಮ್ಮ ಸ್ವಂತದ ಅಂತ್ಯಕ್ರಿಯೆಗೆ ಹೋಗುತ್ತಾರೆ" ಎಂದರು. "ಪ್ರಾಕ್ಟಿಕಲ್ ವಿಸ್‌ಡಮ್" ಎಂಬ ದಿನಪತ್ರಿಕೆಗೆ ಬರೆಯುತ್ತಾ ಅವರು, "ವಿವೇಕ ಮತ್ತು ಕಲಿಕೆ ಎರಡೂ ಸರ್ವಾಂಗಸಮವಾದುದಲ್ಲ. ಅವು ಪರಸ್ಪರ ಮಾತನಾಡದೆ ಇರುವಂಥವು. ಕಲಿಕೆಯು ಹಿಂದೆ ತಿರುಗಿ, ಗತಕಾಲದತ್ತ ನೋಡುತ್ತದೆ. ವಿವೇಕವು ಭವಿಷ್ಯದತ್ತ ಮುಂದೆ ನೋಡುತ್ತದೆ. ವ್ಯಕ್ತಿಯು ತಾನು ಮಂದೆ ಏನು ಮಾಡಬೇಕು ಎಂಬುದನ್ನು ಅರಿತುಕೊಳ್ಳುವುದೇ ವಿವೇಕ. ಸಚ್ಚಾರಿತ್ರ್ಯವೇ ಅದನ್ನು ಮಾಡುತ್ತದೆ. ಸಚ್ಚಾರಿತ್ರ್ಯವಿಲ್ಲದ ವಿವೇಕವು ಮಾಸದ ಶ್ರಮ ಮಾತ್ರ. ಆದರೆ ಇಚ್ಛಾಶಕ್ತಿ ಇದ್ದು ಅದು ದುಡಿತವಾದರೆ, ವಿಜ್ಞಾನವು ಕಲೆಯಾದರೆ, ಜ್ಞಾನವು ಶಕ್ತಿಯಾದರೆ, ಆಗ ವಿವೇಕವು ಸಚ್ಚಾರಿತ್ರ್ಯವಾಗುತ್ತದೆ.

ಎಲ್ಲಿ ಚಿಂತನೆಯು ದುಡಿತವಾಗುವುದಿಲ್ಲವೋ, ಮಾರ್ಗದರ್ಶಕ ಸೂತ್ರವು ಕಾರ್ಯಗತವಾಗದೋ, ಅಲ್ಲಿ ಮಾನಸಿಕ ಅಜೀರ್ಣವ್ಯಾಧಿ ಅಥವಾ ಆಧ್ಯಾತ್ಮಿಕ ಮಲಬದ್ಧತೆ ಉಂಟಾಗುತ್ತದೆ.

ಅಮೆರಿಕದ ಹಾಸ್ಯ ಬರಹಗಾರರೊಬ್ಬರನ್ನು ಉಲ್ಲೇಖಿಸುತ್ತಾ ಅವರು,

"ನಾನು ಮನುಷ್ಯರು ಮತ್ತು ವಸ್ತುಗಳ ಬಗ್ಗೆ ಯೋಚಿಸಿ ದಣಿದೆ,
ನನ್ನ ಚಿಕ್ಕಪ್ಪ ಹೇಳುತ್ತಿದ್ದಂತೆ;
ತಾವು ಪ್ರಾರ್ಥಿಸುವಂತೆ, ಜನಗಳು, ಸಂಪರ್ಕದಿಂದ ಕೆಲಸ ಮಾಡದಿದ್ದರೆ,
ಏಕೆ ಪ್ರಾರ್ಥಿಸಿ ಪ್ರಯೋಜನವಿಲ್ಲ.
ನಿಮಗೇನಾದರೂ ಬೇಕಿದ್ದು, ಕೇವಲ ಸತ್ತಂತೆ ಸ್ಥಿರವಾಗಿ,
ಎರಡೂ ಕಣ್ಣುಗಳನ್ನೂ ತೋಯಿಸಿಕೊಂಡು ಬೇಡಿದರೆ ಅದಕ್ಕಾಗಿ,
ಅಶ್ರುಗಳು ತರಲಾರವು ಅವನ್ನು. ನೀವೇಕೆ ಪ್ರಯತ್ನಿಸಿ ಬೆವರುವಿರಿ?
ಎಂದು ನನ್ನ ಚಿಕ್ಕಪ್ಪನವರು ಹೇಳುತ್ತಿದ್ದಂತೆ,"



ಎಂದರು.

"ಅಭ್ಯುದಯಕ್ಕೆ ಬೇಕಾದ ನಿಜವಾದ ಮಾಪಕವು, ಆಧ್ಯಾತ್ಮಿಕ ಪ್ರಗತಿಯೇ ಹೊರತು, ಮೇಲ್ನೋಟದ ಲಾಭ ನಷ್ಟಗಳಲ್ಲ" ಎಂದು ಹೇಳಿ, ಮತ್ತೆ, "ಸೋಲು ಗೆಲುವಿನಷ್ಟೇ, ಅದ್ಭುತವಾದದ್ದು. ದೊಡ್ಡ ಕೆಲಸಗಳೆಲ್ಲವೂ, ವ್ಯವಹಾರ ಜ್ಞಾನವುಳ್ಳ ಚಿಕ್ಕ ಸ್ವಂತಿಕೆ ಇದ್ದರೂ ಅದರಿಂದಲ್ಲದೆ, ವೈಯಕ್ತಿಕವಲ್ಲದ ರೀತಿಯಲ್ಲಿ ನಡೆಯುತ್ತವೆ", ಎಂದರು.

"ಸೂರ್ಯನು ತನ್ನ ಸ್ವಭಾವಸಿದ್ಧ ಭವ್ಯತೆಯಲ್ಲಿ, ಸ್ವಂತ ಹಿತಾಸಕ್ತಿಯ ಭ್ರಮೆಯಿಲ್ಲದೆ, ಸಾಕ್ಷಿಯಾದ ಪ್ರಭೆಯಲ್ಲಿ ಹೊಳೆಯುತ್ತಾನೆ ಮತ್ತು ನೋಡಿ! ನದಿಗಳು ತಮ್ಮ ಹಿಮದ ತೊಟ್ಟಿಲುಗಳಿಂದ ಬೀಗ ತೆರೆದುಕೊಂಡು ಹರಿಯುತ್ತವೆ. ತಂಗಾಳಿಗಳು ಉಲ್ಲಾಸದಿಂದ ನರ್ತಿಸುತ್ತವೆ. ಇಡೀ ಪ್ರಕೃತಿಯೇ ಕಾರ್ಯಶೀಲವಾಗಿರುತ್ತದೆ. ಪ್ರಾಣಿಗಳು ಎಚ್ಚರಗೊಳ್ಳುತ್ತವೆ. ಗಿಡಗಳು ಬೆಳೆಯುತ್ತವೆ. ಸುವಾಸನಾಯುಕ್ತ ನೇರಳೆಯ ಬಣ್ಣದ ಹೂವುಗಳು ಮತ್ತು ಗುಲಾಬಿಗಳು ಅರಳುತ್ತವೆ. ಗಂಡಸರು, ಹೆಂಗಸರು ಮತ್ತು ಮಕ್ಕಳ ಕಣ್ಣುಗಳೆಂಬ ಶೋಭಾಯುಕ್ತ ಹೂವುಗಳು ಸೂರ್ಯನ ಭವ್ಯ ಸಾರ್ವಭೌಮತ್ವದ ಕೇವಲ ಸಾನ್ನಿಧ್ಯದಿಂದಲೇ ತೆರೆದುಕೊಳ್ಳುತ್ತವೆ. ನೀವು ಎಲ್ಲದರ ಆತ್ಮದಂತೆ, ಜ್ಯೋತಿಯ ಉತ್ಪತ್ತಿ ಸ್ಥಾನದಂತೆ, ಪರಮಾನಂದದ ಬುಗ್ಗೆಯಂತೆ, ಕೇವಲ ಹೆಸರುವಾಸಿಯಾಗಬೇಕು. ಹೇ ಪುಣ್ಯಶಾಲಿಯೇ, ನಿನ್ನಿಂದ ಹರಡಲು ಪ್ರಾರಂಭವಾಗುತ್ತದೆ. ಹೂವು ಅರಳಿದಾಗ ನೋಡು ಅದರ ಕಂಪು ತಾನಾಗಿ ಹರುಡುತ್ತದೆಯಲ್ಲವೇ?"

ರೆವರೆಂಡ್ ಸಿ.ಎಫ್. ಆನ್‌ಡ್ರೂಸ್ ಅವರು, "ನಾನು ಮನ್ನಣೆ ನೀಡುವುದನ್ನು ಕಲಿತಿರುವುದು, ಸ್ವಾಮಿ ರಾಮ ಅವರ ಹೆಸರಿಗೆ, ಪಂಜಾಬಿನಲ್ಲಿ ದೀರ್ಘಕಾಲ ವಾಸವಾಗಿದ್ದುದರಿಂದಾಗಿ... ಅವರ ಹೆಸರನ್ನು ಉಚ್ಚರಿಸಿದಾಗಲೆಲ್ಲ ಮುಖಗಳು ಅರಳುವುದನ್ನು ನಾನು ನೋಡುತ್ತಲೇ ಬಂದಿದ್ದೇನೆ. ಉತ್ತರ ಭಾರತದ ವಿದ್ಯಾವಂತ ಸ್ತ್ರೀ ಪುರುಷರೆಲ್ಲರೂ ಅವರ ಉಪಕಾರವನ್ನು ತಾವೆಷ್ಟು ಸ್ಮರಿಸುತ್ತಾರೆಂಬುದರ ಬಗ್ಗೆ, ನನಗೆ ತಿಳಿಸಿದ್ದಾರೆ. ಅವರ ಮರಣಾನಂತರ ವೃದ್ಧಿಸಿರುವ ಅಂಥ ಕರುಣಾಮಯಿ ಗಣ್ಯವ್ಯಕ್ತಿಯ ವ್ಯಕ್ತಿತ್ವವು, ಅವರನ್ನು ಅರಿತಿದ್ದು ಪ್ರೀತಿಸಿ ಗೌರವಿಸಿದ ಹಿರಿಯ ಪೀಳಿಗೆಯವರಿಗೂ ಮತ್ತು ಭಾರತದ ಯುವಕ ವಿದ್ಯಾರ್ಥಿ ಜೀವಿಗಳಿಗೂ ಸ್ಫೂರ್ತಿದಾಯಕವಾಗಿರಬೇಕು"*

* * * *

* ಇನ್‌ವುಡ್ಸ್ ಆಫ್ ಗಾಡ್ ರಿಯಲೈಸೇಷನ್–ದಿ ಕಂಪ್ಲೀಟ್ ವರ್ಕ್ಸ್ ಆಫ್ ಸ್ವಾಮಿ ರಾಮ ತೀರ್ಥ–ಮುನ್ನುಡಿ.

# ೪. ದಾದಾಬಾಯಿ ನವರೋಜಿ

ಪಾರ್ಸಿ ಜನರು ಭಾರತಕ್ಕೆ ಬಂದದ್ದರ ಬಗ್ಗೆ ಒಂದು ಕುತೂಹಲಕಾರಕ ಆಖ್ಯಾನ ಇದೆ. ಹನ್ನೆರಡೂವರೆ ಶತಮಾನಗಳ ಹಿಂದೆ, ಒಂದು ಚಿಕ್ಕದಾಗಿದ್ದರೂ ಕಟ್ಟುಮಸ್ತಾಗಿದ್ದ ಮತ್ತು ಆಯುಧಗಳಿಂದ ಸಜ್ಜಾಗಿದ್ದ ಇರಾನಿನ ನಿರಾಶ್ರಿತರ ಗುಂಪು, ಸಂಜನ್ ನದಿಯ ದಡದಲ್ಲಿ ಬಂದಿಳಿಯಿತು. ಅಲ್ಲಿ ಜಾದವ್ ರಾಣ ಎಂಬಾತ, ಭಾರತೀಯರ ಮುಖಂಡನಾಗಿದ್ದು, ಪಾಳೆಯಗಾರನಾಗಿದ್ದನು. ತನ್ನ ಚಿಕ್ಕರಾಜ್ಯದಲ್ಲಿ ನಿರಾಶ್ರಿತರು ತಳವೂರುವುದು ಅವನಿಗೆ ಹಿಡಿಸಿರಲಿಲ್ಲ. ಆದರೆ, ಒರಟಾಗಿ ಒಲ್ಲೆ ಎಂದು ನೇರವಾಗಿ ಹೇಳಲಾರದಷ್ಟು ವಿನೀತನೂ ಆಗಿದ್ದನು. ಹಾಗಾಗಿ, ಆ ನಿರಾಶ್ರಿತರಿಗೆ ಒಂದು ಲೋಟದ ತುಂಬ ಹಾಲನ್ನು ಕಳುಹಿಸಿದನು. ಅದನ್ನು ನೋಡಿ ತನ್ನ ಚಿಕ್ಕ ರಾಜ್ಯದಲ್ಲಿ ಅವರಿಗೆ ಸ್ಥಳವಿಲ್ಲವೆಂಬುದನ್ನು ಅವರೇ ಅರಿತುಕೊಳ್ಳಲೆಂಬ ಆಸೆ ರಾಣನಿಗಿತ್ತು. ಆ ನಿರಾಶ್ರಿತರ ಮುಖಂಡ, ಅತ್ಯಂತ ಬುದ್ಧಿವಂತನಾಗಿದ್ದನು. ಅವನು ಅದರೊಳಗೆ ಸಕ್ಕರೆಯನ್ನು ಹಾಕಿ, "ಸಕ್ಕರೆ ಹಾಲಿನಲ್ಲಿ ಕರಗಿ ಹೇಗೆ ಒಂದಾಗುತ್ತದೆಯೋ ಅದೇ ರೀತಿ ನಾವೂ ಸಹ ನಿಮ್ಮೊಂದಿಗೆ ಹೊಂದಿಕೊಂಡು ಸಹೋದರರರಂತೆ ಇರುತ್ತೇವೆ," ಎಂಬುದನ್ನು ಸೂಚಿಸಿದನು. ಜಾದವ್ ರಾಣ ಅತ್ಯಂತ ಪ್ರಭಾವಿತನಾದನು. ಪಾರ್ಸಿಗಳೂ ಸಹ, ಮುಸಲ್ಮಾನರಿಂದ ಯಾವುದೇ ರೀತಿಯ ಕಾಟವೂ ಇರದಂತೆ, ತಮ್ಮ ಧರ್ಮವನ್ನು ಆರಾಮವಾಗಿ ಅಭ್ಯಾಸಮಾಡಿಕೊಳ್ಳಬಹುದಾದಂಥ ಹೊಸ ಬಿಡಾರವನ್ನು ಪಡೆದಿದ್ದರು. ಸಾವಿರದ ಇನ್ನೂರೈವತ್ತು ವರ್ಷಗಳ ಅವಧಿಯಲ್ಲಿ, ಅವರು ತಮ್ಮ ಪರ್ಷಿಯನ್ ಭಾಷೆಯನ್ನು ಮರೆತರು. ಹಿಂದೂ ಹುಡುಗಿಯರನ್ನು ಮದುವೆಯಾದರು. ಎಷ್ಟೋ ಹಿಂದೂ ಸಂಪ್ರದಾಯಗಳನ್ನು ಒಪ್ಪಿ ಅಳವಡಿಸಿಕೊಂಡರು. ಆದರೆ ತಮ್ಮ ಹಿಂದಿನ ಝೋರಾಷ್ಟ್ರಿಯನ್ ಶ್ರದ್ಧೆಯನ್ನು ಭದ್ರವಾಗಿ ಹಿಡಿದೇ ಇದ್ದರು. ಎಲ್ಲಕ್ಕಿಂತಲೂ ಹೆಚ್ಚಾಗಿ, ನಿಜವಾದ ವಚನನಿಷ್ಠ ಭಾರತೀಯರಂತೆ ಜೀವಿಸಿದರು. ಅವರ ಈ ವಸ್ತುನಿಷ್ಠ, ನಿಯತ್ತಿಗೆ ಸಾಕ್ಷಿ ಏನಾದರೂ ಬೇಕಿದ್ದರೆ, ಅದನ್ನು ದಾದಾಭಾಯಿ ನವರೋಜಿ ಅವರ ಜೀವನದಿಂದ ಧಾರಾಳವಾಗಿ ಪಡೆದುಕೊಳ್ಳಬಹುದು. ಅವರು ಇಂಗ್ಲಿಷ್ ಭಾಷೆಯನ್ನು ಕಲಿತ ಭಾರತೀಯರಲ್ಲಿ ಮೊದಲಿಗರಾಗಿದ್ದರು. ಜೊತೆಗೆ ಲಂಡನ್ನಿನಲ್ಲಿ



ವ್ಯಾಪಾರ ಉದ್ಯಮ ಪ್ರಾರಂಭಿಸಿದವರಲ್ಲಿ ಮೊದಲನೆಯ ಭಾರತೀಯರು, ಭಾರತದ ಅತ್ಯುತ್ತಮ ಸದಸ್ಯನಾಗಿ, ಹೌಸ್ ಆಫ್ ಕಾಮನ್ಸ್‌ನಲ್ಲಿ ಆಯ್ಕೆಯಾದ ಮೊದಲನೆಯ ಭಾರತೀಯರು ಮತ್ತು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದು, ಮೂರುಬಾರಿ ಅದಕ್ಕೆ ಅಧ್ಯಕ್ಷರಾಗಿದ್ದರು. ಭಾರತದ ಚರಿತ್ರೆಯಲ್ಲಿ ಅವರ ಹೆಸರು ಶಾಶ್ವತವಾಗಿ ನಿಲ್ಲುವಂತೆ ಮಾಡಿಕೊಂಡದ್ದರೊಂದಿಗೆ, "ಸ್ವರಾಜ್ಯವು ಭಾರತೀಯರ ಜನ್ಮಸಿದ್ಧ ಹಕ್ಕು" ಎಂದು ಹಕ್ಕನ್ನು ಬಿಗಿಗೊಳಿಸಿದ ಮೊದಲನೆಯ ಭಾರತೀಯರು. ಇವೆಲ್ಲದರ ಜೊತೆಗೆ, ಫಿರೋಜ್‌ಷಾ ಮೆಹತಾ, ರಾನಡೆ, ಗೋಖಲೆ ಕಡೆಗೆ ನಮ್ಮ ಕಾಲದ ಹಿರಿಯ ಭಾರತೀಯ ಮಹಾತ್ಮ ಗಾಂಧಿಗೂ ಅವರು ರಾಜಕೀಯದ ಗುರುಗಳಾಗಿದ್ದರು.

ನವ್‌ಸಾರಿ ಎಂಬುದು ಪಾರ್ಸಿಗಳ ಸುಂದರ ಪಟ್ಟಣವಾಗಿದ್ದು ಅದು ದಾದಾಭಾಯಿ ನವರೋಜಿ ಅವರ ಜನ್ಮಸ್ಥಳವೂ ಆಗಿತ್ತೆಂಬ ಗೌರವವನ್ನೂ ಪಡೆದಿತ್ತು. ಅವರು ೧೮೨೫ನೇ ಇಸವಿಯ ಸೆಪ್ಟಂಬರ್ ನಾಲ್ಕರಂದು, ಒಂದು ಬಡ ಪಾರ್ಸಿ ಕುಟುಂಬದಲ್ಲಿ ಜನಿಸಿದರು. ಆದರೂ, ಅವರ ವಂಶಾವಳಿ ಅತ್ಯಂತ ಪ್ರಾಶಸ್ತ್ಯಗಳಿಸಿದ್ದಾಗಿತ್ತು. ಅವರ ಹಿಂದಿನವರಾದ ಝರ್‌ತೋಷ್ಟ್ ಮೆಬೆಡ್ ಅವರು, ನವ್‌ಸಾರಿಗೆ ಬಂದ ಮೊದಲನೆಯ ಪುರೋಹಿತರಾಗಿದ್ದರು. ನಂತರ, ನವ್‌ಸಾರಿಯು, ಪಾರ್ಸಿ ಪುರೋಹಿತರ ಮುಖ್ಯ ಬಿಡಾರವೇ ಎನ್ನಬಹುದು. ಚಾಂದ್‌ಜೀ ಕಾಮ್‌ದಿನ್‌ರ ಸುಗಂಧಗಳು, ದೂರದ ದೆಹಲಿಯಲ್ಲಿದ್ದ ನೂರ್‌ಜಹಾನಳ ಖಯಾಲನ್ನೂ ಸೆಳೆದಿದ್ದವು. ಅದೇ ಸುವಾಸನೆಯು ಅವರು ಭಾರತದ ಕೋಟ್ಯಾಂತರ ಜನರ ಪ್ರೀತಿಪಾತ್ರ ದಾದಾ ಆದಾಗ, ದಾದಾಭಾಯಿ ಅವರ ಜೀವನದಲ್ಲಿಯೂ ತುಂಬಿಹರಿಯಿತು. ದಾದಾಭಾಯಿ ಅವರು, ತಮ್ಮ ನಾಲ್ಕನೆಯ ವಯಸ್ಸಿನಲ್ಲಿಯೇ ದುರಾದೃಷ್ಟದಿಂದ ತಂದೆಯನ್ನು ಕಳೆದುಕೊಂಡರು. ಅವರ ಅದೃಷ್ಟದಿಂದ, ಅವರ ತಾಯಿಯವರು ಸ್ವತಃ ವಿದ್ಯಾವಂತೆಯಾಗಿರದಿದ್ದರೂ, ಭಕ್ತಿಯುಕ್ತೆ, ಧೈರ್ಯಸ್ಥೆ ಹಾಗೂ ದೂರದೃಷ್ಟಿ ಉಳ್ಳವರಾಗಿದ್ದರು. ತಮ್ಮ ಮಗನನ್ನು ಇಂಗ್ಲಿಷ್ ಕಲಿಯಲು ಸಾಧ್ಯವಾಗುವಂಥ ಶಾಲೆಗೆ ಕಳುಹಿಸಿದಾಗಲೇ, ಆಕೆಗೆ ಮಗನ ಭವಿಷ್ಯದ ಚಿಂತನೆ ಇದ್ದಿರಬೇಕು. ಆ ಶಿಕ್ಷಣದಿಂದಲೇ ದಾದಾಭಾಯಿ ಅವರಿಗೆ, ಪಾಶ್ಚಾತ್ಯರ ಓಜಸ್ವಿ ಸಂಸ್ಕೃತಿಯನ್ನು ಗ್ರಹಿಸಲು ಮತ್ತು ತಮ್ಮ ದೇಶ ಬಾಂಧವರನ್ನು ಶತಮಾನಗಳ ಹಿಂದಿನ ಜಡತೆಯಿಂದ ಬಡಿದೆಬ್ಬಿಸುವುದು ಸಾಧ್ಯವಾಯಿತು. ಆಗ ಪ್ರಚಲಿತವಾಗಿದ್ದ ಬಾಲ್ಯವಿವಾಹದ ಪದ್ಧತಿಯಂತೆ, ಅವರು ತಮ್ಮ ಹನ್ನೊಂದನೆಯ ವಯಸ್ಸಿನಲ್ಲಿ ಮದುವೆ ಮಾಡಿಕೊಂಡರು. ಅವರಿಗನುಗುಣವಾಗಿ ಆ ಹುಡುಗಿ ಅಷ್ಟು ವಿಕಾಸಗೊಳ್ಳದಿದ್ದರೂ, ಆತ ಮಾತ್ರ ಒಬ್ಬ ಪ್ರೀತಿಯ ನಿಷ್ಠಾವಂತ ಪತಿಯಾಗಿಯೇ ಇದ್ದರು. ಅವರ ತಾಯಿಗೆ ತನ್ನ ತಪ್ಪಿನ ಅರಿವಾದಾಗ ಆಕೆ ಆಗಿನ ಕಾಲದಲ್ಲಿದ್ದ ಪದ್ಧತಿಯಂತೆ,

ಎರಡನೆಯ ಮದುವೆಯನ್ನು ಮಾಡಿಕೊಳ್ಳುವಂತೆ ಮಗನಿಗೆ ಬುದ್ಧಿ ಹೇಳಿದರು. ಆಗ ಅವರು, ತಮ್ಮ ತಾಯಿಯನ್ನೇ ಹಂಗಿಸುತ್ತಾ "ಒಂದು ವೇಳೆ ನಾನೇ ಸರಿಯಾಗಿಲ್ಲದಿದ್ದಲ್ಲಿ, ನೀನು ಅವಳಿಗೆ ಬೇರೆ ಮದುವೆ ಮಾಡಿಕೊಳ್ಳುವಂತೆ ಬುದ್ಧಿ ಹೇಳುತ್ತಿದ್ದೆಯೇನು?", ಎಂದು ಕೇಳಿದರು. ಅವರ ಪ್ರೀತಿ, ತಾಯಿಯಲ್ಲಿ ಎಷ್ಟಿತ್ತೋ ತಮ್ಮ ಪತ್ನಿಯಲ್ಲಿಯೂ ಅಷ್ಟೇ ಇತ್ತು. ತಮ್ಮ ಅಪಾರ ಕರ್ತವ್ಯಗಳ ನಡುವೆಯೂ, ಅವರು ತಮ್ಮ ಮಕ್ಕಳು ಹಾಗೂ ಮೊಮ್ಮಕ್ಕಳೊಂದಿಗೆ ಪತ್ರವ್ಯವಹಾರಗಳನ್ನು ನಡೆಸಿಕೊಂಡು ಸಂತೋಷಪಡುತ್ತಿದ್ದರು. ಅವರು ತಮ್ಮ ಒಬ್ಬನೇ ಮಗನನ್ನು ಕಳೆದುಕೊಂಡಾಗಲೂ ಆ ಹೊಡೆತವನ್ನು ಧೈರ್ಯವಾಗಿಯೇ ತಡೆದುಕೊಂಡರು. ಆಗ ಅವರಿಗೆ ಮತ್ತೊಬ್ಬ ಹಿರಿಯ ಭಾರತೀಯ ಬಹ್ರಾಮ್‌ಜೀ ಮಲಬಾರೀ ಎಂಬಾತನ, "ನೆನಪಿಡು ಇಡೀ ಭಾರತ, ನಿನ್ನ ಪುತ್ರನೇ" ಎಂಬ ಪದಗಳು ಸಾಂತ್ವನಗೊಳಿಸಿದವು.

ದಾದಾಭಾಯಿ ಗೌರವರ್ಣದ ಸುಂದರ ಯುವಕರಾಗಿದ್ದು, ತಮ್ಮ ಬಳಿಗೆ ಬಂದವರ ಪ್ರೀತಿಯನ್ನು ತಕ್ಷಣವೇ ಪಡೆಯುತ್ತಿದ್ದರು. ಕಲಿಕೆಯಲ್ಲಿಯೂ ಉತ್ತಮರಾಗಿದ್ದರು. ಅವರು ಇಂಗ್ಲಿಷ್ ಮತ್ತು ಗಣಿತಗಳಲ್ಲಿ ಪಾರಂಗತರಾಗಿ, ಶಾಲಾ ಶಿಕ್ಷಣ ಮುಗಿಸಿದಾಗ, ಮೊದಲ ಅಸಿಸ್ಟೆಂಟ್ ಮಾಸ್ಟರರಾಗಿದ್ದು, ನಂತರ ಅಸಿಸ್ಟೆಂಟ್ ಪ್ರೊಫೆಸರ್ ಹಾಗೂ ಪ್ರೊಫೆಸರರಾದರು. ಆಗ ಅವರು ಪ್ರೊ. ದಾದಾಭಾಯಿ ಎಂದು ಪ್ರಸಿದ್ಧರಾದರು. ಅವರು ತಮ್ಮ ವೃತ್ತಿಯನ್ನು ಅತ್ಯಂತ ಗೌರವವಾದದ್ದೆಂದೂ ಭಾವಿಸಿದ್ದರು. ಮುಂಬೈನ ಮೊದಲಿನ ಛೀಫ್ ಜಸ್ಟಿಸ್ ಎಂದರೆ ಮುಖ್ಯ ನ್ಯಾಯಾಧೀಶರಾಗಿದ್ದ, ಸರ್ ಎಸ್ಕೈನ್ ಪೆರ್ರಿ ಎಂಬಾತ, ಅವರು ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರ್ ಆಗಿ ಬರುವುದಾದರೆ, ಅದಕ್ಕೆ ತಗಲುವ ಖರ್ಚಿನಲ್ಲಿ ಅರ್ಧವನ್ನು ತಾವು ಕೊಡುತ್ತೇವೆಂದು ಹೇಳಿದ್ದು, ದಾದಾಭಾಯಿ ಅವರ ಯೋಗ್ಯತೆಗೆ ಸೂಕ್ತ ಕಾಣಿಕೆಯೇ ಆಗಿತ್ತು.

ತಾವು ವಿದ್ಯಾವಂತರಾದ ನಂತರ, ತಮ್ಮ ವಿದ್ಯೆಯ ಉಪಯೋಗವನ್ನು ಇತರರಿಗೆ ವರ್ಗಾಯಿಸುವುದರಲ್ಲಿ ದಾದಾಭಾಯಿ ಅವರಿಗೆ ಅತ್ಯಂತ ಉತ್ಸಾಹವಿತ್ತು. ಹುಡುಗರನ್ನು ಶಾಲೆಗೆ ಕಳುಹಿಸುವುದು ಇದ್ದುದರಲ್ಲಿ ಸುಲಭವಾಗಿತ್ತಾದರೂ, ಹುಡುಗಿಯರೂ ಶಿಕ್ಷಣದ ಪ್ರಯೋಜನವನ್ನು ಪಡೆಯಬೇಕೆಂದು, ಅವರು ಅತ್ಯಂತ ಉತ್ಸಾಹಿಗಳಾಗಿದ್ದರು. ಸ್ವಯಂ ಸೇವಕರ ದಳವೊಂದು, ಎರಡೇ ತಿಂಗಳುಗಳಲ್ಲಿ, ನಾಲ್ಕು ಪಾರ್ಸಿ ಶಾಲೆಗಳಿಗೆ ನಲವತ್ನಾಲ್ಕು ಮಂದಿ ವಿದ್ಯಾರ್ಥಿಗಳನ್ನೂ ಮತ್ತು ಮೂರು ಹಿಂದೂ ಶಾಲೆಗಳಿಗೆ ಇಪ್ಪತ್ನಾಲ್ಕು ವಿದ್ಯಾರ್ಥಿನಿಯರನ್ನೂ ಸೇರಿಸಿದ್ದಂತೂ, ನಿಜಕ್ಕೂ ಒಂದು ಅದ್ಭುತ ಕಾರ್ಯಸಾಧನೆಯೇ ಆಗಿತ್ತೆನ್ನಬಹುದು. ಮರಾಠಿ ಮತ್ತು ಗುಜರಾತಿ ಭಾಷೆಗಳ ಜನರಲ್ಲಿ, ಜ್ಞಾನಪ್ರಸಾರ ಮಾಡಲು, "ಜ್ಞಾನ ಪ್ರಸಾರಕ



ಮಂಡಲಿ" ಎಂಬುದನ್ನು ಸ್ಥಾಪಿಸಿದ ಕೆಲಸದಲ್ಲಿ ಅವರೂ ನಿಮಿತ್ತರಾಗಿದ್ದರು. "ಜೋರೋ ಆಸ್ಟ್ರಿಯನಿಜ಼ಂ" (ಜೋರೋ ಆಸ್ಟ್ರಿಯನ್ ಮತವು) ತನ್ನ ಭಾರತೀಯ ನೆಲೆಯಲ್ಲಿ, ತನ್ನ ಶುದ್ಧತೆಯನ್ನು ಸಾಕಷ್ಟು ಕಳೆದುಕೊಂಡಿತ್ತಾಗಿ, ದಾದಾಭಾಯಿ ಅವರು, "ಮ್ಯಾಜ಼್ದಾಯಾಸ್ನಾನ್ ಸಭೆ" ಎಂಬುದನ್ನು ಸ್ಥಾಪಿಸಿ, ತಮ್ಮ ಮತದ ಸಿದ್ಧಾಂತಗಳನ್ನು ಪರಿಷ್ಕರಿಸಲೆತ್ನಿಸಿದರು. ನಂತರ, ಸುಧಾರಣೆಯ ಭಾವನೆಯನ್ನು ಜಾಗೃತವಾಗಿಡಲು, ರಾಸ್ತ್‌ಗೋಫ್ತಾರ್ ಎಂಬ ಸಾಪ್ತಾಹಿಕವನ್ನು ಪ್ರಾರಂಭಿಸಿದರು. ದಾದಾಭಾಯಿ ಅವರ ಈ ಘಟ್ಟದ ಚಟುವಟಿಕೆಗಳನ್ನು, ಅವರ ನಂತರದ ರಾಜಕೀಯದ ಮಹತ್ಸಾಧನೆಗಳ ಉಜ್ವಲ ಪ್ರಭೆಯಲ್ಲಿ, ಮರೆತುಹೋಗುವ ಸಾಧ್ಯತೆಗಳೂ ಇವೆ. ಆದರೂ, ಪಾರ್ಸಿಗಳ ಸಾಮಾಜಿಕ ಪದ್ಧತಿಗಳ ಆಮೂಲಾಗ್ರ ಪರಿವರ್ತನೆಗೆ, ಸೂಕ್ತ ತಳಹದಿ ಹಾಕುವ ಕೆಲಸದಲ್ಲಿ ಅವರ ಸಾಧನೆ ಇತ್ತಾಗಿ, ಇಲ್ಲಿ ಅದನ್ನು ದಾಖಲಿಸುವುದು ಸೂಕ್ತವಾಗಿದೆ.

ಪಾರ್ಸಿ ಮದುವೆ ಮತ್ತು ವಿಚ್ಛೇದನದ ಕಾನೂನು ಮೊತ್ತಮೊದಲಿಗೆ ಒಂದು ಸಾಮಾಜಿಕ ಶಾಸನದ ಅಂಶವಾಗಿದ್ದು ನಂತರ ಅದು ಎಲ್ಲಾ ಭಾರತೀಯ ಜಾತಿಗಳನ್ನೂ ಬಾಧಿಸಿತು. ಅದು ಬಹುಪತ್ನಿತ್ವ ಪದ್ಧತಿಯನ್ನು ತೊಡೆದುಹಾಕಿತು ಮತ್ತು ವಿಚ್ಛೇದನದ ಕಾನೂನನ್ನು ಬಿಗಿಮಾಡಿತು. ಪಾರ್ಸಿ ಸಕ್ಸೆಷನ್ ಆಕ್ಟ್ ಎಂಬುದು, ಶಾಸನಾಧಿಕಾರದ ಮತ್ತೊಂದು ಅಂಶವಾಗಿದ್ದು, ದಾದಾಭಾಯಿ ಮತ್ತು ಅವರ ಮೊದಲಿನ ಜೊತೆಗಾರ ಸುಧಾಕರರ ಪ್ರಥಮ ಪ್ರಯತ್ನಗಳಿಲ್ಲದಿದ್ದಲ್ಲಿ ಅದು ಸಾಧ್ಯವಾಗುತ್ತಿರಲಿಲ್ಲ. ದಾದಾಭಾಯಿ ಅವರು ಆಮೂಲಾಗ್ರ ಸುಧಾರಕರಾಗಿರಲಿಲ್ಲ ಎಂಬುದು ಎಷ್ಟೋ ವರ್ಷಗಳ ನಂತರ ಅವರು ತಮ್ಮ ಮಗಳನ್ನು ಸೈಕಲ್ ತುಳಿಯಬಾರದೆಂದೂ ಮತ್ತು ಅದರಿಂದ ಜನಸಾಮಾನ್ಯರ ಮನೋಭಾವಗಳಿಗೆ ಅಹಿತವಾಗುತ್ತದೆಂದೂ ಹೇಳಿದಾಗ ಅರ್ಥವಾಯಿತು.

ಅವರನ್ನು ಉಚ್ಚಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಕಳುಹಿಸುವ ವಿಷಯವಿನ್ನೂ ಫಲದಾಯಕವಾಗುವುದಕ್ಕಿಂತ ಮೊದಲೇ ಅವರ ನಕ್ಷತ್ರಗಳು ಅವರನ್ನು ಇಂಗ್ಲೆಂಡಿಗೆ ಕರೆದೊಯ್ದವು. ವಿದ್ಯಾಭ್ಯಾಸದಿಂದ ವ್ಯಾಪಾರ ಎಂಬುದೇನೂ ಸಾಧಾರಣವಾದ ವಿಕಸನವಾಗಿರಲಿಲ್ಲ. ಆದರೆ ದಾದಾಭಾಯಿ ಅವರ ಬುದ್ಧಿಮತ್ತತೆ ಮತ್ತು ನಿಯತ್ತು ಎರಡೂ ಅವರಿಗಾಗಿ ಲಂಡನ್ನಿನಲ್ಲಿ ಕಾಮಾಗಳಿಂದ ಪ್ರಾರಂಭವಾಗಬೇಕಿದ್ದ ವ್ಯಾಪಾರ ಸಂಸ್ಥೆಗೆ ಪಾಲುದಾರನಾಗುವ ಪ್ರಸ್ತಾಪವನ್ನು ತಂದವು. ೧೮೫೫ರಲ್ಲಿ ದಾದಾಭಾಯಿ ಅವರಿಗೆ ಕೇವಲ ಮೂವತ್ತು ವರ್ಷಗಳಾಗಿದ್ದವು. ಆಗ ಅವರು ಇಂಗ್ಲೆಂಡಿಗೆ ಹೋಗಿ, ಅಲ್ಲಿಯೇ ತಮ್ಮ ತೊಂಭತ್ತು ವರ್ಷಗಳ ದೀರ್ಘ ಜೀವನದ ಅರ್ಧಭಾಗವನ್ನು ಕಳೆದರು. ಅವರ ವೃತ್ತಿ ಜೀವನದಲ್ಲಾದ ಈ ಬದಲಾವಣೆಯು ಅವರಿಗೆ ಹೆಚ್ಚಿಗೆ ಹಣವನ್ನೇನೋ ದೊರಕಿಸಿತು. ಆದರೆ ಅವರ ಉತ್ತಮ ಧ್ಯೇಯಗಳು ಅವರನ್ನು

ಸೂಕ್ತ ವಾಣಿಜ್ಯೋದ್ಯಮಿಯನ್ನಾಗಿಸಲಿಲ್ಲ. ಅದರಿಂದಾಗಿ ಅವರಿಗೆ ತಮ್ಮ ಪಾಲುದಾರರೊಂದಿಗೆ ಹೊಂದಿಕೊಳ್ಳಲಾಗಲಿಲ್ಲ. ಅವರು, ತಮ್ಮ ವ್ಯಾಪಾರ ಸಂಸ್ಥೆಯ ವ್ಯವಹಾರಗಳನ್ನು ಹೆಂಡ, ಅಫೀಮು ಮತ್ತು ಸಾರಾಯಿಗಳಲ್ಲಿ ತೊಡಗಿಸಲು ಸಿದ್ಧರಾಗಲಿಲ್ಲ. ಅವರು ತಾವಾಗಿ ತಮ್ಮ ಭಾಗವನ್ನು ಬಿಟ್ಟುಕೊಟ್ಟರು. ಅವರ ಪಾಲುದಾರಿಕೆ ಕೊನೆಗೊಂಡಿತು. ಆದರೂ ಅವರಲ್ಲಿದ್ದ ಆಜನ್ಮಸಿದ್ಧ ಪ್ರತಿಭೆಯು ಅವರನ್ನು ಒಳ್ಳೆಯ ವ್ಯಾಪಾರಿಯನ್ನಾಗಿ ಮಾಡಿತು. ತಮ್ಮ ಸ್ವಂತ ಹೆಸರಿನಲ್ಲಿಯೇ ಅವರು ಮತ್ತೊಂದು ವ್ಯಾಪಾರ ಸಂಸ್ಥೆಯನ್ನು ಹೂಡಿಕೊಂಡರು. ಕೋಟ್ಯಾಧೀಶ್ವರರಂತೂ ಆಗಲಿಲ್ಲ. ಆದರೆ ತಾವು ಸುಖವಾಗಿರುವುದಕ್ಕೆ ಸಾಕಷ್ಟು ಆಸ್ತಿಯನ್ನು ಮಾಡಿಕೊಂಡರು. ಪುಸ್ತಕಗಳನ್ನು ಕೊಂಡುಕೊಂಡು, ಅವರು ನೀಲಿ ಪುಸ್ತಕಗಳ ಸಮುದ್ರದ ಮಧ್ಯೆ ಇರತೊಡಗಿದರು. ಸೂಕ್ತ ಕಾರಣಗಳಿದ್ದಲ್ಲಿ ಸಹಾಯವನ್ನೂ ಮಾಡುತ್ತಿದ್ದರು. ಬಡ ವಿದ್ಯಾರ್ಥಿಗಳಿಗೆ ಅದರಲ್ಲಿಯೂ ಭಾರತೀಯ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದ್ದನ್ನಂತೂ ಹೇಳಲೇಬೇಕಾಗಿಲ್ಲ.

ಅವರ ಇಂಗ್ಲೆಂಡಿನಲ್ಲಿನ ಜೀವನವು ಅವರನ್ನು ದೃಢವಾದ ಭಾರತೀಯ ದೇಶಭಕ್ತರನ್ನಾಗಿಸಿತು. ಅವರು ತಾವೇ ಹೆಸರಿಟ್ಟ "ಭಾರತದಲ್ಲಿ ಇಂಗ್ಲೆಂಡಿನ ಬ್ರಿಟಿಷರಲ್ಲದವರ ಆಡಳಿತ" ಎಂಬುದಕ್ಕೆ ವಿರುದ್ಧವಾಗಿ ಘೋರ ಹೊಡೆದಾಟ ಸಾರಿದರು. ಇಂಗ್ಲೆಂಡಿನಿಂದ ಮತ್ತು ಇಂಗ್ಲಿಷ್ ಭಾಷೆಯಿಂದ ಅವರು ಸಾಕಷ್ಟು ಕಲಿತರು ಮತ್ತು ಅದರಿಂದಾಗಿಯೇ ಅವರು ಇಂಗ್ಲೆಂಡಿನ ಬಗ್ಗೆಯ ತಮ್ಮ ಅಪಾರ ಒಲವನ್ನು ತ್ಯಜಿಸದಾದರು. ಅವರಿಗೆ ಬ್ರಿಟಿಷರ ನ್ಯಾಯದ ಬಗ್ಗೆಯ ವಿವೇಚನೆಯಲ್ಲಿ ಅಪಾರ ನಂಬಿಕೆ ಇತ್ತು. ಒಮ್ಮೆ ಅವರು, "ಇಂಗ್ಲಿಷಿನವರಿಗೆ ನಿರಂಕುಶ ಪ್ರಭುತ್ವ ಬರದು. ಅವರು ಎಷ್ಟೋ ಸಲ ಕೃತ್ಯಗಳಲ್ಲಿ, ಸ್ವೇಚ್ಛಾಪ್ರವೃತ್ತಿಯ ದಬ್ಬಾಳಿಕೆಗಳನ್ನು ಮಾಡಿರಬಹುದು. ಆದರೆ ಅದರಲ್ಲಿ ಜನ್ಮಸಿದ್ಧವಾಗಿ ಬಂದಿರುವ ಹುಟ್ಟುಗುಣ, ಸ್ವಾತಂತ್ರ್ಯ ಪ್ರೇಮ ಮತ್ತು ಅವರು ಹುಟ್ಟಿಬಂದಾಗಿನಿಂದಲೂ ಅವರಲ್ಲಿ ಬೇರೂರಿರುವ ಸಂವಿಧಾನಬದ್ಧತೆ ಮುಂತಾದವು, ಅವರನ್ನು ನ್ಯಾಯಾಲಯದಲ್ಲಿನ ತನಿಖೆಯ ಸಮಯದಲ್ಲಿ, ನಿರಂಕುಶ ಪ್ರಭುಗಳೆಂಬ ಅಪವಾದವನ್ನು ಹೊರದಂತೆ ಭಯದಿಂದ ಹಿಂದಕ್ಕೆ ಹಾರುವಂತೆ ಮಾಡಿತು," ಎಂದರು. ಅವರಿಗೆ ಬ್ರಿಟಿಷ್ ಜನತೆಯ ಧರ್ಮಪ್ರಜ್ಞೆಯಲ್ಲಿ ನಂಬಿಕೆ ಇತ್ತು. ಆದರೆ ಇದೇ ಒಲವು, ಭಾರತದಲ್ಲಿನ ಬ್ರಿಟಿಷ್ ಆಡಳಿತದ ಅನ್ಯಾಯಕ್ಕೆ ವಿರುದ್ಧವಾಗಿ ಬೊಬ್ಬೆ ಹಾಕುವಂತೆ ಮಾಡಿತು ಮತ್ತು ತಮ್ಮ ಭಾಷೆಯಲ್ಲಿ ಅವರು ಹಾಳತವಾಗಿರಲೇ ಇಲ್ಲ.

"ಭಾರತದ ಮೇಲೆ ದಾಳಿ ಮಾಡಿದ ಅತ್ಯಂತ ದುರ್ಘಟನಾಯುಕ್ತ ಮತ್ತು ವಿನಾಶಕಾರಕ ಆಕ್ರಮಣಕಾರರು ಇಂಗ್ಲೆಂಡಿನವರೇ ಆಗಿದ್ದರು." ಅವರು ಮಿತಿಯಿಲ್ಲದ ವ್ಯಥೆಯಿಂದ ಕೂಡಿದವರಾಗಿ, ಉದ್ದಕ್ಕೂ ಹೇಳುತ್ತಾ, "ಬ್ರಿಟಿಷ್ ಸರ್ಕಾರ ಮತ್ತು



ಉತ್ತಮ ಜಾಣ್ಮೆ ಮತ್ತು ವೈಜ್ಞಾನಿಕ ನಿಖರತೆಯಿಂದ ಕೋಟ್ಯಾಂತರ ಜನರನ್ನು ಕ್ಷಾಮಗಳು ಮತ್ತು ಪ್ಲೇಗುಗಳಿಂದ ಕೊಲ್ಲುತ್ತಿತ್ತು. ಕೋಟ್ಯಾಂತರ ಜನರಿಗೆ ಹೊಟ್ಟೆಗೇ ಇಲ್ಲದಂತೆ ಮಾಡಿತ್ತು.... ಆಂಗ್ಲ ಭಾರತೀಯರು ಅಥವಾ ಬ್ರಿಟಿಷರು, ಅತ್ಯಂತ ಬುದ್ಧಿವಂತ ಶಸ್ತ್ರಚಿಕಿತ್ಸಕರಂತಿದ್ದು, ತಮ್ಮ ಹರಿತವಾದ ಚಿಕ್ಕ ಚೂರಿಗಳಿಂದ ಹೃದಯವನ್ನೇ ಕತ್ತರಿಸಿ, ಅದರಿಂದ ಒಂದು ಹನಿರಕ್ತವನ್ನೂ ಬಿಡದಂತೆ ಹೀರುತ್ತಿದ್ದರು" ಎಂದರು. ತಿಲಕರೂ ಕೂಡ ಇದಕ್ಕಿಂತಲೂ ಕಠಿಣವಾದ ಭಾಷೆಯ ಉಪಯೋಗ ಮಾಡಿರಲಿಲ್ಲವೋ ಏನೋ. ಆದರೆ ಇಂಗ್ಲೆಂಡಿನಲ್ಲಿನ ಅವರ ದೀರ್ಘವಾಸ ಮತ್ತು ತಮ್ಮ ಇಂಗ್ಲೆಂಡಿನ ಸ್ನೇಹಿತರ ಬಗ್ಗೆ ಅವರಿಗಿದ್ದ ಹೃತ್ಪೂರ್ವಕ ಭಕ್ತಿ ಮತ್ತು ಪ್ರೇಮವು ಅವರಲ್ಲಿ ಬ್ರಿಟಿಷರ ಗುಣದ ಬಗ್ಗೆ ಒಂದು ಆಂತರಿಕ ಮೆಚ್ಚಿಕೆಯನ್ನು ಮತ್ತು ಅವರ ನ್ಯಾಯ ಪ್ರಜ್ಞೆಯ ಬಗ್ಗೆ ಒಂದು ಒಲವಿನ ಬದ್ಧತೆಯನ್ನು ಹುಟ್ಟಿಸಿತ್ತು. ಅವರಿಗೆ ಬ್ರಿಟಿಷರ ಮನೋವಿಜ್ಞಾನದ ಅರಿವಿತ್ತು. ಭಾರತೀಯ ಮುಖಂಡನೊಬ್ಬನಿಗೆ ಅವರು ಪತ್ರವೊಂದರಲ್ಲಿ, "ಜನರ ಉತ್ಸಾಹವನ್ನು ಉಳಿಸಿಟ್ಟುಕೊಳ್ಳಿ. ನೀವು ಯಾರೂ ಅಂಜುಕುಳಿಗಳಾಗಬೇಡಿ" ಎಂದು ಬರೆದಿದ್ದರು. ಅವರಿಗೆ ಎಂಬತ್ತೊಂದು ವರ್ಷಗಳ ವಯಸ್ಸಾಗಿದ್ದಾಗಲೂ, ಅವರನ್ನೇ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿಗೆ ಅಧ್ಯಕ್ಷರನ್ನಾಗಿ ಏಕೆ ಮಾಡಿದರು ಎಂದರೆ ಅವರೊಬ್ಬರಿಗೇ ಕಾಂಗ್ರೆಸ್ಸಿನ ಎಡ ಬಲಪಕ್ಷಗಳ ನಡುವಿನ ಬಿರುಕನ್ನು ಮುಚ್ಚುವ ಯೋಗ್ಯತೆ ಇದ್ದದ್ದು. ಅವರು, "ನಮ್ಮ ಶ್ರದ್ಧೆ ಮತ್ತು ನಮ್ಮ ಭವಿಷ್ಯ ಎರಡೂ ನಮ್ಮ ಕೈಗಳಲ್ಲೇ ಇವೆ. ನಾವು ನಮಗೂ ದೇಶಕ್ಕೂ ನ್ಯಾಯವಾಗಿದ್ದು, ನಮ್ಮ ಉನ್ನತಿ ಮತ್ತು ಸುಧಾರಣೆಗೆ ಸೂಕ್ತವಾದ ತ್ಯಾಗಗಳನ್ನು ಮಾಡಿದಲ್ಲಿ, ನಾನು ಅನುಮಾನವೇ ಇಲ್ಲದೆ ಹೇಳುವುದೇನೆಂದರೆ, ಬ್ರಿಟಿಷರಂಥ ನ್ಯಾಯನಿಷ್ಠರು ಮತ್ತು ನ್ಯಾಯಪ್ರೇಮಿಗಳೊಂದಿಗೆ, ಯಾವ ಅನುಮಾನವೂ ಇಲ್ಲದಂತೆ ವ್ಯವಹಾರ ಮಾಡುವುದರಿಂದ, ನಾವು ವ್ಯರ್ಥವಾಗಿ ಕೆಲಸ ಮಾಡುತ್ತಿಲ್ಲ ಎಂಬುದರ ಬಗ್ಗೆ ಪೂರ್ಣ ನಂಬಿಕೆ ಇಟ್ಟುಕೊಳ್ಳಬಹುದು ಎಂದೇ" ಎಂದು, ಹಿಂದೆ ಮುಂದೆ ನೋಡದೆ ಹೇಳಿದರು.

ಈ ನಂಬಿಕೆಯು ನಲವತ್ತು ವರ್ಷಗಳ ನಂತರ, ಮಧ್ಯೆ ತಡೆಗಳಿದ್ದಾಗ್ಯೂ, ಕಡೆಗೂ ನ್ಯಾಯವೆಂದು ಸಮರ್ಥಿಸಲ್ಪಟ್ಟಿತು. ಇದು ದಾದಾಭಾಯಿ ಅವರ ವಿಷಯಗಳನ್ನು ವಸ್ತುನಿಷ್ಠ ದೃಷ್ಟಿಯಿಂದ ಅರ್ಥಮಾಡಿಕೊಳ್ಳುವ ಮತ್ತು ತಮ್ಮ ತಲೆಯೊಂದಿಗೆ ಭಾವಗಳನ್ನೂ ಓಡಿಹೋಗದಂತೆ ನೋಡಿಕೊಳ್ಳುವ ಯೋಗ್ಯತೆಗಳಿಗೆ ಕಾಣಿಕೆ ಎಂದುಕೊಳ್ಳಬಹುದು.

ದಾದಾಭಾಯಿ ಅವರ ಕಾರ್ಯಸಾಧನೆಗಳು ಬಹುಮುಖಿಯಾಗಿದ್ದರೂ, ಅವರ ರಾಜಕೀಯದ ಜೀವನ ಗತಿಯಿಂದಾಗಿ, ಅವೆಲ್ಲವೂ ಮಬ್ಬು ಕವಿದಿವೆ. ೧೮೬೬ನೇ ಇಸವಿಯಷ್ಟು ಹಿಂದೆ, ಭಾರತದ ಕೆಲವರೇ ಆದರೂ, ನಿಷ್ಠಾವಂತರಾಗಿದ್ದ

ಬ್ರಿಟಿಷ್ ಸೈನಿಕರೊಂದಿಗೆ, ಅವರು ಈಸ್ಟ್ ಇಂಡಿಯಾ ಅಸೋಸಿಯೋಷನ್ ಸಂಸ್ಥೆಯನ್ನು ಸ್ಥಾಪಿಸಿದರು. ಭಾರತದ ಬಗ್ಗೆ ಕುತೂಹಲವಿದ್ದವರೆಲ್ಲರೂ ಅಲ್ಲಿ ಸೇರಿ, ತಮ್ಮ ತೊಂದರೆಗಳ ಬಗ್ಗೆ ಮಾತುಕತೆ ನಡೆಸಬಹುದಾಗಿತ್ತು. ಅವರು ಕೇವಲ ಪುಸ್ತಕಗಳನ್ನಷ್ಟೇ ಓದುತ್ತಿರದೆ, ಸರ್ಕಾರದ ಪ್ರಕಾಶನಗಳು, ಎಂದರೆ ಮುಖ್ಯವಾದ ಸರ್ಕಾರದ ಸುದ್ದಿಗಳು ಮತ್ತು ವಿಷಣ್ಣ ಪುಸ್ತಕಗಳನ್ನು ಓದುತ್ತಿದ್ದರು. ಅವರ ಅಪಾರ ವಿದ್ವತ್ತಿನ ಪರಿಣಾಮವು, ಅವರು ಭಾರತದ ಅರ್ಥಶಾಸ್ತ್ರದ ಮೊದಲನೆಯ ಶ್ರದ್ಧಾಯುಕ್ತ ವಿದ್ಯಾರ್ಥಿಯಾಗಿ ಅರಳಿದ್ದೇ ಆಗಿತ್ತು. ಇದು ಅವರ ಪ್ರಖ್ಯಾತ ಶ್ರೇಷ್ಠಗ್ರಂಥವಾದ, "ಪಾವರ್ಟಿ ಅಂಡ್ ಅನ್‌ಬ್ರಿಟಿಷ್ ರೂಲ್ ಇನ್ ಇಂಡಿಯ" ಎಂಬುದರಲ್ಲಿ ವಿಶೇಷವಾಗಿ ಸಮರ್ಥಿಸಲ್ಪಟ್ಟಿದೆ. ಆ ಪುಸ್ತಕದ ಶೀರ್ಷಿಕೆ ಹೇಗೆ ಸೂಕ್ತವಾಗಿತ್ತು ಎಂದರೆ, ಭಾರತದಲ್ಲಿ ಬೆಳೆಯುತ್ತಿದ್ದ ಬಡತನವೊಂದನ್ನೇ ಬ್ರಿಟಿಷರ ಆಳ್ವಿಕೆಯಲ್ಲಿ, ಬಾಕಿ ಸಾಲ ತೋರಿಸುವ ಕಡೆಯಿಂದ ಗುರುತಿಸಬೇಕಾಗಿದ್ದದ್ದು ಮತ್ತು "ಅನ್‌ಬ್ರಿಟಿಷ್" ಎಂಬ ಪದವು ದಾದಾಭಾಯಿ ಅವರ ಆತ್ಮದಲ್ಲಿದ್ದ ಹೋರಾಟವಾಗಿತ್ತು. ಈ ಸಂಘರ್ಷಣೆಯು ಅವರಿಗಿದ್ದ ಬ್ರಿಟಿಷರಲ್ಲಿನ ನಂಬಿಕೆ ಮತ್ತು ಬ್ರಿಟಿಷರ ಆಡಳಿತದಿಂದ ಉಂಟಾಗಿದ್ದ ಭಾರತೀಯರ ಬಡತನ ಎಂಬ ಅವರ ದಿಟ್ಟ ಅರಿವು, ಎರಡರ ಪ್ರತೀಕವಾಗಿತ್ತು. ಅವರು "ಕ್ರಾಂತಿ ಮಾಡಬೇಕು, ಕ್ರಾಂತಿ ಮಾಡಬೇಕು; ಕ್ರಾಂತಿ ಮಾಡಬೇಕು" ಎಂಬುದರ ಆವಶ್ಯಕತೆಯನ್ನು ಕಂಡುಕೊಂಡರು. "ತಾವೇನಾದರೂ ಹೌಸ್ ಆಫ್ ಕಾಮನ್ಸ್‌ನಲ್ಲಿ ಗೆದ್ದುಬಂದರೆ, ಆಗ ಭಾರತದ ಅಸಮಾಧಾನದ ಕಾರಣಗಳಾಗಿ, ಪೌರುಷದಿಂದ ದನಿ ಎತ್ತಬಹುದು" ಎಂಬುದರ ಬಗ್ಗೆ, ಅವರಿಗೆ ಭಾವನೆಗಳು ಮೂಡತೊಡಗಿದವು. ಇಂಗ್ಲೆಂಡಿನಲ್ಲಿ ಮಾತ್ರ, ರಾಷ್ಟ್ರದ ಪ್ರಜೆಗಳ ತಂಡದ ಸದಸ್ಯನು, ರೈತರ ಸದಸ್ಯನಿಗೆ ವಿರುದ್ಧವಾಗಿ, ಚುನಾವಣೆಗೆ ನಿಲ್ಲಬಹುದಾಗಿದ್ದದ್ದು. ಮೊದಲನೆಯ ಬಾರಿಯ ಅವರ ಅಭ್ಯರ್ಥಿತನದಲ್ಲಿ ಸೋಲುಂಟಾಯಿತಾದರೂ, ಅದರಿಂದ ಅತ್ಯಂತ ಮೌಲ್ಯದ ಅನುಭವ ಉಂಟಾಯಿತು. ಎರಡು ವರ್ಷಗಳ ನಂತರ, ಅವರು ಸೆಂಟ್ರಲ್ ಫಿನ್ಸ್‌ಬರಿಯಿಂದ, ಲಿಬರಲ್ ಪಕ್ಷದ ಪರವಾಗಿ ನಿಂತು, ಕೆಲವೇ ವೋಟುಗಳಿಂದಲೇ ಆದರೂ ಅತ್ಯಂತ ಶ್ರಮಪಟ್ಟು, ಗೆದ್ದರು. ಅದೊಂದು ಉತ್ತಮವಾದ ಗೆಲುವೇ ಆಗಿತ್ತು. ಆದರೆ, ಅದು ಸ್ವಲ್ಪಮಟ್ಟಿಗೆ ಕನ್ಸರ್ವೇಟಿವ್ ಪ್ರೈಂ ಮಿನಿಸ್ಟರನಾಗಿದ್ದ ಲಾರ್ಡ್‌ಸ್ಯಾಲಿಸ್‌ಬರಿಯ ಪೆದ್ದುತನದ ಅಚಾತುರ್ಯದಿಂದಲೂ ಆಗಿತ್ತು ಎನ್ನಬಹುದು. ಅವನು ದಾದಾಭಾಯಿ ಅವರನ್ನು, "ಕಪ್ಪುಮನುಷ್ಯ" ಎನ್ನುವ ಸ್ವಾತಂತ್ರ್ಯವನ್ನು ತಾನಾಗಿ ತೆಗೆದುಕೊಂಡನು. ನಿಜವಾಗಿಯೂ ಹೇಳಬೇಕೆಂದರೆ, ದಾದಾಭಾಯಿ ಅವರು, ಯೂರೋಪಿಯನ್ನರಷ್ಟೇ ಬೆಳ್ಳಗಿದ್ದರು. ಹೌಸ್ ಆಫ್ ಕಾಮನ್ಸ್‌ನಲ್ಲಿನ ಅವರ ಗೆಲುವು ಸಂತೋಷದ ರೋಮಾಂಚನವನ್ನೇ ಉಂಟಾಗಿಸಿತು. ಭಾರತದಾದ್ಯಂತ ದಾದಾಭಾಯಿ ಅವರ ಹೆಸರು, ಎಲ್ಲರ



ಮನೆಮಾತಾಯಿತು ಮತ್ತು ಅವರ ಚಿತ್ರಗಳು ಇಡೀ ಭಾರತದಲ್ಲಿ ಎಲ್ಲರ ಮನೆಗಳ ಗೋಡೆಗಳನ್ನೂ ಅಲಂಕರಿಸಿದವು.

ತಮ್ಮ ಸಂಕುಚಿತ ಸಂಸದೀಯ ವೃತ್ತಿ ಜೀವನದಲ್ಲಿ, ಅವರು ಇಂಗ್ಲೆಂಡ್ ಮತ್ತು ಇಂಡಿಯಾಗಳಲ್ಲಿ ಒಂದೇ ಕಾಲದಲ್ಲಿ ನಡೆಯಬೇಕಾಗಿದ್ದ ಪರೀಕ್ಷೆಯ ಬಗ್ಗೆ ನಿರ್ಣಯವನ್ನು ಮೂಡಿಸುವುದರಲ್ಲಿ ಉತ್ತೀರ್ಣರಾದರು. ಆದರೂ, ಎಷ್ಟೋ ವರ್ಷಗಳವರೆಗೆ, ಅದರಿಂದ ಏನೂ ಲಾಭವಾಗಲಿಲ್ಲ. ಜೊತೆಗೆ ಅವರು, ಭಾರತ ಸರ್ಕಾರದಿಂದ ಉಂಟಾಗುವ ಸಿವಿಲ್ ಮತ್ತು ಮಿಲಿಟರಿ ಖರ್ಚುಗಳ ಬಗ್ಗೆ ತನಿಖೆ ಮಾಡಲು, ಒಂದು "ರಾಯಲ್ ಕಮಿಷನ್" ಸ್ಥಾಪಿಸುವುದರಲ್ಲಿಯೂ ಉತ್ತೀರ್ಣರಾದರು ಮತ್ತು ಸ್ವತಃ ಅದರ ಸದಸ್ಯತ್ವದ ಭಾಗ್ಯವನ್ನೂ ಅನುಭವಿಸಿದರು.

ಅವರ ದೀರ್ಘ ಜೀವನದಲ್ಲಿ ಅವರು ಬಾಂಬೆ ಮುನಿಸಿಪಾಲಿಟಿಯ ಸದಸ್ಯರಾಗಿ, ನಂತರ ಬರೋಡದ ದಿವಾನರಾಗಿ ತಮ್ಮ ಅಧಿಕಾರ ನಿರ್ವಹಣೆಯ ಯೋಗ್ಯತೆಯನ್ನು ಪ್ರದರ್ಶಿಸಿದರು. ಕೊನೆಯದಂತೂ, ಉಪಕಾರ ಸ್ಮರಿಸದ ಕೆಲಸವೇ ಆಗಿತ್ತು. ಏಕೆಂದರೆ ಅವರು ಮುಲ್‌ಹರೋ ಗಾಯಕ್‌ವಾರ್‌ನಲ್ಲಿ ಒಬ್ಬ ಅಪ್ರಾಮಾಣಿಕ ಮಹಾರಾಜನ ಸೇವೆ ಮಾಡಬೇಕಾಗಿತ್ತು. ಕಡೆಗೆ ಅವನ ದುರಾಡಳಿತದಿಂದಾಗಿ, ಬ್ರಿಟಿಷರು, ಆ ರಾಜನನ್ನೇ ಬಲವಂತವಾಗಿ ತೆಗೆದುಹಾಕಿದರು.

ಲೇಬರ್ ಪಕ್ಷದ ನಿಜವಾದ ಭಾವನೆಯ ಅರ್ಥವನ್ನು ಕಷ್ಟದಿಂದ ಗ್ರಹಿಸಬಹುದಾಗಿದ್ದ ಕಾಲದಲ್ಲಿಯೂ, ದಾದಾಭಾಯಿ ಅವರಿಗೆ, ಭಾರತದ ಸ್ವಾತಂತ್ರ್ಯವನ್ನು ಪಡೆಯಲು ಬೇಕಿದ್ದ, ಶ್ರಮಜೀವಿಗಳ ಬೆಲೆಯನ್ನು ಶ್ಲಾಘಿಸುವ ಸೂಕ್ಷ್ಮ ಪರಿಜ್ಞಾನವಿತ್ತು. ಸಮಾಜವಾದಿ ಹಿಂಡ್‌ಮನ್ನನೊಂದಿಗಿನ ಅವರ ಸ್ನೇಹಕ್ಕೆ ಬೆಲೆಯಿತ್ತು. ಕ್ಲೆಮೆಂಟ್ ಅಟ್ಲೀ ಅವರ ಲೇಬರ್ ಸರ್ಕಾರವು, ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡಿದ ವಿಷಯವು ಚರಿತ್ರಾರ್ಹವಾಗಿದೆ. ಜೊತೆಗೆ ಅದು 'ಇಂಗ್ಲೆಂಡ್ ಕೇಳಿದವುಗಳನ್ನೆಲ್ಲಾ ನೀಡುತ್ತದೆ' ಎಂದಿದ್ದ ದಾದಾಭಾಯಿ ಮತ್ತು ಇತರ ರಾಜಕೀಯ ಮುಖಂಡರ ನಂಬಿಕೆಯನ್ನು ನ್ಯಾಯವೆಂದು ಸಮರ್ಥಿಸಿತು.

ರಾಜಕಾರಣಿಗಳನ್ನು ಶ್ಲಾಘಿಸಬಹುದು, ಗೌರವಿಸಬಹುದು ಮತ್ತು ಇಷ್ಟಪಡಬಹುದು, ಆದರೆ ಹಾಗೆ ಶ್ಲಾಘಿಸಿ, ಗೌರವಿಸಿ, ಇಷ್ಟಪಡಬಹುದಾದ ರಾಜಕಾರಣಿಗಳು ಬಹಳ ಕಡಿಮೆ. ದಾದಾಭಾಯಿ ಅವರು, ಇಂಥ ಅಪರೂಪದ ಗುಂಪಿಗೆ ಸೇರಿದವರಾಗಿದ್ದರು. ಭಾರತದ ರಾಜಕಾರಣಿಗಳ ಶ್ರೇಣಿಯಲ್ಲಿ, ಅವರಿಗೆ ಒಬ್ಬರೇ ಸಂತರು ಸಿಕ್ಕಿದ್ದು ಮತ್ತು ಅವರೇ ಮಹಾತ್ಮಗಾಂಧಿ. ಅವರಿಬ್ಬರ ನಡುವೆ ಒಂದು ನಿಶ್ಚಿತವಾದ ಸಂತತ್ವವಿತ್ತು. ಭಾರತೀಯರಿಗಂತೂ ಮತ್ತೊಬ್ಬನು ಪ್ರಿಯನಾಗಬೇಕಾಗಿದ್ದರೆ ಅದು ಅವನ ಅತ್ಯುಚ್ಚ ನಡತೆಯೇ ಆಗಿರಬೇಕು. ಅಗಣಿತ ಮೆಚ್ಚುಗರಿಗೆ, ಗಾಂಧೀಜಿ 'ಬಾಪು' ಆಗಿದ್ದರೆ, ದಾದಾಭಾಯಿ ಅವರು, "ದಾದಾ"

ಎಂದು ಕೇವಲ ಅವರ ಭಾರತದಾದ್ಯಂತದ ಜನತೆಗಷ್ಟೇ ಅಲ್ಲದೆ, ಗಾಂಧೀಜಿಯವರಿಗೂ, ದಾದಾ ಆಗಿದ್ದರು. ಅಂಥ ಜೀವಿಗಳು, ಮನುಷ್ಯತ್ವದ ರಸಯುಕ್ತಾಂಶವೇ ಆಗಿರುತ್ತಾರೆ. ತನ್ನ ರಾಜಕೀಯದ ಅಧಃಪತನದ ಕಾಲದಲ್ಲಿಯೂ ಭಾರತವು ದಾದಾಭಾಯಿ ನವರೋಜಿ ಅವರಂಥ ಕೀರ್ತಿವಂತ ಹಾಗೂ ಅತ್ಯುಚ್ಚ ಜೀವಸ್ವರೂಪಿಯನ್ನು ಸೃಷ್ಟಿಸಿರುವುದು ಭಾರತದ ಗೌರವವೆಂದೇ ನಾವು ಭಾವಿಸಬೇಕು.

* * * *



# ೫. ಆನಿ ಬೆಸೆಂಟ್

ನಮ್ಮ ತೂರಾಡುವ ಹೆಜ್ಜೆಗಳನ್ನು ನೋಡಿ ಭಗವಂತನು ನಮ್ಮ ಸಮಗ್ರತೆಯ ಕಡೆಗಿನ ನಿರಂತರ ಹೋರಾಟದಲ್ಲಿ ಸಹಾಯ ಮಾಡಲೆಂದು ಕೆಲವು ಹಿರಿಯ ಆತ್ಮಗಳನ್ನು ಆಗಿಂದಾಗ್ಯೆ ಕಳುಹಿಸುವುದುಂಟು. ಡಾ. ಆನಿ ಬೆಸೆಂಟರು ಅಂಥ ಒಬ್ಬ ಹಿರಿಯ ಜೀವಸ್ವರೂಪಿ.

೧೮೪೭ನೆಯ ಇಸವಿಯ ಅಕ್ಟೋಬರ್ ಒಂದರಂದು, ಅವರು ಆನ್ನಿವುಡ್ ಎಂಬ ಹೆಸರಿನಲ್ಲಿ ಜನ್ಮತಾಳಿದರು. ಇಪ್ಪತ್ತು ವರ್ಷಗಳ ನಂತರ, ಅವರು, ರೆವರೆಂಡ್ ಫ್ರಾಂಕ್ ಬೆಸೆಂಟರನ್ನು ಮದುವೆಯಾದರು. ಒಂದು ಸಂಪೂರ್ಣ, ಸಮೃದ್ಧ ಪ್ರಯೋಜನಕಾರಿ ಜೀವನವನ್ನು ನಡೆಸಿದ ನಂತರ ಅವರು ೧೯೩೩ ನೇ ಇಸವಿಯ ಸೆಪ್ಟೆಂಬರ್ ಇಪ್ಪತ್ತರಂದು ದೇಹ ತ್ಯಜಿಸಿದರು.

ಡಾ. ಬೆಸೆಂಟರ ಜೀವನವು ಮಾನವ ಜೀವಿಯೊಬ್ಬರ ವಿಶ್ವದ ಮೂಲಭೂತ ಸತ್ಯಾನ್ವೇಷಣೆಯಲ್ಲಿನ ಯಾತ್ರೆಯ ಒಂದು ರೀತಿಯ ಸಂಕ್ಷಿಪ್ತ ಕಾವ್ಯದಂತೆ ಇರುವಂತಿದೆ. ಅವರು ಚಿತ್ರ–ವಿಚಿತ್ರವಾದ ಅನುಭವ ಪೂರ್ಣ ಅಮೂಲ್ಯ ಜೀವನವನ್ನೇ ಜೀವಿಸಿದರು. ಅವರು ಜೀವನದ ಸುಮಾರು ಎಲ್ಲಾ ಅವಸ್ಥೆಗಳನ್ನೂ ಅನುಭವಿಸಿದ್ದರು.

ಆನ್ನಿವುಡ್ ಆಗಿದ್ದಾಗ, ಅವರು ಅತ್ಯಂತ ಶ್ರದ್ಧಾಯುಕ್ತ ಕ್ರಿಶ್ಚಿಯನ್ ಆಗಿದ್ದರು. ದೇವರು ಮತ್ತು ಜೀಸಸ್ ಇಬ್ಬರೂ ಅವರಿಗೆ ಅಮೂರ್ತರೂಪಗಳಾಗಿ ಅಲ್ಲದೆ, ಯಥಾವತ್ತಾದ ರೂಪಗಳೇ ಆಗಿದ್ದವು. ಅರ್ಚಕನು, ಅವರಿಗೆ ಭೂಮಿಯ ಮೇಲೆ ನಡೆಯುತ್ತಿದ್ದ ಭಗವಂತನೇ ಆಗಿದ್ದನು. ಚರ್ಚಿನ ಅಂಥ ಒಬ್ಬ ಗೌರವಾನ್ವಿತ ಪುರುಷನ ಜೀವನ ಸಂಗಾತಿಯೂ, ಪತ್ನಿಯೂ ಆಗುವುದೊಂದು ಅಪರೂಪದ ಗೌರವವೆಂದೇ ಭಾವಿಸಿ, ಆ ಚಿಕ್ಕ ವಯಸ್ಸಿನಲ್ಲಿಯೇ ಅವರು, ರೆವರೆಂಡ್ ಫ್ರಾಂಕ್ ಬೆಸೆಂಟರನ್ನು ಮದುವೆಯಾದರು. ಆದರೂ ಅವರನ್ನು ನ್ಯಾಯಪರವಾದ ಅನುಮಾನಗಳು ಸತಾಯಿಸತೊಡಗಿದವು ಮತ್ತು ಪ್ರಪಂಚದ ಘಟನೆಗಳು ಅವರಿಗೆ ಒಂದಾದ ಮೇಲೆ ಒಂದರಂತೆ ಸಮಸ್ಯೆಗಳನ್ನೇ ಉಂಟಾಗಿಸಿ ತಬ್ಬಿಬ್ಬುಗೊಳಿಸಿದವು. ಅದಕ್ಕಾಗಿ ಆಕೆ, ಪರಿಹಾರಗಳನ್ನು ಹುಡುಕತೊಡಗಿದರು. ತಮ್ಮ ಮತದಲ್ಲಿ ಅವರನ್ನು ದಿಗ್ಭ್ರಮೆಗೊಳಿಸಿದ್ದ ವಿವಿಧ ಪ್ರಶ್ನೆಗಳಿಗೆ ಅವರಿಗೆ ಅರ್ಥವಾಗುವಂತೆ ಯಾವುವೂ ತೃಪ್ತಿಕಾರಕ ಪರಿಹಾರಗಳು ದೊರಕಲಿಲ್ಲ.

ಅವರಿಗೆ ಸತ್ಯದ ಹೊರತು ಮತ್ತೇನೂ ಗಮನಾರ್ಹವಾಗಿರಲಿಲ್ಲ. ಹಾಗಾಗಿ ಸತ್ಯಕ್ಕಾಗಿ, ಅವರ ತೀವ್ರತಮ ಹುಡುಕಾಟ ಪ್ರಾರಂಭವಾಯಿತು. ಮೋಸ ಅಥವಾ ಅದರ ಯಾವುದೇ ರೂಪವಾಗಿದ್ದರೂ, ಆಕೆಗೆ ಶಾಪಗ್ರಸ್ತವಾಗಿತ್ತು. ಆಕೆ ಅಜ್ಞಾನಿಯನ್ನೂ ಅರ್ಥಮಾಡಿಕೊಳ್ಳುತ್ತಿದ್ದರು ; ಸೋಲುಗಳೊಂದಿಗೆ ಸಹಾನುಭೂತಿಯಿಂದ ಇರುತ್ತಿದ್ದರು. ಅವರು ಅಸಹಾಯಕ ನಿತ್ರಾಣಿಗಳನ್ನು ಕ್ಷಮಿಸಿ, ಕಡೆಗೆ ಸಹಿಸಿಕೊಳ್ಳುತ್ತಲೂ ಇದ್ದರು. ಕಪಟತನ, ಆಷಾಢಭೂತಿತನ, ಮಿಥ್ಯಾಚಾರ ಮುಂತಾದ ಯಾವುದೇ ರೀತಿಯ ಅಸತ್ಯಗಳನ್ನೂ ಅವರು ಸಹಿಸುತ್ತಿರಲಿಲ್ಲ. ಸತ್ಯಕ್ಕಾಗಿ ಆಕೆ ಎಲ್ಲವನ್ನೂ ಅರ್ಪಿಸಲು ಸಿದ್ಧರಿದ್ದರು ಮತ್ತು ನಿಜವಾಗಿಯೂ ತ್ಯಾಗವನ್ನು ಮಾಡಿದರು.

ಚಾರ್ಲ್ಸ್ ಬ್ರಾಡ್‌ಲಾಫ್‌ರೊಂದಿಗೆ ಆಕೆಯ ಕೆಲಸದ ಸಹೋದ್ಯಮ, ಫೆಬಿಯನ್ ಸೋಷಿಯಲಿಸ್ಮ್‌ನ ಕಾರಣಕ್ಕಾಗಿ ಆಕೆಯ ದುಡಿಮೆ, ಮ್ಯಾಚ್‌ಮೇಕರ್ಸ್ ಯೂನಿಯನ್‌ಗಾಗಿ ಆಕೆಯ ಕಾಯಕ ಮತ್ತು ದಲಿತರ ಹಾಗೂ ನರಳುತ್ತಿರುವವರ ಧ್ಯೇಯವನ್ನು ಎತ್ತಿ ಹಿಡಿಯಲು ಆಕೆಗಿದ್ದ ಸಹಜವಾದ ಆಸಕ್ತಿ ಎಲ್ಲವೂ ಇಲ್ಲಿ ವಿಶದವಾಗಿ ಹೇಳಬೇಕಾದ ಆವಶ್ಯಕತೆಯೇ ಇಲ್ಲದಂತೆ ಎಲ್ಲರಿಗೂ ಚಿರಪರಿಚಿತವಾಗಿದ್ದವು.

ಆಕೆಯ ಬಿಡುವಿಲ್ಲದ ಕೆಲಸಗಳ ನಡುವೆ, ಆಕೆ ವಿವಿಧ ವಿಷಯಗಳನ್ನು ಓದಿಕೊಳ್ಳಲೂ ಸಹ ಸಮಯವನ್ನು ಕಂಡುಕೊಂಡರು. ಹಲವಾರು ವಿಜ್ಞಾನದ ವಿಷಯಗಳಲ್ಲಿ ಆಕೆ ಆನರ್ಸ್ ಡಿಪ್ಲೋಮಾಗಳನ್ನು ಪಡೆದರು. ತಾವು ಮಾಡಿದ್ದರಲ್ಲೆಲ್ಲಾ ತಮ್ಮ ಸ್ವಂತದ ಒಂದು ಗುಣವನ್ನು ಸೇರಿಸುತ್ತಿದ್ದುದು, ಆಕೆಯನ್ನು ಅವರು ಕೈ ಇಟ್ಟ ಎಲ್ಲದರಲ್ಲಿಯೂ ಎಂದರೆ ಅದು ರಾಜನೀತಿಯೋ, ಅಧ್ಯಾತ್ಮವೋ, ಶಿಕ್ಷಣ ವ್ಯವಸ್ಥೆಯೋ, ವಿಜ್ಞಾನವೋ, ಕಲೆಯೋ ಏನೇ ಆಗಿರಲಿ, ಅದರಲ್ಲಿ ಆಕೆಯನ್ನು ಪರಿಣತಳನ್ನಾಗಿ ಮಾಡುತ್ತಿತ್ತು. ಒಮ್ಮೆ ಅವರು, ಜೆ. ನಾರಾಯಣಯ್ಯ ಎಂಬುವವರ ವಿರುದ್ಧವಾಗಿ ತಮ್ಮ ಸ್ವಂತ ಮೊಕದ್ದಮೆಯನ್ನು ತಾವೇ ಹೇಗೆ ವಾದಿಸಿದರು ಎಂಬುದನ್ನಿಲ್ಲಿ ನೆನಪಿಸಿಕೊಳ್ಳಬಹುದು. ಆ ಚಿಕ್ಕ ನ್ಯಾಯಾಲಯದಲ್ಲಿ ಆಕೆ ಸೋತಂತಾದರೂ ಪ್ರೈವಿ ಕೌನ್ಸಿಲ್ಲಿನಲ್ಲಿ (ಬ್ರಿಟನ್ನಿನ ರಾಜ ರಾಣಿಯ ಆಪ್ತ ಸಮಾಲೋಚಕ ಸಭೆ) ನ್ಯಾಯಾಧೀಶರು ಆಕೆ ಕೆಳಗಿನ ಕೋರ್ಟುಗಳಲ್ಲಿ ಒತ್ತಿ ಹೇಳುತ್ತಿದ್ದ ಪ್ರತಿಯೊಂದು ವಿಷಯವನ್ನೂ ಒಪ್ಪಿಕೊಂಡರಾದ್ದರಿಂದ ಅಲ್ಲಿ ಗೆದ್ದರು.

ಮ್ಯಾಡಂ ಎಚ್. ಪಿ. ಬ್ರವಾಟ್‌ಸ್ಕಿ ಅವರೊಂದಿಗೆ ಸಂಬಂಧ ಮೂಡಿ ಬಂದಾಗಲಂತೂ ಆಕೆಗೆ ಬಿರುಗಾಳಿಯಿಂದ ಶಾಂತ ಸ್ಥಿತಿಗೆ ಬಂದಂತಾಗಿತ್ತು. ತಮ್ಮ ಜೀವನ ಚರಿತ್ರೆಯಲ್ಲಿ, ಡಾ. ಬೆಸೆಂಟರು ತಮ್ಮದೇ ಆದ ಸ್ವಂತದ ಅಸದೃಶ ವೈಖರಿಯಲ್ಲಿ ಆಕೆ, ಆ ಹಿರಿಯ ಹೆಂಗಸನ್ನು ಭೇಟಿಯಾದ ರೀತಿಯನ್ನು ರೋಮಾಂಚಕಾರಿ ಪದಗಳಲ್ಲಿ, "ಆಕೆ ಮ್ಯಾಡಂ ಬ್ಲವಾಟ್‌ಸ್ಕಿ ಬಳಿಗೆ ಹೋದರು, ಆಕೆಯನ್ನು ನೋಡಿದರು



ಮತ್ತು ಆಕೆಯ ಶಿಷ್ಯೆಯಾದರು", ಎಂದು ವರ್ಣಿಸಿದ್ದಾರೆ. ಆಕೆಗೆ ಅಲ್ಲಿ ದೇವತಾ ತತ್ವಜ್ಞಾನ ಯೋಗದಲ್ಲಿ (ಥಿಯಾಸಫಿ), ದೀರ್ಘಕಾಲದಿಂದ ಅರಸುತ್ತಿದ್ದ ಸತ್ಯದ ಅರಿವಾಯಿತು. ಅದನ್ನೇ ಮ್ಯಾಡಂ ಬ್ಲವಾಟ್‌ಸ್ಕಿಯವರು, ಸೀಕ್ರೆಟ್ ಡಾಕ್ಟ್ರಿನ್ ಎಂಬ ಪುಸ್ತಕದ ಮೂರು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ.

ಆಧ್ಯಾತ್ಮಿಕ ಜ್ಞಾನೋದಯವನ್ನು ಅರಸುತ್ತಿರುವ ಎಲ್ಲಾ ನಿಜವಾದ ಅಭಿಲಾಷಿಗಳಿಗೂ ಡಾ. ಬೆಸೆಂಟರ, "ಆಟೋಬಯಾಗ್ರಫಿ" (ಆತ್ಮಚರಿತ್ರೆ) ಒಂದು ಸ್ಫೂರ್ತಿದಾಯಕ ಮಾರ್ಗದರ್ಶಿಯಾಗಿದೆ. ಡಾ. ಸಿ.ಪಿ. ರಾಮಸ್ವಾಮಿ ಅಯ್ಯರ್ ಅವರು, ತಾವು ಆಟೋಬಯಾಗ್ರಫಿಯನ್ನು ನಿಯತಕಾಲಿಕವಾಗಿ ಓದುವ ಅಭ್ಯಾಸವನ್ನು ಇಟ್ಟುಕೊಂಡಿದ್ದರೆಂದೂ, ಅದು, "ಕನ್‌ಫೆಷನ್ಸ್ ಆಫ್ ಸೆಂಟ್ ಅಗಸ್ಟೀನ್"ನಂತೆ, ಸ್ಥೈರ್ಯ, ಶ್ರದ್ಧೆ ಮತ್ತು ನಿಯತ್ತುಗಳ ವೇದವಾಕ್ಯವಾಗಿತ್ತು ಎಂತಲೇ, ಸದಾ ಹೇಳುತ್ತಿದ್ದರು.

ತಮ್ಮ "ಆಟೋಬಯಾಗ್ರಫಿ" ಪುಸ್ತಕಕ್ಕೆ ಮುನ್ನುಡಿಯಾಗಿ, ಡಾ. ಬೆಸೆಂಟರು ತಾವಾಗಿ ಹೇಳುತ್ತಿದ್ದುದು, "ನಾವೆಲ್ಲರೂ, ಎಂದರೆ, ಈ ಅವಿಶ್ರಾಂತ ಹಾಗೂ ಅತ್ಯಾಸಕ್ತಿಯ ಜನಾಂಗದ ಸ್ತ್ರೀಪುರುಷರು, ನಮಗೆ ಮಬ್ಬಾಗಿ ಕಾಣುವಂಥ ಪ್ರಭಾವಗಳಿಂದ ಆವರಿಸಲ್ಪಟ್ಟಿದ್ದೇವೆ. ಆದರೆ, ಈಗಲೂ ಏನನ್ನೂ ಅರ್ಥಮಾಡಿಕೊಳ್ಳಲಾಗದೆ, ಹಳೆಯ ಭಾವನೆಗಳಿಂದ ಅತೃಪ್ತರಾಗಿ, ಹೊಸದರ ಬಗ್ಗೆಯೂ ಅರ್ಧ ಹೆದರಿದ್ದು, ವಿಜ್ಞಾನವು ನಮಗೆ ತಂದಿತ್ತಿರುವ ಜ್ಞಾನದ ಪ್ರಾಪಂಚಿಕ ಪರಿಣಾಮಗಳಿಂದ, ದುರಾಸೆಪಡುತ್ತಿದ್ದೇವೆ. ಆತ್ಮಕ್ಕೆ ಸಂಬಂಧಿಸಿದಂತೆ, ಆಕೆಯ ದೈವತ್ವದ ಬಗ್ಗೆ ಅಜ್ಞರಾಗಿ ಪ್ರಶ್ನಿಸುತ್ತಿದ್ದೇವೆ. ಆದರೆ ಮೂಢನಂಬಿಕೆಯ ಬಗ್ಗೆ ಭಯ; ಜಾಸ್ತಿ ಬೆಳೆದ ಜಾತಿಗಳ ಗೊಗ್ಗರು ಧ್ವನಿಯಿಂದ ಆಚೆಗೆ ಬಂದಿದ್ದರೂ ಕೂಡ, ಆಧ್ಯಾತ್ಮಿಕ ಆದರ್ಶಗಳ ಬಗ್ಗೆ ಉತ್ಕಟ ಹೆಬ್ಬಯಕೆ; ನಾವೆಲ್ಲರೂ ಒಂದೇ ರೀತಿಯ ಆತಂಕಗಳು, ಸಂಕಟಗಳು, ಹಂಬಲಗಳು, ಜ್ಞಾನದ ಬಗ್ಗೆ ಏಕರೀತಿಯ ರಾಗೋನ್ಮತ್ತ ಬಯಕೆ ಹೊಂದಿರುವುದರಿಂದ, ಒಬ್ಬರ ಕಥೆಯಿಂದ ಎಲ್ಲರಿಗೂ ಸಹಾಯವಾಗುವಂತೆ, ಆಗಬಹುದು. ಒಂದು ಆತ್ಮವು ಒಂಟಿಯಾಗಿ ಆಚೆಗೆ ಹೋಗಿ, ಒಂದು ಪಕ್ಕದಲ್ಲಿ ಬಿರುಗಾಳಿಯೊಂದಿಗೆ ಹೋರಾಡುತ್ತಿದ್ದ ದೀಪವನ್ನು ಕಂಡಿತು. ಮತ್ತೊಂದು ಭಾಗದಲ್ಲಿ ಶಾಂತಿಯನ್ನು ಕಂಡುಕೊಂಡಿತು ಎಂಬ ಕಥೆಯು, ತಮ್ಮ ಜೀವನಗಳ ಬಿರುಗಾಳಿ ಹಾಗೂ ಕತ್ತಲೆಯಲ್ಲಿರುವವರಿಗೆ, ಶಾಂತಿ ಮತ್ತು ಬೆಳಕನ್ನು ನೀಡಬಹುದು," ಎಂತಲೇ, ಆಗಿದೆ.

ದೇವತಾ ತತ್ವಜ್ಞಾನಯೋಗದ ಬಗ್ಗೆಯ ಆಕೆಯ ಗ್ರಂಥವು ಪ್ರಸಿದ್ಧವಾಗಿದೆ. ಜೀವನದ ಉತ್ತಮ ತಥ್ಯಗಳನ್ನು ಉಚ್ಚರಿಸಲು ಮತ್ತು ಜ್ಞಾನ ಹಾಗೂ ಅನುಕಂಪದ ಹಿರಿಯ ಗುರುಗಳ ಅಸ್ತಿತ್ವದ ಬಗ್ಗೆ ಹೇಳಲು, ಆಕೆಯ ಝುಣಝುಣಿಸುತ್ತಿರುವ

ಚಿನ್ನದ ಕಂಠವು ಎಲ್ಲಿ ಕೇಳಿ ಬಂದಿಲ್ಲವೋ, ಅಂಥ ಮುಖ್ಯವಲ್ಲದ ಸ್ಥಳವು ಭೂಮಿಯ ಮೇಲೆ ಎಲ್ಲಿಯೂ ಇಲ್ಲ. ದೇವತಾ ತತ್ವಜ್ಞಾನಯೋಗದ ಬಗ್ಗೆಯ ಆಕೆಯ ಕೆಲಸ, ಪವಿತ್ರವಾದದ್ದೂ ಮತ್ತು ಪ್ರಯೋಗಿಸಲ್ಪಟ್ಟಿದ್ದೂ ಆಗಿದ್ದರೂ, ಅದು ಎಣೆಯಿಲ್ಲದ್ದು. ಥಿಯಾಸಫಿಕಲ್ ಸೊಸೈಟಿಯ ಅಧ್ಯಕ್ಷರೂ, ಸ್ಥಾಪಕ ಸದಸ್ಯರೂ ಆಗಿದ್ದ, ಕರ್ನಲ್ ಎಚ್. ಎಸ್. ಆಲ್ಕಾಟ್ ಅವರ ಮರಣಾನಂತರ ಆಕೆಯನ್ನು ಅಧ್ಯಕ್ಷೆಯಾಗಿ ಚುನಾಯಿಸಿದ್ದಂತೂ, ಸೊಸೈಟಿಗೆ ವರಪ್ರದವಾಗಿತ್ತೆಂದು, ವಿಶ್ವವ್ಯಾಪಿಯಾಗಿ ಶ್ಲಾಘಿಸಲ್ಪಟ್ಟಿತು. ಆ ವೇಳೆಗಾಗಲೇ, ಆಕೆ ವಿಶ್ವಮೂರ್ತಿ ಆಗಿದ್ದರು.

ಕೌಂಟ್ ಹರ್ಮನ್ ಕೀಸರ್‌ಲಿಂಗ್ ಎಂಬ ದಾರ್ಶನಿಕರು, ಆಕೆಯ ಬಗ್ಗೆ ಬರೆಯುತ್ತಾ ''ಆನ್ನಿಬೆಸೆಂಟರು, ಇಂಗ್ಲೆಂಡಿನ ರಾಣಿಯಾಗಲು ಸಾಧ್ಯವಿರಲಿಲ್ಲವಾದ್ದರಿಂದ, ಥಿಯಾಸಫಿಕಲ್ ಸೊಸೈಟಿಗೆ ಅಧ್ಯಕ್ಷೆಯಾಗಿದ್ದಾರೆ" ಎಂದರು.

ಆಕೆಯನ್ನು ಅರಿತಿದ್ದವರು ಮತ್ತು ಅವರಲ್ಲಿ ಕೆಲವರು ಭಾರತದಲ್ಲಿನ ಆಕೆಯ ರಾಜಕೀಯದ ಕೆಲಸವನ್ನು ಎದುರಿಗೆ ಕಂಡಿಲ್ಲದಿದ್ದವರಾಗಿದ್ದರೂ, ಆಕೆಯನ್ನು ಹಿರಿಯ ಆತ್ಮವೆಂದೇ ಗುರುತಿಸಿದರು. ಆಕೆಯೊಂದಿಗೆ ಕೆಲಸಮಾಡಿದವರೆಲ್ಲರಿಗೂ ಆಕೆ ಭಕ್ತಿ ಮತ್ತು ನಿಷ್ಠಾವಂತಿಕೆಯ ಪ್ರಭಾವವನ್ನು ಬೀರುತ್ತಿದ್ದರು. ಆದರೆ ಹೀಗೆ ಭಯಮಿಶ್ರಿತ ಗೌರವವನ್ನು ಪ್ರೇರಿಸುವ ಹೃದಯದ ತಾಯಿಯ ಕೋಮಲ ಹೃದಯವಿತ್ತು ಎಂಬುದು ಆಕೆಯ ನಿಕಟ ಸಂಬಂಧವನ್ನು ಬೆಳೆಸಿಕೊಂಡವರು ಕಂಡುಕೊಂಡರು.

ಆಕೆ ಭಾರತಕ್ಕೆ ಬಂದಾಗ, ಅದನ್ನು ತಮ್ಮ ಮಾತೃಭೂಮಿಯನ್ನಾಗಿ ಹೊಂದಿಸಿಕೊಂಡರು ಮತ್ತು ತಮ್ಮಲ್ಲಿದ್ದುದನ್ನೆಲ್ಲಾ ಭಾರತದ ಏಳಿಗೆಗಾಗಿ, ಅರ್ಪಿಸಿದರು. ಆಕೆ ಭಾರತಕ್ಕೆ ಬರುವ ಕನಸು ಕಾಣುವುದಕ್ಕಿಂತ ಮೊದಲೇ, ಇಂಗ್ಲೆಂಡಿನಲ್ಲಿ ಆಕೆ ಕೊಟ್ಟಿದ್ದ, "ಇಂಡಿಯಾ ಅಂಡ್ ಆಫ್‌ಘಾನಿಸ್ತಾನ್" ಎಂಬ ಒಂದು ಪ್ರಖ್ಯಾತ ಭಾಷಣದಲ್ಲಿ, ಆಕೆ ಭಾರತದ ಧ್ಯೇಯವನ್ನು ಎತ್ತಿಹಿಡಿದಿದ್ದರು. ಆಕೆ ಭಾರತಕ್ಕಾಗಿ ಹೇಗೆ ಶ್ರಮಿಸಿದರೆಂಬುದನ್ನು ಪ್ರತಿಯೊಬ್ಬ ಭಾರತೀಯನೂ ಅರಿತಿದ್ದಾನೆ. ಮೊದಲು ಆಕೆ ಭಾರತೀಯರನ್ನು ಭಾರತದ ಹಿರಿಮೆಯನ್ನು ಜೊತೆಗೆ ಅದರ ಪ್ರಾಚೀನ ಮತ ಮತ್ತು ಅಧ್ಯಾತ್ಮದ ಹಿರಿಮೆಯನ್ನು ಉತ್ತೇಜಿಸಿದರು. ನಂತರ ಆಕೆಯ ಕೆಲಸವು ಬೆನಾರೆಸ್ ಸೆಂಟ್ರಲ್ ಕಾಲೇಜಿನಲ್ಲಿ, ಶಿಕ್ಷಕಿಯಾಗಿ ಪ್ರಾರಂಭವಾಯಿತು.

ಸಾಮಾಜಿಕ ಸುಧಾರಣೆಯ ಕ್ಷೇತ್ರದಲ್ಲಿ ಆಕೆ ಭಾರತೀಯ ಸಮುದಾಯವನ್ನು ಕಟ್ಟಿಹಾಕಿದ್ದ ಸಂಕೋಲೆಗಳಿಂದ ಬಿಡಿಸಲು ಕೆಲಸ ಮಾಡಿದರು ಮತ್ತು ಭಾರತವನ್ನು ಮುನ್ನಡೆಯ ರಸ್ತೆಯಲ್ಲಿ ಕೊಂಡೊಯ್ದರು.

ಕಡೆಗೆ ಭಾರತವನ್ನು ಸ್ವತಂತ್ರವನ್ನಾಗಿಸಿ ಅದರ ದಿವ್ಯ ಸಂದೇಶವನ್ನು ಪ್ರಪಂಚಕ್ಕೆ



ನೀಡುವಂತೆ ಮಾಡಲು ಮತ್ತು ತನ್ನನ್ನೂ ಇತರರು ಕಿವಿಗೊಟ್ಟು ಕೇಳುವಂತೆ ಮಾಡಲು ಆಕೆ ರಾಜಕೀಯಕ್ಕಿಳಿದರು. ಇದೆಲ್ಲವೂ ಇಂದಿನ ಚರಿತ್ರೆ. ಆದರೆ ಅಯ್ಯೋ! ಮನುಷ್ಯರ ಜ್ಞಾಪಕಶಕ್ತಿ ಕೆಲವು ಸಲ ಕ್ಷಣಿಕವಾಗಿರುತ್ತದೆ. ನಮ್ಮ ಜನರಿಗೆ, ಡಾ. ಬೆಸೆಂಟರ ಬಿಡುವಿಲ್ಲದ ಮತ್ತು ತಮ್ಮನ್ನು ತಾವೇ ಜ್ಞಾಪಿಸುವ ಆವಶ್ಯಕತೆ ಇದೆ.

ಆಕೆ ಭಾರತಕ್ಕಾಗಿ ದುಡಿಯಲು ತಮ್ಮ ಹೃದಯ ಮತ್ತು ಆತ್ಮವನ್ನೇಕೆ ಸವೆಸಿದರು ಎಂದು ಕೆಲವರು ಆಶ್ಚರ್ಯಪಡಬಹುದು. ಅದಕ್ಕೆ ಇಲ್ಲಿ ಆಕೆಯ ಉತ್ತರವೇ ಇದೆ ಓದಿ : "೧೯೧೩ನೆಯ ಇಸವಿಯಲ್ಲಿ ನಾನು ಒಳಗಿನ ಸರ್ಕಾರದ, ಭಾರತದ ರಾಜಪ್ರತಿನಿಧಿಯಾದ ಋಷಿ ಅಗಸ್ತ್ಯರೊಂದಿಗೆ ನೇರಪ್ರಜ್ಞೆಯ ಸಂಪರ್ಕಕ್ಕೆ ಬಂದೆ. ಆತ ಆಗ ನಾನೊಂದು ಜನರ ಸಣ್ಣ ಸಂಸ್ಥೆಯನ್ನು ನಿರ್ಮಿಸುವಂತೆ ತಿಳಿಸಿ, 'ಆ ಜನರು ಸಾರ್ವಜನಿಕರ ತಪ್ಪು ಪದ್ಧತಿಗಳಿಗೆ (ಉದಾ: ಬಾಲ್ಯವಿವಾಹ) ಹೆದರದೆ, ಧೈರ್ಯವಾಗಿ ಎದುರಿಸುವಂತಿರಬೇಕು; ಎಂದರು. ಅದನ್ನು ಮಾಡಿ ನಾನು ಅವರ ಇಚ್ಛೆಯಂತೆ "ಎಚ್ಚರಗೊಳ್ಳು, ಭಾರತ" ಎಂಬ ಶಿರೋನಾಮೆಯಲ್ಲಿ, ಶರತ್ಕಾಲದಲ್ಲಿ ಸುಮಾರು ಭಾಷಣಗಳನ್ನು ನೀಡಿದೆ."

"ಅವು, ಬೇಕಾಗಿದ್ದ ರಾಜಕೀಯದ ಸಿದ್ಧಾಂತದ ಪರಿಷ್ಕರಣೆಗೆ ಹಾದಿ ಮಾಡಿಕೊಟ್ಟವು ಮತ್ತು ಅದೇ ವರ್ಷದಲ್ಲಿ, "ದಿ ಕಾಮನ್‌ವೆಲ್ತ್" ಎಂಬ ಸಾಪ್ತಾಹಿಕ ಸುದ್ದಿಪತ್ರಿಕೆಯೊಂದನ್ನೂ, ೧೯೧೩ನೇ ಜನವರಿ ತಿಂಗಳಿನಲ್ಲಿ ಪ್ರಾರಂಭಿಸಬೇಕೆಂದು ತೀರ್ಮಾನ ಮಾಡಲಾಯಿತು. ಅದರ ನಿರ್ವಹಣೆಗೆ, ಮಾರ್ಗದರ್ಶನ ನೀಡಲು, ನನ್ನನ್ನು ಶಾಂಬಲ್ಲ ಎಂಬಲ್ಲಿಗೆ ಕರೆಸಿಕೊಂಡರು. ಅಲ್ಲಿ ದೊರೆ ಮತ್ತು ಅವನ ಮೂರು ಮಂದಿ ವಿದ್ಯಾರ್ಥಿಗಳು, ಭಾರತೀಯ ಪವಿತ್ರಗ್ರಂಥಗಳ "ನಾಲ್ವರು ಕುಮಾರರಂತೆ," ತಮ್ಮ ಆಜ್ಞೆಯನ್ನು ನಡೆಸುತ್ತಿದ್ದರು. ದೊರೆಯೇ ಹಿರಿಯವನಾಗಿದ್ದನು. ನಂತರ ಅವನು ನನಗೆ, ನಾನು ಸದಾ ಹೇಳುವಂತೆ, ಶಿಸ್ತಿನ ಆದೇಶಗಳನ್ನು ನೀಡುತ್ತಾ, "ನಿನಗೆ ತೊಂದರೆ ಹಾಗೂ ಕಷ್ಟದ ಕಾಲ ಬರುತ್ತದೆ. ಭಯಪಡಬೇಡ ಎಂದು ನಾನೇನೂ ಹೇಳಬೇಕಾಗಿಲ್ಲ. ಆದರೆ ಯಾವ ಆತಂಕವನ್ನೂ ಇಟ್ಟುಕೊಳ್ಳಬೇಡ. ಎದುರು ಪಕ್ಷದವರಿಗೆ ಕೋಪ ಬರುವಂತೆ ಮಾಡಬೇಡ, ಸ್ಥಿರವಾಗಿರು. ಆದರೆ ಉದ್ರೇಕ ಉಂಟುಮಾಡದೆ ಇರು. ರಾಜ್ಯದಲ್ಲಿ ಮುಂಬರುವ ಬದಲಾವಣೆಗಳ ತಯಾರಿಕೆಯನ್ನು ನಿಶ್ಚಲವಾಗಿ ಪ್ರಾರಂಭಿಸು. ಭಾರತದ ಸ್ಥಳವನ್ನು ಕೇಳಿ ಹಕ್ಕು ಸಾಧಿಸು. ಅಂತ್ಯದಲ್ಲಿ ಭಾರಿ ಯಶಸ್ಸು ಕಾದಿದೆ. ಅತಿರೇಕಗಳಿಂದ ಕೆಟ್ಟ ಹೆಸರು ಪಡೆಯಬೇಡ. ಬಾಹ್ಯ ಪ್ರಪಂಚದಲ್ಲಿ, ನೀನು ರಾಜಪ್ರತಿನಿಧಿಯಾಗುವೆ, ಎಂದರೆ ನನ್ನ ಕಾರ್ಯಭಾರಿ ಆಗುವೆ. ನನ್ನ ಹಸ್ತವು ನಿನ್ನ ಮೇಲಿರುತ್ತದೆ ಮತ್ತು ನನ್ನ ಶಾಂತಿಯು ನಿನ್ನೊಳಗಿರುತ್ತದೆ," ಎಂದರು.

ಆವರಿಗೆ ಸ್ಫೂರ್ತಿಕೊಟ್ಟು, ಮುಂದೆ ಹೋಗುವಂತೆ ಮಾಡಿದ ಅವರ ಜೀವನದ

ಪ್ರಧಾನ ಪ್ರೇರಣೆ, ಉತ್ತಮ ಲಕ್ಷ್ಯ, ಎರಡನ್ನೂ ಮುಂದಿಟ್ಟುಕೊಂಡು ಬೇರೆ ಯಾರಾದರೂ ಪ್ರಯತ್ನಮಾಡಿದ್ದಿದ್ದರೆ ಕೆಲಸದ ಆಯಾಸವನ್ನು ತಡೆಯಲಾರದೆ, ಕುಸಿದುಹೋಗಬಹುದಾಗಿತ್ತು.

೧೯೨೪ನೆಯ ಇಸವಿಯಲ್ಲಿ ಲಂಡನ್ನಿನ ಕ್ವೀನ್ಸ್ ಹಾಲ್‌ನಲ್ಲಿ ನಡೆದ ಸಭೆಯಲ್ಲಿ, ಆಕೆಯನ್ನು ರಾಮ್ಸೆ ಮೆಕ್‌ಡೋನಾರ್ಡ್, ಲಾರ್ಡ್ ಹಾಲ್ಡೇನ್, ಜಾರ್ಜ್ ಲ್ಯಾನ್ಸ್‌ಬರಿ, ಲಾರ್ಡ್ ಬಾವೆನ್ ಪೋವೆಲ್, ಬೆನ್‌ಟರ್ನರ್, ಫಿಲಿಪ್ ಸ್ನೋಡೆನ್, ಹೇಡೆನ್‌ಗೆಸ್ಟ್, ಮಿಸೆಸ್ ಪೆಥಿಕ್ ಲಾರೆನ್ಸ್, ವಿ.ಎಸ್.ಎಸ್. ಶಾಸ್ತ್ರಿ ಮತ್ತು ಇತರರು ಶ್ಲಾಘಿಸಿದರು. ಡಾ. ಬೆಸೆಂಟರು ಅದಕ್ಕೆ ಜವಾಬು ನೀಡುತ್ತಾ, "ಕೆಲವರು, ಇಂದಿನ ರಾತ್ರಿ, ಕೆಲಸದ ಬಗ್ಗೆ, ತ್ಯಾಗದ ಬಗ್ಗೆ ಮಾತನಾಡಿದ್ದಾರೆ. ಆದರೆ ನನಗೆ ತಿಳಿದಿರುವಂತೆ, ನನ್ನ ದೇಹ ಮುದಿಯಾಗಿದೆ. ನಿಮಗೆಲ್ಲರಿಗೂ ಅದು ತಿಳಿದಿದೆಯೋ ಇಲ್ಲವೋ ಗೊತ್ತಿಲ್ಲ.

ಹಿರಿಯ ಕಾರಣಕ್ಕಾಗಿ ಮಾಡಿದ ತ್ಯಾಗವು ನೀಡುವಷ್ಟು ಸಂತೋಷ ಮತ್ತೊಂದಿಲ್ಲ. ಅದರಲ್ಲಿ ದುಃಖವಿರುವುದಿಲ್ಲ. ಆದರೆ ನಮ್ಮ ಆತ್ಮಕ್ಕಿಂತಲೂ ಹಿರಿದಾದುದಕ್ಕೆ ಕೆಲಸ ಮಾಡಿದ ಸುಯೋಗಕ್ಕೆ ಬಂದ ಮಹದಾನಂದವು, ಸ್ವಂತ ಆತ್ಮಕ್ಕಿಂತಲೂ ಹಿರಿದು.... ಏಕೆಂದರೆ, ಅವನ ಮಹಿಮೆಯಿಂದ ನಮ್ಮ ಕಣ್ಣುಗಳು ಕುರುಡಾಗಿರುವಾಗಲೂ, ನಮ್ಮೊಳಗೆ ತನ್ನನ್ನು ಅನಾವರಣ ಮಾಡಿಕೊಂಡು ಮುಂದಕ್ಕೆ ತಳ್ಳಿ ತೋರಿಸುವವನು ದೇವರು. ಅವನೊಬ್ಬನೇ ಕೆಲಸಗಾರ. ಅವನೇ ಆಹುತಿ: ನಮ್ಮ ಹೃದಯಸ್ಥಿತನಾಗಿರುವ ಅವನೇ ಸೇವೆಗೆ ಏಕೈಕ ಸ್ಫೂರ್ತಿ. ನಾವು ಅದನ್ನೇ ಹೇಗೆ ನಿಜವೆಂದು ಭಾವಿಸುತ್ತೇವೆಯೋ, ಹಾಗೆ, ಅದೇ ನಮಗೆ ತಿಳಿದಿರುವಂತೆ ನಿಜವಾದದ್ದು. ನಮಗೆ ತಿಳಿದಿರುವ 'ಅದೇ', ನಮ್ಮ ದೇಹಗಳು, ಮೆದುಳುಗಳು ಮತ್ತು ಹೃದಯಗಳು ಮಾಡುವ ಕೆಲಸಗಳೆಲ್ಲವನ್ನೂ ನಮ್ಮ ಕೆಲಸಗಳಲ್ಲವೆಂದೂ, ಎಲ್ಲವೂ ಅವನದೇ ಮತ್ತು ಅವನಲ್ಲದೆ ಬೇರೆ ಯಾರದೂ ಅಲ್ಲವೆಂದೂ ತಿಳಿಯಪಡಿಸುತ್ತದೆ. ನಾವು ಅವನ ಶಕ್ತಿಯಲ್ಲಿ ಕೆಲಸ ಮಾಡುತ್ತೇವೆಂದೂ, ಅವನು ತನ್ನ ಶಕ್ತಿಯಲ್ಲಿ ಎಂದೂ ಅಶಕ್ತನಲ್ಲವೆಂದೂ ಎಂದೂ ನಿತ್ರಾಣನಲ್ಲವೆಂದೂ, ತನ್ನ ಯೌವನದಲ್ಲಿ ಬಲಶಾಲಿಯಾದ ಅಜರಾಮರನಾದ ಯುವಕ ಎಂದಿಗೂ ಮುದುಕನಾಗುವುದಿಲ್ಲವೆಂದೂ ಅರಿತಿದ್ದೇವೆ. ನಾನು ನಿಮ್ಮೆಲ್ಲರಿಗೂ ಹೇಳುವುದೇನೆಂದರೆ, ಆ ಶಕ್ತಿಯು, ನಿಮ್ಮೆಲ್ಲರಲ್ಲಿಯೂ ಅಡಗಿದೆ. ಆ ದಿವ್ಯಾತ್ಮನ ಶಕ್ತಿ ಮತ್ತು ದೇಹವು ಕೇವಲ ಬದುಕಿರುವ ದೇವನ ಗುಡಿಯಾಗಿದೆ ಎಂತಲೇ ಹೌದು" ಎಂದರು.

ಭಾಷಣಗಾರ್ತಿಯಾಗಿ ಮತ್ತು ಬರಹಗಾರ್ತಿಯಾಗಿ, ಆಕೆಯ ನಿಲುವು ಎಣೆಯಿಲ್ಲದ್ದಾಗಿತ್ತು. ತಮ್ಮ ಚೌಕಿಯ ಮೇಲೆ ಆಕೆ ಕಾಲಿನ ಮೇಲೆ ಕಾಲು ಹಾಕಿ ಕುಳಿತು, ಪುಸ್ತಕಗಳನ್ನು, ಲೇಖನಗಳನ್ನು ಮತ್ತು ವಿಮರ್ಶೆಗಳನ್ನೂ ಬರೆಯುತ್ತಿದ್ದರು.



ಆಕೆಯ ಪುಸ್ತಕಗಳು ಮತ್ತು ಕಿರುಹೊತ್ತಿಗೆಗಳು ಐದುನೂರಕ್ಕೂ ಹೆಚ್ಚಿಗೆ ಇದ್ದವು. ಇಲ್ಲಿದೆ ಪಟ್ಟಿ :

ಪುಸ್ತಕಗಳು ಮತ್ತು ಕಿರುಹೊತ್ತಿಗೆಗಳು : ಪ್ರಾರಂಭದ ಭೂತದೇವತಾ ತತ್ವಜ್ಞಾನ ಯೋಗದವು–೧೦೫; ಜೀವನ ವೃತ್ತಾಂತಗಳು–೬; ದೇವತಾತತ್ವಜ್ಞಾನಯೋಗ–೨೧೯, ಧರ್ಮಗಳ ಮೇಲೆ–೩೨, ಲಂಡನ್ನಿನ ರಾಣಿಯ ಸಭಾಂಗಣದ ಭಾಷಣಗಳು (ಪ್ರಕಟಿಸಿದ್ದು)–೧೭, ಭಾರತೀಯ ಸಂಸ್ಕೃತಿ, ವಿದ್ಯೆ, ಸಾಮಾಜಿಕ ಸಂಸ್ಕರಣೆ ಮುಂತಾದವು–೪೮, ಭಾರತೀಯ ರಾಜಕೀಯ–೭೯; ಒಟ್ಟು–೫೦೬; ಅವರ ಬರಹಗಳಿಂದ ಆಯ್ದ ಪುಸ್ತಕಗಳ ಸಂಖ್ಯೆ–೨೬, ನಿಜಕ್ಕೂ ಒಂದು ಅಸಾಧಾರಣ ಪಟ್ಟಿಯೇ ಹೌದು!

ಡಾ. ಬೆಸೆಂಟರಂಥ ಉತ್ತಮ ವ್ಯಕ್ತಿಗಳ ದಿನನಿತ್ಯದ ಜೀವನವೂ ಕೂಡ, ನಮಗೆಲ್ಲಾ ಉದ್ದೇಶಪೂರ್ಣ ಪಾಠವೇ ಆಗಿರುತ್ತದೆ. ಅವರ ಜೀವನಗಳ ಕೆಲವು ಅಪರೂಪದ ಘಟನೆಗಳಿಂದ ನಾವು ಅವರ ಪುಸ್ತಕಗಳು, ಭಾಷಣಗಳು ಹಾಗೂ ಇತರ ಸಾರ್ವಜನಿಕ ಹೇಳಿಕೆಗಳು ತಿಳಿಸಲಾರದಂಥವನ್ನು ಕಲಿಯಬಹುದಾಗಿದೆ. ಡಾ. ಬೆಸೆಂಟರ ವಿಷಯದಲ್ಲಂತೂ ಆಕೆ ಎಲ್ಲವನ್ನೂ ದೋಷರಹಿತವಾಗಿರಬೇಕೆಂಬ ದೃಷ್ಟಿಯಿಂದಲೇ ಮಾಡುತ್ತಿದ್ದರು ಎಂದರೆ ತಪ್ಪಿಲ್ಲ. ಕೆಲವು ಘಟನೆಗಳಂತೂ ಸಾಮಾನ್ಯವಾದವುಗಳಂತೆ ಕಂಡರೂ, ಅವರ ಸಾಮೀಪ್ಯದ ಅದೃಷ್ಟ ದೊರೆತ ಜನರ ಮೇಲೆ, ಆಳವಾದ ಪ್ರಭಾವಗಳನ್ನೇ ಬೀರಿವೆ. ಅಂಥ ಕೆಲವು ಪ್ರಕರಣಗಳ ಬಗ್ಗೆ ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಒಮ್ಮೆ, ಒಂದು ಅಧಿವೇಶನದಲ್ಲಿ ಅಧ್ಯಕ್ಷಿಣಿಯಾಗಿ ಭಾಗವಹಿಸಿಲು, ಅವರು ತಿರುನೆಲ್‌ವೇಲಿಗೆ ಹೋಗಿದ್ದರು. ಕಾರ್ಯಕ್ರಮ ಆಗಬೇಕಾಗಿದ್ದ ಸ್ಥಳದಿಂದ ಸುಮಾರು ಒಂದೂವರೆ ಕಿಲೋಮೀಟರು ದೂರದಲ್ಲಿದ್ದ ಕಟ್ಟಡದಲ್ಲಿ ಆಕೆಗೆ ವಸತಿ ಕಲ್ಪಿಸಿದ್ದರು. ಅಲ್ಲಿಗೆ ತಲುಪಿದ ತಕ್ಷಣವೇ ಆಕೆ ಸಭೆಯಾಗಲಿದ್ದ ಸ್ಥಳವು ಅಲ್ಲಿಂದ ಎಷ್ಟು ದೂರದಲ್ಲಿದೆ ಎಂತಲೂ ಮತ್ತು ಅಲ್ಲಿಗೆ ನಡೆದುಹೋಗಲು ಎಷ್ಟು ಸಮಯ ಬೇಕಾಗಬಹುದು ಎಂತಲೂ ಜನರನ್ನು ಕೇಳಿದರು. ಅವರು ನಡೆದುಹೋಗಲು ಸುಮಾರು ಇಪ್ಪತ್ತೈದು ನಿಮಿಷಗಳು ಬೇಕಾಗಬಹುದು ಎಂದರು. ಆಕೆಗಾಗಿ ಒಂದು ಕುದುರೆಗಾಡಿಯನ್ನು ಗೊತ್ತುಮಾಡಿರುವರೆಂದೂ, ಅದರಲ್ಲಿ ಆ ಸ್ಥಳವನ್ನು ಆರೇಳು ನಿಮಿಷಗಳಲ್ಲೇ ತಲುಪಬಹುದು ಎಂತಲೂ ತಿಳಿಸಿದರು.

ಸಭೆಯು ಮರುದಿನ ಬೆಳಗ್ಗೆ ಎಂಟು ಘಂಟೆಗೆ ಪ್ರಾರಂಭವಾಗಬೇಕಿತ್ತು. ಆಕೆ ರಾತ್ರಿ ಮಲಗಲು ಹೋಗುವುದಕ್ಕಿಂತ ಮುಂಚೆ ತಮ್ಮ ಗಾಡಿಯು ಬೆಳಗ್ಗೆ ಏಳು–ಮುವತ್ತೈದಕ್ಕೆ ಸಿದ್ಧವಾಗಿರಬೇಕೆಂದು ಸ್ವಯಂಸೇವಕನಿಗೆ ತಿಳಿಸಿದ್ದರು. ಮರುದಿನ ಬೆಳಗ್ಗೆ ಆಕೆ ಏಳು ಮುವತ್ತೈದಕ್ಕೆ ಸಿದ್ಧರಾಗಿ ನಿಂತು ಗಾಡಿ ತಮಗಾಗಿ ಕಾದು

ನಿಂತಿದೆಯೇ ಎಂದು ಕೇಳಿದರು. ಆದರೆ ಗಾಡಿ ಸಿದ್ಧವಾಗಿರಲಿಲ್ಲ. ಜನರು, ಸಮಯಕ್ಕೆ ಸರಿಯಾಗಿ ಎಂದರೆ ಎಂಟು ಘಂಟೆಗಿಂತ ಮುಂಚಿತವಾಗಿಯೇ ಗಾಡಿ ಆಕೆಯನ್ನು ಖಂಡಿತವಾಗಿ ತಲುಪಿಸುತ್ತದೆ ಎಂತಲೂ ಆಶ್ವಾಸನೆ ನೀಡಿದರು. ಆದರೆ ಆಕೆ ಕೇಳದೆ ಆ ಸ್ಥಳಕ್ಕೆ ನಡೆದುಕೊಂಡೇ ಹೊರಟರು. ಜನರಿಗೆ ಆಶ್ಚರ್ಯ! ಅವರು ಆಕೆಯನ್ನು ತಡೆಯಲು ಪ್ರಯತ್ನಿಸಿದರು. ಆದರೆ ಆಕೆ ತಮ್ಮ ಚಿತ್ತಾಕರ್ಷಕ ನಗೆಯನ್ನು ಬೀರುತ್ತಾ "ಗಾಡಿ, ಏಳು–ಮುವತ್ತೈದಕ್ಕೆ ಸಿದ್ಧವಾಗಿದ್ದಿದ್ದರೆ ನಾನು ಎಂಟಕ್ಕೆ ಹತ್ತು ನಿಮಿಷ ಮುಂಚಿತವಾಗಿ ಬೇಕಾದರೂ ಹೊರಡಬಹುದಾಗಿತ್ತು. ಏಕೆಂದರೆ ಆಗ ನಾನು ಆ ಸ್ಥಳವನ್ನು ಸರಿಯಾದ ಹೊತ್ತಿಗೆ ತಲುಪುತ್ತೇನೆಂಬ ನಂಬಿಕೆ ಇರುತ್ತಿತ್ತು. ಆದರೆ ನಾನು ಹೇಳಿದ ಹೊತ್ತಿಗೆ ಗಾಡಿ ಕಾದು ನಿಂತು, ಅದು ಸಮಯಕ್ಕೆ ಸರಿಯಾಗಿ ಬರದಿದ್ದರೆ, ಮೀಟಿಂಗ್‌ಗೆ ಹೋಗುವುದು ತಡವಾಗುತ್ತದೆ. ಅದಂತೂ ನನ್ನ ದೃಷ್ಟಿಯಲ್ಲಿ ಕ್ಷಮಿಸಲಾಗದಂಥ ಅಪರಾಧ. ಇತರರನ್ನು ಕಾಯಿಸಿ, ಅವರ ಸಮಯವನ್ನು ಹಾಳುಮಾಡುವ ಹಕ್ಕೂ ನನಗಿಲ್ಲ" ಎಂದರು.

ಅವರ ರಾಜಕೀಯದ ಚಟುವಟಿಕೆಗಳಿದ್ದ ದಿನಗಳಲ್ಲಿ, ಸಾಕಷ್ಟು ಮಂದಿ ಭಾರತೀಯ ಯುವಕರು ತಮ್ಮ ಸೇವೆಗಳನ್ನು ನೀಡಲು ಮುಂದೆ ಬಂದರು. ಆಕೆ ಅವುಗಳನ್ನು ಒಪ್ಪಿಕೊಂಡರು. ಒಬ್ಬ ಯುವಕ ಕಾಲೇಜಿನ ವಿದ್ಯಾರ್ಥಿಯು ಉತ್ತಮ ಅಂತಃಪ್ರೇರಣೆಗಳಿಂದ ಮತ್ತು ಆದರ್ಶಗಳಿಂದ ಕೂಡಿದ್ದು, ಅವನೂ ಆ ಸೇವಾಕರ್ತರ ಗುಂಪಿಗೆ ಸೇರಿಕೊಳ್ಳಲು ಬಯಸಿದನು. ಆದರೆ ಅವನ ತಂದೆ–ತಾಯಿಗಳಿಗೆ ಅವನು ದೇಶದ ಸೇವೆಗಾಗಿ ವಿದ್ಯಾಭ್ಯಾಸವನ್ನು ಬಿಟ್ಟು ಕೂರುವುದು ಇಷ್ಟವಾಗಲಿಲ್ಲ. ಯುವಕನು ಮಾನಸಿಕವಾಗಿ ಬಹಳ ನರಳಿದನು. ಅವನು ಡಾ. ಬೆಸೆಂಟರಿಗೆ ಪತ್ರವನ್ನು ಬರೆದು ಅದರಲ್ಲಿ ತನ್ನ ಭಾವನೆಗಳನ್ನೂ ಮತ್ತು ತನ್ನ ತಂದೆ–ತಾಯಿಯರ ದೃಷ್ಟಿಕೋನಗಳನ್ನೂ ತಿಳಿಸಿದ್ದನಲ್ಲದೆ ಅಂಥ ಪರಿಸ್ಥಿತಿಯಲ್ಲಿ ತಾನೇನು ಮಾಡಬೇಕೆಂಬುದರ ಬಗ್ಗೆ ಬುದ್ಧಿವಾದವನ್ನು ಕೋರಿದ್ದನು. ಆಕೆ ತಂದೆ–ತಾಯಿಯರಿಗೆ ವಿಧೇಯನಾಗುವುದೇ ಅವನ ಕರ್ತವ್ಯವೆಂದು ಒಡನೆಯೇ ಉತ್ತರಿಸಿದರು. ಈ ರೀತಿಯ ಉತ್ತರದಿಂದ ಆಕೆಯ ಗೆಳೆಯನು ಬೆರಗಾದನು. ಏಕೆಂದರೆ ಡಾ. ಬೆಸೆಂಟರಿಗೆ ಆ ಹುಡುಗ ಪರಿಚಯದವನಾಗಿದ್ದು, ಅವನ ಆಕಾಂಕ್ಷೆಗಳೂ ಪ್ರಾಮಾಣಿಕವಾಗಿದ್ದವು. ಜೊತೆಗೆ ಅವರಿಗೆ ತಮ್ಮ ಕೆಲಸಕ್ಕೆ ಅವನಂಥ ಉತ್ಸಾಹಶಾಲಿ ಯುವಕರು ನಿಜವಾಗಿಯೂ ಬೇಕಾಗಿದ್ದರು. ಅದನ್ನು ಆ ಗೆಳೆಯ ಡಾ. ಬೆಸೆಂಟರಿಗೆ ತಿಳಿಸಿದಾಗ, ಅವರು "ನನಗೆ ಆ ಹುಡುಗ ಪರಿಚಯದವನು. ಅವನ ಆದರ್ಶಗಳ ಕಲ್ಪನೆಯನ್ನೂ ಮತ್ತು ಅತ್ಯಾಸಕ್ತಿಯ ಚಟುವಟಿಕೆಯನ್ನೂ ನಾನು ಮಹತ್ವವಾದವುಗಳೆಂದೇ ತಿಳಿದಿದ್ದೇನೆ. ಆದರೆ ಅಂಥ ಮಹತ್ವಪೂರ್ಣ ಪ್ರಾಮುಖ್ಯತೆಯ ವಿಷಯಗಳಲ್ಲಿ ಜನರು ತಮ್ಮ ಬಗ್ಗೆ ತಾವೇ ಯೋಚಿಸಿ, ನಿರ್ಧರಿಸಿಕೊಳ್ಳಬೇಕು. ಹೊರಗಿನಿಂದ ಮಾರ್ಗದರ್ಶನ



ಪಡೆಯಬಾರದು. ಅವನು ತನ್ನ ವಿದ್ಯಾಭ್ಯಾಸವನ್ನೂ ತ್ಯಜಿಸಿ ನನ್ನಲ್ಲಿಗೆ ಬಂದಿದ್ದಿದ್ದರೆ ನಾನು ಕೊಂಚವೂ ಹಿಂಜರಿಕೆ ಇಲ್ಲದೆ ಸಂತೋಷವಾಗಿ ಅವನನ್ನು ತೆಗೆದುಕೊಳ್ಳುತ್ತಿದ್ದೆ. ಏಕೆಂದರೆ ಆಗ ಅವನು ತಾನಾಗಿ ತನ್ನ ನಿರ್ಧಾರವನ್ನು ತೆಗೆದುಕೊಂಡಿದ್ದ ಮತ್ತು ಅವನನ್ನು ಸೇರಿಸಿಕೊಳ್ಳಬಹುದಾದಷ್ಟು ಸ್ವತಂತ್ರವಾಗಿದ್ದ ಎನ್ನುವ ಕಾರಣವಿರುತ್ತಿತ್ತು. ಇಲ್ಲಿ ಅವನು ತಾನೇ ನಿರ್ಧಾರ ಮಾಡಿರಲಿಲ್ಲವಾದ್ದರಿಂದ ರಾಷ್ಟ್ರದ ಕೂಗು ಅವನಿಗಿನ್ನೂ ಪ್ರಧಾನವೆನಿಸಿರಲಿಲ್ಲ. ಅಂಥ ಸ್ಥಿತಿಯಲ್ಲಿ ಅವನಿಗೆ ಸೂಚಿಸಬೇಕಾಗಿದ್ದ ಸಾಧಾರಣ ಮಾರ್ಗವು, "ನಿನ್ನ ದಿನನಿತ್ಯದ ಕರ್ತವ್ಯಗಳನ್ನು ಮುಗಿಸು", ಎಂಬುದೇ ಆಗಿತ್ತು. ಈಗಿನ ಸ್ಥಿತಿಯಲ್ಲಿ, 'ಅವನು ತನ್ನ ತಂದೆತಾಯಿಯರಿಗೆ ವಿಧೇಯನಾಗಿರಬೇಕು' ಎಂಬ ಅರ್ಥವನ್ನು ಹೊಂದಿದೆ", ಎಂದರು.

ಈಗ ನಾನು ಆಕೆಯ ಸೂಕ್ಷ್ಮ "ಮಾತೃಹೃದಯ"ದ ಬಗ್ಗೆ ಒಂದೆರಡು ಪ್ರಸಂಗಗಳನ್ನು ತಿಳಿಸಿ, ಅವು ಅಷ್ಟೊಂದು ಜನರನ್ನು ಹೇಗೆ ಪ್ರಿಯರಾಗಿಸಿತು ಎಂದು ತಿಳಿಸುತ್ತೇನೆ. ನ್ಯೂ ಇಂಡಿಯಾದ ಮ್ಯಾನೇಜರರಾಗಿದ್ದ ಶ್ರೀ ಡಿ. ಕೆ. ತೆಲಾಂಗರು, ತಮ್ಮ ಕೈಕೆಳಗಿದ್ದವನೊಬ್ಬನನ್ನು, ಕರ್ತವ್ಯದ ಬಗ್ಗೆ ಅವನಿಗಿದ್ದ ದೀರ್ಘವಾದ ಹಾಗೂ ತಿದ್ದಲಾಗದಂಥ ಅಸಡ್ಡೆತನಕ್ಕಾಗಿ ಕೆಲಸದಿಂದ ತೆಗೆದುಹಾಕಿದರು. ಡಾ. ಬೆಸೆಂಟರು ತಮ್ಮ ಕಾರನ್ನು ಏರುವುದರಲ್ಲಿದ್ದಾಗ ಅವನನ್ನು ಕಂಡರು. ಅವನ ತೀವ್ರ ಸಂಕಟದ ಮುಖವು ಆಕೆಯ ಗಮನವನ್ನು ಸೆಳೆಯಿತು. ವಿಚಾರಿಸಿದಾಗ ಅವರಿಗೆ ಏನು ನಡೆದಿತ್ತೆಂಬುದರ ಬಗ್ಗೆ ತಿಳಿಯಿತು. ಜೊತೆಗೆ ಆ ಮನುಷ್ಯನ ಕುಟುಂಬ ಬಹಳ ದೊಡ್ಡದಾಗಿದ್ದು, ಅವನನ್ನೇ ಅವಲಂಬಿಸಿದ್ದ ವಿಷಯವೂ ತಿಳಿಯಿತು. ಅವರು ಶ್ರೀ ತೆಲಾಂಗ್‌ರನ್ನು ಪಕ್ಕಕ್ಕೆ ಕರೆದು, "ಅವನಿಂದ ಎಷ್ಟು ಕೆಲಸ ಸಾಧ್ಯವೋ ಅಷ್ಟನ್ನೂ ಮಾಡಿಸಿಕೊಳ್ಳಿ, ಆದರೆ ಅವನ ಕುಟುಂಬ ನರಳದಂತೆ ಗಮನವಿಡಿ", ಎಂದರು.

ತ್ರಿಚೂರಿನ ಶ್ರೀ ಕರುಣಾಕರ ಮೆನನ್ ಎಂಬ ಹೆಸರಾಂತ ವಕೀಲರು ಪ್ರಚಂಡ "ಥಿಯಾಸಫಿಸ್ಟ್" ಆಗಿದ್ದರು. ಅವರು ಒಂದು ದೊಡ್ಡ ದೈವತಾ ಜ್ಞಾನ ತತ್ವಯೋಗದ ಶಿಬಿರವನ್ನು ಸಜ್ಜುಗೊಳಿಸುತ್ತಿದ್ದರು. ಅವರಿಗೆ ಅದರ ಅಧ್ಯಕ್ಷತೆಯನ್ನು ಡಾ. ಬೆಸೆಂಟರೇ ನಿರ್ವಹಿಸಬೇಕೆಂದು ಆಸೆ ಇತ್ತು. ಆಗ ಡಾ. ಬೆಸೆಂಟರು ತಮ್ಮ ರಾಜಕೀಯದ ಕೆಲಸದಲ್ಲಿ ತೊಡಗಿದ್ದರು. ಆದ್ದರಿಂದ ಶ್ರೀ ಮೆನನ್ನರ ಕೋರಿಕೆಗಳನ್ನು ಬಹಳ ಬಾರಿ ನಿರಾಕರಿಸಬೇಕಾಗಿ ಬಂತು. ಆದರೆ ಶ್ರೀ ಮೆನನ್ನರು ಆಕೆಯೇ ಅಧ್ಯಕ್ಷತೆ ವಹಿಸಬೇಕು ಎಂಬುದರ ಬಗ್ಗೆ ನಿರ್ಧಾರ ಮಾಡಿಬಿಟ್ಟಿದ್ದರು. ಒಂದು ದಿನ ಬೆಳಗ್ಗೆ, ಡಾ. ಬೆಸೆಂಟರಿಗೆ ಒಂದು ತಂತಿ ಬಂತು. "ನಿಮ್ಮನ್ನೇ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಶಿಬಿರವನ್ನು ಸಿದ್ಧಗೊಳಿಸಿದ್ದಾಗಿದೆ. "ಗೋವಿಂದಾರ್ಪಣಮಸ್ತು" ಎಂದಿತ್ತು ಆ ತಂತಿಯ ಸುದ್ದಿ," (ಇಡೀ ಸಿದ್ಧತೆಯು ಭಗವಾನ್ ಶ್ರೀಕೃಷ್ಣನಿಗೇ ಅರ್ಪಿತವಾಗಿದೆ ಎಂದಿತ್ತು) ಆ ತಾರನ್ನು ಓದಿ ಡಾ. ಬೆಸೆಂಟರು ಸುಮ್ಮನೆ ನಕ್ಕು,

"ಈ ಮನುಷ್ಯನನ್ನು ಕಟ್ಟಿಕೊಂಡು ನಾನೇನು ಮಾಡಲಿ? ಸರಿ ಹೋಗಿ ಅಧ್ಯಕ್ಷತೆ ವಹಿಸುತ್ತೇನೆ" ಎಂದರು. ನಂತರ ಆಕೆ ಹೋಗಿ ಅತ್ಯಂತ ಫಲದಾಯಕ ಶಿಬಿರಗಳಲ್ಲಿ ಒಂದಾಗಿದ್ದ ಆ ಶಿಬಿರದ ಅಧ್ಯಕ್ಷತೆ ವಹಿಸಿದರು.

ಅಸಾಮಾನ್ಯ ಮಹಿಳೆಯಾಗಿದ್ದ ಆಕೆ ಅನೇಕ ರೀತಿಗಳಲ್ಲಿ ಅಸಾಮಾನ್ಯರಾಗಿದ್ದರು. ಅವರದು ಎಲ್ಲಾ ಕಡೆಗಳ ವ್ಯಕ್ತಿತ್ವವಾಗಿತ್ತು. ಒಂದೇ ಪದದಲ್ಲಿ ಹೇಳಬೇಕೆಂದರೆ ಆಕೆ ಅದ್ವಿತೀಯರಾಗಿದ್ದರು. ಡಾ. ಬೆಸೆಂಟರಂಥವರು ಮತ್ತೊಬ್ಬರಿರುವುದು ಸಾಧ್ಯವಿಲ್ಲ. ಮ್ಯಾಡಂ ಬ್ಲವ್ಯಾಟ್‌ಸ್ಕಿ ಅವರು, ಅವರ ಬಗ್ಗೆ ಹೇಳುತ್ತಾ, "ಏಕ ಮತ್ತು ಐಕ್ಯೈಕ" ಎಂದಿದ್ದು ಆಶ್ಚರ್ಯವೇ ಅಲ್ಲ!

ಈ ಚಿತ್ರಣವನ್ನು ೧೮೭೮ರಲ್ಲಿ ಇಂಗ್ಲೀಷ್ ಕವಿ ಜೆರಾಲ್ಡ್‌ಮಾಸ್ಸೆ ಎಂಬಾತ ಆಗ ನಿರೀಶ್ವರವಾದಿಯಾಗಿದ್ದ ಆಕೆಯಲ್ಲಿ, ಡಾ. ಬೆಸೆಂಟರು ನಿಜವಾಗಿ ಆಗಿದ್ದ ಹಿರಿಯ ಆತ್ಮವನ್ನು ಕಂಡುಕೊಂಡು, ಬರೆದಿದ್ದ ಕವಿತೆಯಿಂದ ಕೆಲವು ಸಾಲುಗಳನ್ನು ಬರೆದು ಈ ಜೀವನ ಚಿತ್ರಣವನ್ನು ಮುಗಿಸುತ್ತೇನೆ :

ಇತರರಿಗಾಗಿ ಧಾನ್ಯವನ್ನು ನೆಟ್ಟೆ ನೀನು;
ನಿನ್ನ ಕಣ್ಣೀರು ಕಟಾವಿಗೆ ಸಿದ್ಧಮಾಡುವ ಮಳೆ
ಅವರದು ಮುಗುಳ್ನಗುವ ಕೊಯ್ಲಿನ ಲಾಭ; (೧)
ಏಳು ಮಂದಿಗಾಗುವಷ್ಟು ಆತ್ಮವಿದೆ ನಿನ್ನಲ್ಲಿ
ಕಿಣ್ವವಿದೆ ಭೂಮಿಯೇ ಹುದುಗುವಷ್ಟು
ಪ್ರೇಮವಿದೆ ಸ್ವರ್ಗವನ್ನೇ ಸೃಷ್ಟಿಸುವಷ್ಟು (೨)
ಭಗವಂತನ ಆತ್ಮೀಯ ನಿಷ್ಠಾವಂತರು ಕೆಲವರೇ,
ಅದನ್ನರಿಯದ ನೀನು, ಆನ್ನಿಬೆಸೆಂಟ್,
ಕೆಚ್ಚೆದೆಯ ಯಥಾರ್ಥ!

* * * *



# ೬. ಶ್ರೀ ಅರವಿಂದರು

ಸಂಪೂರ್ಣ ಮೌನದಲ್ಲಿ ನಿದ್ರಿಸುತ್ತದೆ ಅಪರಿಮಿತ ಶಕ್ತಿ.
ಜಾಗೃತಿಯಲ್ಲಿದ್ದು ಎಚ್ಚರಿಸುತ್ತದೆ, ಭಾವಸಮಾಧಿ ಸೀಮಿತ ಆತ್ಮವನ್ನು,
ಮತ್ತು ರಶ್ಮಿಯಲ್ಲಿ, ಪಿತೃ ಸೂರ್ಯನನ್ನು ಹೊರಗೆಡಹುತ್ತದೆ.
ಪ್ರಪಂಚವನ್ನೇ ಚೈತನ್ಯ ಶಕ್ತಿಯ ಧಮನಿಯಾಗಿಸುತ್ತದೆ.
ಭಗವಂತನ ಯಥೋಚಿತ ರೂಪವನ್ನು ಜೇಡಿಮಣ್ಣಿನಲ್ಲಿ ರೂಪಿಸುತ್ತದೆ
ಭಗವಂತನ ಹಂಬಲ ವಾಗಿತ್ತು ಇಲ್ಲಿ ಸ್ವಂತದ ಸಾಫಲ್ಯ –

(ಇಂಗ್ಲಿಷ್ ಮೂಲ–ಸಾವಿತ್ರಿ)

ಶ್ರೀ ಅರವಿಂದರು ಒಮ್ಮೆ ಶಿಷ್ಯನೊಬ್ಬನಿಗೆ, "ನನ್ನ ಜೀವನದ ಬಗ್ಗೆ ಯಾರಿಗೂ ಬರೆಯಲು ಸಾಧ್ಯವಿಲ್ಲ. ಏಕೆಂದರೆ ಅದು ಮನುಷ್ಯರಿಗೆ ಕಾಣುವಂತೆ ಮೇಲ್ನೋಟಕ್ಕೆ ಕಾಣುವಂಥದ್ದಲ್ಲ" ಎಂದು ಬರೆದರು. ನಿಜವಾಗಿಯೂ ಎಮರ್ಸನ್ ಹೇಳಿರುವುದು "ಶೇಕ್ಸ್‌ಪಿಯರ್ ಒಬ್ಬರೇ ಶೇಕ್ಸ್‌ಪಿಯರರ ಜೀವನ ಚರಿತ್ರೆ ಬರೆದವರು ಮತ್ತು ನಮ್ಮಲ್ಲಿರುವ ಶೇಕ್ಸ್‌ಪಿಯರ್‌ಗೆ ಅವರು ಏನೂ ಹೇಳಲು ಸಾಧ್ಯವಿಲ್ಲ" ಎಂದರು. ಕವಿಗಳು ಮತ್ತು ಕಲಾವಿದರ ಬಗ್ಗೆ ಅದು ನಿಜವಾಗಿದ್ದರೆ ಯೋಗಿಗಳು ಹಾಗೂ ಮುಮುಕ್ಷುಗಳ ಬಗ್ಗೆ, ಇದು ಇನ್ನೆಂಥಾ ಅಪಾರ ಸತ್ಯವಿರಬಹುದು? ಅವರು ಅನ್ವೇಷಿಸುತ್ತಾರೆ ಮತ್ತು ಹೊರಗಿನವುಗಳನ್ನು ಜಯಿಸುವುದಕ್ಕಿಂತ ಮೊದಲೇ ಆಂತರಿಕ ಕ್ಷೇತ್ರಗಳನ್ನು ಸಂಶೋಧಿಸಿ ನಿಗ್ರಹಿಸುತ್ತಾರೆ. ಅವರ ಬಾಹ್ಯದ ಕಾರ್ಯಸಾಧನೆಗಳು ಕೇವಲ ಅವರ ಆಂತರಿಕ ಶ್ರೇಷ್ಠತೆಯ ಪರ್ಯಾಲೋಚನೆಗಳಷ್ಟೆ.

ಆದರೂ ಯೋಗಿಗಳ ಮತ್ತು ಮುಮುಕ್ಷುಗಳ ಸ್ಥಿರ ಆತ್ಮಚರಿತ್ರೆಗಳು ಬರೆಯಲ್ಪಡುತ್ತವೆ. ಅವೆಲ್ಲವೂ ಮಹಾಪುರುಷರ ಹಿರಿಮೆಗೆ ಮತ್ತು ಅವರ ಪ್ರಶಂಸೆಯ ಧಾರ್ಮಿಕ ವಿಧಿಗೆ ನಮ್ಮ ಪ್ರೀತಿಯ ಕಾಣಿಕೆಯಾಗಿದ್ದು, ಅವು ನಮ್ಮನ್ನು ಗೌರವಾನ್ವಿತರನ್ನಾಗಿಸುತ್ತದೆ. ಸೂರ್ಯನನ್ನು ಸೂರ್ಯನ ಬೆಳಕಿನ ವಿನಾ ನೋಡಲಾಗುವುದಿಲ್ಲ ಮತ್ತು ನಮ್ಮ ಕಣ್ಣುಗಳೇ ಇಂದು ಮಂಜಾಗಿದ್ದರೂ, ನಾವು ಸದಾಕಾಲಕ್ಕೂ ಆ ಅಜ್ಞಾನದ ಪೊರೆಯು ಸಂಪೂರ್ಣವಾಗಿ ಅಚ್ಚುಕಟ್ಟಾಗಲೆಂದು

ನಿರೀಕ್ಷಿಸಬಹುದು ಮತ್ತು ಸೂರ್ಯಪ್ರಭೆಯು ತನ್ನ ಸ್ಪಷ್ಟವಾದ ಯಥಾವತ್ತಾದ ರೂಪದಲ್ಲಿ ಕಾಣಿಸುವಂತಾಗಲು ಸದಾಕಾಲಕ್ಕೂ ಆಶಿಸಬಹುದು.

ಶ್ರೀ ಅರವಿಂದರ ಜೀವನದಲ್ಲಿ ಮೂರು ವಿಷಯಗಳು ಎದ್ದು ಕಾಣುತ್ತವೆ: ಅವರ ಅತಿಯಾದ ದೈವಪ್ರೇಮ, ಭಗವಂತನನ್ನರಿಯಬೇಕೆಂಬ ಗಾಢಾನುರಕ್ತ, ಉತ್ಸಾಹ ಮತ್ತು ಭೂಮಿಯ ಮೇಲೆ ಭಗವಂತನ ಸ್ಪಷ್ಟೀಕರಣ. ಸ್ವಂತದ ಸ್ವಾತಂತ್ರ್ಯ ಮತ್ತು ಆತ್ಮಸಮಾಧಾನಕ್ಕೆಂದು ಭಗವಂತನೊಂದಿಗಿನ ಒಕ್ಕೂಟ, ಎಂದಿಗೂ ಅವರ ಗುರಿಯಾಗಿರಲಿಲ್ಲ. ಅವರು ಭಗವಂತನೊಂದಿಗೆ ಐಕ್ಯರಾಗಬೇಕೆಂದು ಹಾತೊರೆಯುತ್ತಿದ್ದುದು, ದಿವ್ಯಪ್ರಜ್ಞೆಯನ್ನು ಜಡದ್ರವ್ಯದೊಳಗೆ ತಂದು ಮಾನವ ದೇಹದೊಂದಿಗೆ, ಈ ಆಧ್ಯಾತ್ಮಿಕವಲ್ಲದ ಪ್ರಪಂಚದಲ್ಲಿ ಇರುವಂತೆ ಮಾಡಿ, ಮಾನವಕೋಟಿಗೆ ಸಹಾಯಮಾಡುವುದಾಗಿತ್ತು. ಅವರು ಭಗವಂತನನ್ನು ಅರಿತರು, ಅವನೊಂದಿಗೆ ಐಕ್ಯರಾದರು, ಜೀವಿಸಿದರು, ಓಡಾಡಿದರು ಮತ್ತು ತಮ್ಮ ಅಸ್ತಿತ್ವವನ್ನು ಭಗವಂತನಲ್ಲಿರಿಸಿಕೊಂಡಿದ್ದರು. ವೇದಕಾಲದ ಋಷಿಗಳ ಅಖಂಡ ದೃಷ್ಟಿಸಾಮರ್ಥ್ಯವನ್ನು ಮರಳಿ ಪಡೆದರು. ಜೊತೆಗೆ ಪ್ರಪಂಚದಿಂದ ವಿರಕ್ತರು ಪಾರಾಗುವುದನ್ನು ಮತ್ತು ಅದರ ವಿಕಾಸಯುಕ್ತ ಪ್ರಗತಿಯನ್ನು ತಿರಸ್ಕರಿಸುತ್ತಾ, ಅವರು ತಮ್ಮ ಅನುಭವ ಹಾಗೂ ಉದಾಹರಣೆಗಳಿಂದ, ಒಂದು ಪೂರ್ಣವಾದ ಮತ್ತು ಸಕ್ರಿಯ ಕಾರ್ಯಶೀಲ ಐಕ್ಯತೆಯು, ಜೀವನದ ಚಟುವಟಿಕೆಗಳ ಮಹಾಪೂರದ ನಡುವೆಯೂ, ದಿವ್ಯತ್ವದೊಂದಿಗಿನ ಸಕ್ರಿಯ ಒಕ್ಕೂಟದೊಂದಿಗೆ ನಿಜಕ್ಕೂ ಸಾಧ್ಯ ಎಂದು ತೋರಿಸಿದರು. ಜೊತೆಗೆ, ಒಂಟಿಯಾಗಿಯೋ ಅಥವಾ ಸಾಮೂಹಿಕವಾಗಿಯೋ ಮಾನವ ಜೀವನದಲ್ಲಿ ಭಗವಂತನು ಸ್ವರೂಪವನ್ನು ಪಡೆಯುವುದೇ ಆತ್ಮವು ಭೌತವಸ್ತುವಾಗಿ ಇಳಿಯುವುದರ ಉದ್ದೇಶ ಮತ್ತು ಪ್ರಕೃತಿಯ ವಿಕಸನದ ಕ್ಲೇಶದ ವೈಭವಯುತ ಅಂತ್ಯ ಎಂದರು. ಮಾನವನ ಪ್ರಕೃತಿಯನ್ನು ದಿವ್ಯಪ್ರಕೃತಿಯನ್ನಾಗಿ ಬದಲಾಯಿಸಲು, ಅಪರ ಪ್ರಕೃತಿಯನ್ನು ಪರಾಪ್ರಕೃತಿಯಾಗಿಸಲು, ಮಾನವನ ಜೀವನವನ್ನು ದಿವ್ಯಜೀವನವನ್ನಾಗಿಸಲು ಈ ಐಹಿಕ ಪ್ರಪಂಚದಲ್ಲಿ ಇಹೈವ, ಅವೇ ಉಪನಿಷತ್ತಗಳು ಹೇಳುವಂತೆ, ಸಾಧ್ಯವೇ ಇಲ್ಲ. ಅದೇ ವೈದಿಕ ಋಷಿಗಳ ಆದರ್ಶವಾಗಿತ್ತು. ತನ್ನ ಪೂರ್ಣ ಅರಿವಿಗೆ, ಮಾನವ ಜಾತಿಯು ಪೂರ್ತಿಯಾಗಿ ಪಕ್ವವಾಗಿರಲಿಲ್ಲ. "ಮನುಷ್ಯನಾಗಿರು, ದಿವ್ಯಕುಲವನ್ನು ಸೃಷ್ಟಿಸು"* ಎಂದು ಋಗ್ವೇದದಲ್ಲಿದೆ. ನಾವು ನಿಜವಾಗಿಯೂ ಶ್ರೀ ಅರವಿಂದರ ಬಗ್ಗೆ ಉಪನಿಷತ್ತಿನ ವಚನಗಳಲ್ಲಿ ಹೇಳಬೇಕೆಂದರೆ, "ಅವರು ಸ್ವರ್ಗದ ಬೆಂಕಿಯಿಂದ ಪ್ರಭೆಯನ್ನು ಸೆಳೆದು, ಭೂಮಿಯಲ್ಲಿ ತುಂಬಿಸಿದರು," ಎನ್ನಬಹುದು.

* ಋಗ್ವೇದ.



ಶ್ರೀ ಅರವಿಂದರ ಜೀವನದ ಎರಡನೆಯ ಅಧಿಕೃತ ಭಾವೋದ್ವೇಗವು, ಭಾರತದ ಬಗ್ಗೆಯ ಅವರ ಒಲುಮೆ ಆಗಿತ್ತು. ಭಾರತವನ್ನು ಅವರು ತಾಯಿ, ದಿವ್ಯಮಾತೆ, ಆಧ್ಯಾತ್ಮಿಕ ತೇಜಸ್ಸಿನ ಅಜರಾಮರ ರಕ್ಷಕಿ, ಸ್ಫೂರ್ತಿಯ ಮಾರ್ಗದಲ್ಲಿ ವಿಶ್ವಕ್ಕೆ ನಾಯಕಿ, ಎಂದೆಲ್ಲ ಪರಿಗಣಿಸುತ್ತಿದ್ದರು. ಬಂಗಾಳದಲ್ಲಿ, ವಿಭಜನೆಯ ನಂತರದ ದಿನಗಳಲ್ಲಿ ಆಧ್ಯಾತ್ಮಿಕ ರಾಷ್ಟ್ರೀಯತೆಯ ಬದುಕಿನಲ್ಲಿ ಸಮಕಾಲೀನವಾದ ವೇದವಾಕ್ಯಗಳನ್ನು ಬೋಧಿಸಿದವರಲ್ಲಿ, ಅವರೇ ಮೊದಲಿಗರಾಗಿದ್ದರು. "ಭಾರತವು, ವಿದೇಶೀಯ ದಾಸ್ಯದ ಬಂಧನವನ್ನು ಝಾಡಿಸಿ ತೊಲಗಿಸಬೇಕು. ಆಗಲೇ ಅವಳು ತನ್ನ ಪೂರ್ಣ ಆಧ್ಯಾತ್ಮಿಕ ಅಂತಸ್ತಿಗೆ ಏರುವಂತಾಗಲು, ತನ್ನ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಮೂರ್ತ ಅಮೂರ್ತ ಬಳುವಳಿಯನ್ನು ಮರಳಿ ಪಡೆಯುವಂತಾಗಲು ಮತ್ತು ಹಿಂದೆ ಆಕೆ ಎಷ್ಟೋ ಸಲ ಮಾಡಿದ್ದಂತೆ, ಪ್ರಾಚೀನತೆಯಿಂದ ಸದ್ಯದ ಕಾಲಾವಧಿಯವರೆಗಿನ ಇತಿಹಾಸಪೂರ್ವ ಮತ್ತು ಚಾರಿತ್ರಿಕ ಮಾನವತೆಯ ಬಗ್ಗೆಯ ಸ್ಫೂರ್ತಿಯ ಪ್ರಕಾಶವನ್ನು ಇಂದಿನ ಕತ್ತಲು ಕವಿದ ಪ್ರಪಂಚದ ಮೇಲೆ ಬೀರಲು ಸಾಧ್ಯ" ಎಂದರು. ಮುಂಬೈನ "ಇಂದು ಪ್ರಕಾಶ್‌ಗೆ" ಮತ್ತು ನಂತರ ಬಂಗಾಳದ "ವಂದೇಮಾತರಂ ಮತ್ತು ಕರ್ಮಯೋಗಿನ್"ಗೆ ಅವರು ಬರೆದ ಬರಹಗಳು ಪ್ರಭಾವಪೂರ್ಣವಾಗಿದ್ದು, ಇಡೀ ದೇಶವನ್ನು ಸ್ವಾತಂತ್ರ್ಯಕ್ಕಾಗಿ ಸ್ವರಾಜ್ಯಕ್ಕಾಗಿ, ತೀಕ್ಷ್ಣವಾಗಿ ಹಾತೊರೆಯುವಂತೆ, ಅವಸರಿಸಿದವರೂ ಅವರೇ.

ಇಂದು ಇಡೀ ವಿಶ್ವಕ್ಕೆ ಅವಳ ಮಾರ್ಗದರ್ಶನದ ಆವಶ್ಯಕತೆ ಇರುವುದರಿಂದ ಅವಳು ಎಚ್ಚೆತ್ತುಕೊಳ್ಳಲೇಬೇಕು. ಸದ್ಯದ ಸಂಸ್ಕೃತಿಗೆ ಸಂಬಂಧಿಸಿದ ಸಂದಿಗ್ಧತೆಯಲ್ಲಿ ಅದಕ್ಕೇನು ತೀವ್ರವಾಗಿ ಬೇಕಾಗಿದೆಯೋ ಅದನ್ನು ಮಾನವಕೋಟಿಗೆ ನೀಡಲು ಏಳಲೇಬೇಕು, ಏಕೆಂದರೆ ಅದು ಇರುವುದೂ ಅವಳಲ್ಲಿಯೇ ಮತ್ತು ವಿತರಣೆಗಾಗಿ ಮೊದಲೇ ಗೊತ್ತುಮಾಡಲ್ಪಟ್ಟಿರುವವಳೂ ಅವಳೇ. ಭಾರತೀ ಸಂಸ್ಕೃತಿಯು[೨] ಧರ್ಮಶಾಸ್ತ್ರದಲ್ಲಿ ಕೇಂದ್ರೀಕೃತವಾಗಿಲ್ಲದಿದ್ದರೆ, ಆಧ್ಯಾತ್ಮಿಕ ಮೌಲ್ಯಗಳ ಪರಿಸ್ಥಿತಿಗೆ ಸರಿಹೊಂದಿಕೊಂಡಿಲ್ಲದಿದ್ದರೆ ಮತ್ತು ಶಾಶ್ವತ ಲಯಬದ್ಧತೆಗೆ ಅನುಗೊಂಡಿರದಿದ್ದರೆ, ಅದು ಕ್ಷುಲ್ಲಕವಾದ ಸಂಗತಿ.

ಆದ್ದರಿಂದಲೇ ಶ್ರೀ ಅರವಿಂದರ ರಾಷ್ಟ್ರೀಯತೆಯು ಭಾರತೀಯ ಭೌಗೋಳಿಕ ಮಿತಿಯ ನಿರ್ಬಂಧದಲ್ಲಿರಲಿಲ್ಲ. ಅದು ರಾಷ್ಟ್ರಾದ್ಯಂತಗಾಮಿಯಾಗಿತ್ತು. ಅದು ವಿಶ್ವವ್ಯಾಪಿಯಾಗಿತ್ತು. ಅವರ ಅಲೀಪುರ್ ಜೈಲುವಾಸದಲ್ಲಿ, ಅವರಿಗೆ ಭಗವಂತನೇ ಅವರೊಂದಿಗೆ ಮಾತನಾಡಿದಂತೆ ಕೇಳಿಸಿತು. "ಈ ಏಕಾಂತತೆಯ ವರ್ಷದಲ್ಲಿ,

೨ ಭಾರತೀಯ ಸಂಸ್ಕೃತಿಯ ಮಹತ್ವದ ಬಗ್ಗೆಯ ವಿಶ್ವಾಸಾರ್ಹ ವಿವರಗಳಿಗೆ, ಅರವಿಂದರ "ಫೌಂಡೇಷನ್ಸ್ ಆಫ್ ಇಂಡಿಯನ್ ಕಲ್ಚರ್" ಓದಿ.

ನಿನಗೆ ಅನುಮಾನ ಇದ್ದ ವಿಷಯಗಳ ಬಗ್ಗೆ ಏನನ್ನೋ ತೋರಿಸಿದ್ದಾಗಿದೆ ಮತ್ತು ಅದೇ ಹಿಂದೂ ಧರ್ಮದ ಸತ್ಯ ಪ್ರಪಂಚದ ಎದುರಿನಲ್ಲಿ ನಾನು ಗಮನ ಸೆಳೆಯುವಂತೆ ನಿರೂಪಿಸುತ್ತಿರುವುದು ಈ ಧರ್ಮವನ್ನೇ. ಇದನ್ನೇ ನಾನು ಉತ್ತಮಗೊಳಿಸಿ, ಋಷಿಗಳ, ಸಂತರ ಮತ್ತು ಅವತಾರಗಳ ಮೂಲಕ ವೃದ್ಧಿಪಡಿಸಿದ್ದು ಈಗ ರಾಷ್ಟ್ರಗಳ ನಡುವೆ, ನನ್ನ ಕೆಲಸವನ್ನು ಮಾಡಲು, ಅದೇ ಮುನ್ನಡೆಯುತ್ತಿದೆ. ನಾನೀಗ ಈ ರಾಷ್ಟ್ರವನ್ನು ನನ್ನ ವಚನಗಳ ಭಾವವನ್ನು ಪ್ರಚೋದಿಸಲು ನೆಟ್ಟಗೆ ನಿಲ್ಲಿಸುತ್ತಿದ್ದೇನೆ.... ನೀನು ಮುಂದೆ ಹೋದಾಗ, ರಾಷ್ಟ್ರವನ್ನು ಕುರಿತು, ಸದಾ, 'ಸನಾತನ ಧರ್ಮಕ್ಕಾಗಿ ಪ್ರಪಂಚಕ್ಕಾಗಿ ಅವರು ಮುನ್ನುಗ್ಗಬೇಕೇ ಹೊರತು ತಮಗಾಗಿ ಅಲ್ಲ', ಎಂದು ಹೇಳು. ವಿಶ್ವಸೇವೆಗಾಗಿ ನಾನು ಅವರಿಗೆ ಸ್ವಾತಂತ್ರ್ಯವನ್ನು ನೀಡುತ್ತಿದ್ದೇನೆ."[೩]

ವಿವೇಕಾನಂದರು ಮಾನವತೆಯ ಪುನರ್ನಿರ್ಮಾಣದ ಬಗ್ಗೆ ಹೇಳಿದ್ದರು. ಮತ್ತು ಈಗ ಭಾರತದ ಚಾರಿತ್ರಿಕ ಗುರಿಯ ಬಗ್ಗೆ ಒತ್ತುಕೊಡುವುದು, ಶ್ರೀ ಅರವಿಂದರ ಸರದಿಯಾಗಿತ್ತು. ಮನುಷ್ಯ ಮತ್ತು ಭೂಮಿಯ ಬಗ್ಗೆ ಇದ್ದ, ಅವರ ಅಪಾರ ಪ್ರೇಮವನ್ನು ಗುರುತಿಸಬೇಕಾಗಿದ್ದದ್ದು ಮೂರನೆಯ ವಿಷಯ. ಅದು ನಿಜಕ್ಕೂ ಅವರ ಭಗವತ್ಪ್ರೇಮದ ಸ್ವಾಭಾವಿಕ ಅನುಸಿದ್ಧಾಂತ. ಏಕೆಂದರೆ ಅವರು, ಎಲ್ಲಾ ಜೀವಿಗಳಲ್ಲಿಯೂ ಮತ್ತು ವಿಷಯಗಳಲ್ಲಿಯೂ ಭಗವದ್ದರ್ಶನ ಮಾಡುತ್ತಿದ್ದರು. ನಡೆದುದೆಲ್ಲದರಲ್ಲಿಯೂ, ಭಗವಂತನ ಕೈವಾಡವನ್ನು ಗಮನಿಸುತ್ತಿದ್ದರು. ಭಗವಂತನು ಅವರಿಗೆ ಅಗೋಚರ ಸೃಷ್ಟಿಕರ್ತನೂ ಆಗಿದ್ದನು. ಜೊತೆಗೆ ವಿಶ್ವಗಳ ನೇತಾರನೂ ಆಗಿದ್ದನು. ಕೇವಲ ಅಲ್ಪಸಂಖ್ಯೆಯ ಆಧ್ಯಾತ್ಮಿಕ ಆಕಾಂಕ್ಷಿಗಳಿಗೆ ಮಾತ್ರ ಮುಕ್ತಿಯ ಅಥವಾ ನಿರ್ವಾಣದ ಮಾರ್ಗದರ್ಶನ ನೀಡಿದರೆ ಅವರಿಗೆ ತೃಪ್ತಿಯಾಗುತ್ತಿರಲಿಲ್ಲ. ಮಿಕ್ಕ ಜನತೆಯನ್ನೆಲ್ಲಾ ಅವರ ಜೀವನಗಳ ಯಥಾಸ್ಥಿತಿಯ ಅಜ್ಞಾನ ಮತ್ತು ನರಳಿಕೆಯ ಸ್ಥಿತಿಗಳಲ್ಲಿ ಬಿಡುವುದರಲ್ಲಿ ಅವರು ತೃಪ್ತರಾಗುತ್ತಿರಲಿಲ್ಲ. ಅವರು ಮನುಷ್ಯನನ್ನು ಒಂದು ಪೈಪೋಟಿಯಂತೆ, ಮನಸ್ಸಿನಲ್ಲಿ ಉತ್ಕೃಷ್ಟ ಮನಸ್ಸಿಗೆ, ಮೌಢ್ಯತೆಯಿಂದ ಪೂರ್ಣವಾದ ಮತ್ತು ನಿರ್ದುಷ್ಟವಾದ ಅರಿವಿಗೆ, ಮಾನವ ಜೀವನದಿಂದ ದಿವ್ಯಜೀವನಕ್ಕೆ ಏರಿಸಲು, ಎಷ್ಟೋ ದಶಕಗಳವರೆಗಿನ ಯೋಗಿಕ ಚಿತ್ತೈಕಾಗ್ರತೆಯಿಂದ, ಆಲಸ್ಯವಿಲ್ಲದೆ ಶ್ರಮಿಸಿದರು. ಅವರು ತಮ್ಮದೇ ಭೂಮಿತಾಯಿಯ ಕಾಲಾತೀತವಾದ ಯಾತನೆಯನ್ನೂ, ಸ್ವರ್ಗದಿಂದ ಬೇರೆಯಾದ್ದರಿಂದ ಉಂಟಾದ ಗಹನವಾದ ಆದರೆ ಮೂಕವಾದ ಸಂಕಟವನ್ನೂ ಒಳಗೇ ಅನುಭವಿಸಿದರು ಮತ್ತು ಭೂದೇವಿಯನ್ನು ಅವಳ ಶಾಶ್ವತ ಪ್ರಿಯಕರನೊಂದಿಗೆ ಒಂದುಗೂಡಿಸಿ, ಸಂಕಟಮೋಚನೆ ಮಾಡಬೇಕೆಂದೂ ನಿರ್ಣಯಿಸಿಕೊಂಡರು. ಅವರು ಏನನ್ನು ಮಾಡಬೇಕೆಂದು

---

೩. ೧೯೦೮ರಲ್ಲಿ ಭಾರತದ ಸ್ವಾತಂತ್ರ್ಯದ ಬಗ್ಗೆ ಶ್ರೀ ಅರವಿಂದರಿಗೆ ಆಶ್ವಾಸನೆ ನೀಡಲಾಗಿತ್ತು.



ನಿರ್ಣಯಿಸಿಕೊಂಡಿದ್ದರೋ ಅದನ್ನು ಮಾಡಿ ಮುಗಿಸಿದರು. ಅವರು ಭೂಮಿಗೆ ದಿವ್ಯ ಮನಸ್ಸಿನ ಸತ್ಯಪ್ರಜ್ಞೆಯನ್ನು ಇಳಿಸಿದರು ಮತ್ತು ಮಾನವನು ತನ್ನ ಜಾತಿಯ ಕಡೆಯಿಂದ ತನ್ನ ಮಂಕಾದ ಮತ್ತು ಸೀಮಿತವಾದ ಮನಸ್ಸಿನಿಂದ ಅವನ ವಿಕಾಸದ ಏರುದಾರಿಯ ಶೃಂಗಕ್ಕೆ ಅನಂತ ದೇದೀಪ್ಯಮಾನ ಮತ್ತು ಪರಮಾನಂದ ಪೂರ್ಣ ದಿವ್ಯ ಹಾಗೂ ವಿಶಿಷ್ಟ ಮನಸ್ಸು ಅಥವಾ ಉಪನಿಷತ್ತುಗಳ ವಿಜ್ಞಾನದಿಂದ ಏರುವಂತೆ ಮಾಡಿದರು.

ಅವರ ವರ್ತನೆಯ ಪ್ರಯೋಜನಕ್ಕಾಗಿ ನಾನು ಶ್ರೀ ಅರವಿಂದರ ಜೀವನವನ್ನು ನಾಲ್ಕು ಕಾಲಾವಧಿಗಳಾಗಿ ಭಾಗಮಾಡುತ್ತೇನೆ: ಇಂಗ್ಲೆಂಡಿನಲ್ಲಿನ ಅವರ ವಿದ್ಯಾಭ್ಯಾಸ; ಬರೋಡದಲ್ಲಿನ ಅವರ ಜೀವನ, ಗಾಢ ಆತ್ಮಸಿದ್ಧತೆ; ಬಂಗಾಳದಲ್ಲಿ ಸದಾ ಕ್ರಿಯಾಶೀಲ ಆಧ್ಯಾತ್ಮಿಕತೆಯಿಂದ ಹುದುಗುತ್ತಿದ್ದ ಅವರ ರಾಜಕೀಯದ ಮತ್ತು ವಿದ್ಯಾಭ್ಯಾಸದ ಕೆಲಸಗಳು; ಮನುಷ್ಯಾತೀತ ಮನಸ್ಸಿನ ಆರೋಹಣ ಹಾಗೂ ಅವರೋಹಣಕ್ಕೆ ಪಾಂಡಿಚೆರಿಯಲ್ಲಿದ್ದ ಅವರ ದೀರ್ಘ ಜೀವನದ ಕೇಂದ್ರೀಕೃತ ಯೋಗ; ಈ ನಾಲ್ಕು ಅವಧಿಗಳಲ್ಲಿ ನಡೆದ ಮುಖ್ಯವಾದ ಘಟನೆಗಳ ಒಂದು ಬಿರುಸಿನ ಸರ್ವೇಕ್ಷಣೆಯತ್ತ ನಾವು ಕಣ್ಣು ಹಾಯಿಸೋಣ ಮತ್ತು ಶ್ರೀ ಅರವಿಂದರ ಜೀವನ ಧ್ಯೇಯ ಮತ್ತು ಪ್ರಾಮುಖ್ಯತೆಯತ್ತ ಗಮನವನ್ನು ಒಂದೇ ಕಡೆ ಹರಿಸೋಣ. ವಿಷಯವೇನೋ ಸುಮಾರಾಗಿ ಕಷ್ಟದ್ದೇ. ಏಕೆಂದರೆ ಶ್ರೀ ಅರವಿಂದರ ಭಾವನೆ ಮತ್ತು ಅನುಭವದಲ್ಲಿ ಮೂಲದ್ದೂ ಮಹತ್ತರ ಬದಲಾವಣೆಗೆ ಸಂಬಂಧಿಸಿದವೂ, ಗಸ್ತು ತಿರುಗಿದ ಮತ್ತು ಸಾಂಪ್ರದಾಯಿಕ ಜಾಡು ಹಿಡಿದು ಆಸಕ್ತಿ ಕೆರಳಿಸುವ ಮತ್ತು ವಿಶಿಷ್ಟವಾದ ನೇರಮಾರ್ಗ ಚ್ಯುತಿ ಜತೆಗೆ ಧಾರ್ಮಿಕ ಮತ್ತು ಬೌದ್ಧಿಕ ಪ್ರಪಂಚವನ್ನು ತಮ್ಮ ಹೊಸದಾದ ಮತ್ತು ಹೆಚ್ಚು ಫಲದಾಯಕ ದೃಷ್ಟಿಕೋನಗಳಿಂದ ಬೆಚ್ಚಿ ಬೀಳಿಸುವಂಥವೂ ಇವೆ. ಓದುಗರು, ಓದಿನ ಮಧ್ಯೆ ನಿಂತು ಹೊಸದು ಮತ್ತು ಹೆಚ್ಚು ಮೌಲ್ಯದ ಯಥಾದೃಷ್ಟಿಗಳನ್ನು ಸ್ವಾಗತಿಸಿ, ಮುಂದೆ ಹೋಗುವಾಗ ವಿಮರ್ಶಿಸಬೇಕು. ಏಕೆಂದರೆ ನಾಳೆಯ ಬೀಜಗಳಿರುವುದು ಅವುಗಳಲ್ಲಿಯೇ.

## ಜನನ, ಬಾಲ್ಯ ಮತ್ತು ವಿದ್ಯಾಭ್ಯಾಸ

೧೮೭೨ನೇ ಇಸವಿಯ ಆಗಸ್ಟ್ ಹದಿನೈದರಂದು, ಶ್ರೀ ಅರವಿಂದರು, ಕಲ್ಕತ್ತಾದಲ್ಲಿ ಜನಿಸಿದರು. ಅವರ ಮಾತೃಸಂಬಂಧಿ ತಾತ, ಶ್ರೀ ರಾಜನಾರಾಯಣ್ ಬೋಸರು, ಸಂತರಂಥ ಮನುಷ್ಯರು, ಖ್ಯಾತಿವಂತರಾದ ವಿದ್ವಾಂಸರು ಮತ್ತು ಬಂಗಾಳದ ದೇಶಭಕ್ತರೂ ಆಗಿದ್ದರು. ಅರವಿಂದರ ತಂದೆಯುವರಾದ ಡಾ. ಕೆ. ಡಿ. ಘೋಷರು, ತಮ್ಮ ವೈದ್ಯಕೀಯ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ಹೋಗಿದ್ದು, ನಂತರ ತಮ್ಮ ಪ್ರಾಂತದ ಕೆಲವು ಜಿಲ್ಲೆಗಳಲ್ಲಿ ಸಿವಿಲ್ ಸರ್ಜನ್ ಆಗಿ ಕೆಲಸ

ಮಾಡಿದರು. ಅವರು ಅತ್ಯಂತ ಉದಾರರೂ, ಉದಾತ್ತ ಭಾವದವರೂ ಆಗಿದ್ದರು. ಆದರೆ ಅವರು ತಮ್ಮ ಮನೋಭಾವಗಳಲ್ಲಿ ಮತ್ತು ಜೀವನದ ರೀತಿಯಲ್ಲಿ ಪೂರ್ಣವಾಗಿ ಆಂಗ್ಲೀಕರಿಸಿಹೋಗಿದ್ದರು. ಅವರಿಗೆ ತಮ್ಮ ಗಂಡುಮಕ್ಕಳೆಲ್ಲರೂ (ಶ್ರೀ ಅರವಿಂದರು, ಅವರ ಮೂರನೆಯ ಪುತ್ರ) ಪೂರ್ಣವಾಗಿ ಆಂಗ್ಲರ ರೀತಿಯಲ್ಲಿಯೇ ಬೆಳೆದು, ವಿದ್ಯಾಭ್ಯಾಸ ಪಡೆದುಕೊಳ್ಳಬೇಕು ಎಂಬ ಆಶಯವಿತ್ತು. ಅವರು ತಮ್ಮ ಮಕ್ಕಳನ್ನು ಡಾರ್ಜಿಲಿಂಗ್‌ನಲ್ಲಿದ್ದ ಲಾರೆಟ್ಟೋ ಕಾನ್ವೆಂಟ್ ಸ್ಕೂಲಿಗೆ ಕಳುಹಿಸಿದರು. ಶ್ರೀ ಅರವಿಂದರು ಮಗುವಾಗಿದ್ದಾಗ, ಕೇವಲ ಇಂಗ್ಲಿಷ್ ಮತ್ತು ಹಿಂದೂಸ್ತಾನೀ ಭಾಷೆಯನ್ನೇ ಮಾತನಾಡುತ್ತಿದ್ದರು. ಅವರ ಮಾತೃಭಾಷೆ ಬೆಂಗಾಲಿ ಆಗಿದ್ದರೂ, ಅವರಿಗೆ ಬೆಂಗಾಲಿ ಬರುತ್ತಿರಲಿಲ್ಲ. ಅವರಿಗೆ ಏಳು ವರ್ಷಗಳಾಗಿದ್ದಾಗ, ಎಂದರೆ ೧೮೭೯ರಲ್ಲಿ ಅವರ ತಂದೆ ತಮ್ಮ ಮೂವರು ಪುತ್ರರನ್ನೂ ಇಂಗ್ಲೆಂಡಿಗೆ[೪] ಕರೆದೊಯ್ದರು. ಅಲ್ಲಿ ಅವರನ್ನು ಇಂಗ್ಲಿಷ್ ಕ್ರೈಸ್ತ ದೇವಾಲಯದ ಪುರೋಹಿತವರ್ಗಕ್ಕೆ ಸೇರಿದ ಇಂಗ್ಲಿಷಿನವನ ಮತ್ತು ಆತನ ಪತ್ನಿಯ ಸುಪರ್ದಿಯಲ್ಲಿ ಬಿಟ್ಟು, ತಮ್ಮ ಮಕ್ಕಳು ಯಾವ ಭಾರತೀಯನೊಂದಿಗೂ ಸಂಬಂಧವನ್ನಿಟ್ಟುಕೊಳ್ಳದಂತೆ, ಭಾರತೀಯ ಭಾವನೆಗಳು ಅಥವಾ ಅವರ ಜೀವನದ ರೀತಿಯ ಪ್ರಭಾವ ತಮ್ಮ ಮಕ್ಕಳ ಮೇಲೆ ಬೀಳದಂತೆ ನೋಡಿಕೊಳ್ಳಬೇಕೆಂದು ಕರಾರುವಾಕ್ಕಾದ ಸೂಚನೆಗಳನ್ನಿತ್ತಿದ್ದರು. ಶ್ರೀ ಅರವಿಂದರು, ಭಾರತ ಅವಳ ಜನರು ಮತ ಮತ್ತು ಅವಳ ಸಂಸ್ಕೃತಿಯ ಬಗ್ಗೆಯ ಪೂರ್ಣ ಮೌಢ್ಯತೆಯಲ್ಲೇ ಬೆಳೆದರು.

ಶ್ರೀ ಅರವಿಂದರು ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳನ್ನು ಬಹಳ ಚೆನ್ನಾಗಿ ಕಲಿತರು. ಆದ್ದರಿಂದ ಅಲ್ಪಕಾಲದಲ್ಲಿಯೇ ಅವರನ್ನು ಸೆಂಟ್ ಪಾಲ್ಸ್ ಸ್ಕೂಲಿನಿಂದ ತೆಗೆದು ಕೇಂಬ್ರಿಡ್ಜ್ ಕಿಂಗ್ಸ್ ಕಾಲೇಜಿನ ಉನ್ನತ ಪದವಿ ಉತ್ಕೃಷ್ಟ ವಿದ್ಯಾರ್ಥಿವೇತನದೊಂದಿಗೆ, ಕೇಂಬ್ರಿಡ್ಜ್‌ನ ಕಿಂಗ್ಸ್ ಕಾಲೇಜಿಗೆ ಕಳುಹಿಸಿದರು. ತಮ್ಮ ನಿಗದಿತ ಪಾಠ ಪ್ರವಚನಗಳ ಸರಣಿಯೊಂದಿಗೆ, ಅವರು ಇಂಗ್ಲಿಷ್ ಕಾವ್ಯಗಳನ್ನೂ, ಕಾದಂಬರಿಗಳನ್ನೂ ಮತ್ತು ಸಾಮಾನ್ಯ ಸಾಹಿತ್ಯ, ಫ್ರೆಂಚ್ ಸಾಹಿತ್ಯಗಳ ಜೊತೆಗೆ ಪ್ರಾಚೀನ, ಮಧ್ಯಯುಗೀನ ಮತ್ತು ಆಧುನಿಕ ಯೂರೋಪಿನ ಚರಿತ್ರೆ ಮುಂತಾದವುಗಳನ್ನೆಲ್ಲಾ ಓದಿಕೊಂಡರು. ಇಟ್ಯಾಲಿಯನ್ ಮತ್ತು ಜರ್ಮನ್ ಭಾಷೆಗಳಲ್ಲಿ ಸಾಕಷ್ಟು ಪ್ರಾವೀಣ್ಯತೆ ಪಡೆದುಕೊಂಡ ನಂತರ ಸ್ವಲ್ಪ ಸ್ಪಾನಿಷ್ ಭಾಷೆಯನ್ನೂ ಕಲಿತರು. ಅವರು ತಮ್ಮ ಹದಿನಾಲ್ಕನೆಯ ವಯಸ್ಸಿನಿಂದಲೇ ಆಂಗ್ಲ ಕವಿತೆಗಳನ್ನು ಬರೆಯುವುದರ ಅಭ್ಯಾಸ ಮಾಡಿಕೊಂಡರು. ಒಂದೇ ವರ್ಷದಲ್ಲಿ ಅವರು ಕಿಂಗ್ಸ್ ಕಾಲೇಜಿನಲ್ಲಿ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳ ಕವಿತೆಗಳಿಗೆ,

೪. ಅವರ ನಾಲ್ಕನೆಯ ಪುತ್ರ ಬರೀಂದ್ರ, ಇಂಗ್ಲೆಂಡಿನಲ್ಲೇ ಹುಟ್ಟಿದರು.



ಎಲ್ಲಾ ಪಾರಿತೋಷಕಗಳನ್ನೂ ಪಡೆದರು.[೫]

ಕೇಂಬ್ರಿಡ್ಜ್‌ನಲ್ಲಿ ಶ್ರೀ ಅರವಿಂದರು ಮೊದಲನೆಯ ಅರ್ಧಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ೧೮೯೦ರಲ್ಲಿ ಅವರು ಇಂಡಿಯನ್ ಸಿವಿಲ್ ಸರ್ವಿಸ್‌ನ ಪರೀಕ್ಷೆಯನ್ನು ಮುಕ್ತ ಸ್ಪರ್ಧೆಯಲ್ಲಿ ಗ್ರೀಕ್ ಹಾಗೂ ಲ್ಯಾಟಿನ್ ಭಾಷೆಗಳಲ್ಲಿ ಹೆಚ್ಚು ಅಂಕಗಳನ್ನು ಗಳಿಸಿ ದಾಖಲೆ ಮಾಡಿದರು. ಆದರೆ ಕುದುರೆ ಸವಾರಿಯ ಪಾಠಗಳನ್ನು ಕಡೆಗಾಣಿಸಿ, ಕೊನೆಯ ಪರೀಕ್ಷೆಯಲ್ಲಿ ನಾಪಾಸಾದರು. ಈ ವಿಷಯದ ಪ್ರಾಮುಖ್ಯವೇನೆಂದರೆ ಶ್ರೀ ಅರವಿಂದರು ಆ ವೇಳೆಗಾಗಲೇ ತೀಕ್ಷ್ಣವಾದ ರಾಷ್ಟ್ರೀಯ ಪ್ರವೃತ್ತಿಗಳನ್ನು ಮೈಗೂಡಿಸಿಕೊಂಡಿದ್ದರಾಗಿ ಭಾರತದಲ್ಲಿ ಅವಳ ಜೀವರಕ್ತವನ್ನು ಹೀರಿ ಸ್ವಾತಂತ್ರ್ಯದ ಬಗ್ಗೆಯ ಆಕೆಯ ಆತುರದ ಉಸಿರಡಗಿಸಿದ್ದ, ಬ್ರಿಟಿಷರ ಭಾರತದಲ್ಲಿನ ಆಳ್ವಿಕೆಗೆ ವಿರುದ್ಧವಾಗಿ, ತೀಕ್ಷ್ಣವಾದ ಅಸಮಾಧಾನವಿದ್ದುದರಿಂದ ಅವರು ಸಿವಿಲ್ ಪರೀಕ್ಷೆಗೆ ಕುಳಿತುಕೊಳ್ಳಲು ಇಷ್ಟಪಡಲಿಲ್ಲ. ಅದಕ್ಕಾಗಿಯೇ ಅವರು ಕುದುರೆಸವಾರಿಯ ಪರೀಕ್ಷೆಗೆ ಬೇಕೆಂದೇ ಹೋಗದೇ, ತಪ್ಪಿಸಿಕೊಂಡು ಅನರ್ಹರೆನಿಸಿಕೊಂಡರು. ಜೊತೆಗೆ ಅವರಿನ್ನೂ ಹನ್ನೊಂದು ವರ್ಷದ ಬಾಲಕನಾಗಿದ್ದಾಗಲೇ ಅವರಿಗೆ ಪ್ರಪಂಚದ ಮೇಲೆ ಬರಲಿದ್ದ ಉತ್ಕಟ ಬದಲಾವಣೆಯ ಬಗ್ಗೆ ಪೂರ್ವಸೂಚನೆ ಸಿಕ್ಕಿತು ಮತ್ತು ಅವರು ಅದರಲ್ಲಿ ತಮ್ಮದೊಂದು ಪಾತ್ರವೂ ಇದೆಯೆಂದು ಭಾವಿಸಿದ್ದರು. ಕೇಂಬ್ರಿಡ್ಜ್‌ನಲ್ಲಿ ಭಾರತೀಯ ಮಜ್ಲೀಗಳ ಸಂಘದ ಸದಸ್ಯರಾಗಿ (ನಂತರ ಅವರೇ ಕಾರ್ಯದರ್ಶಿಯೂ ಆದರು) ಅವರು ಆಂಗ್ಲ ಸರ್ಕಾರವು ತನ್ನ ದೇಶದ ಮೇಲೆ ಮಾಡುತ್ತಿದ್ದ ಹೃದಯಶೂನ್ಯ ಶೋಷಣೆಗೆ ವಿರುದ್ಧವಾಗಿ, ಆವೇಶದ ಭಾಷಣಗಳನ್ನು ಮಾಡಿದರು. ನಂತರ ಒಂದು ಗುಟ್ಟಾದ ಸಂಸ್ಥೆಯನ್ನು ರೂಪಿಸಿ, ಅದಕ್ಕೆ ಲೋಟಸ್ ಮತ್ತು ಡ್ಯಾಗರ್ ಎಂದು ಹೆಸರಿಟ್ಟು, ಭಾರತದಿಂದ ಬ್ರಿಟಿಷರ ಆಳ್ವಿಕೆಯನ್ನು ಹೊಡೆದೋಡಿಸುವ ಪ್ರತಿಜ್ಞೆ ಮಾಡಿದರು. ಅದೃಷ್ಟದ ವಿಪರ್ಯಾಸವೋ ಎಂಬಂತೆ, ಕರಾರುವಾಕ್ಕಾದ ದೃಷ್ಟಿಕೋನದಲ್ಲಿ ಮತ್ತು ವಿಧಾನಗಳಲ್ಲಿ ಪಾಶ್ಚಾತ್ಯ ದೇಶದ ಒಬ್ಬ ನಮ್ರ ವಿದ್ಯಾರ್ಥಿ ಆಗಬೇಕಾಗಿದ್ದವರು, ಬದಲಾಗಿ, ಭಾರತದ ಗಾಢಾನುರಕ್ತ ಪ್ರೇಮಿಯಾದ ಮತ್ತು ನಿಷ್ಠಾವಂತ ದೇಶಭಕ್ತರಾದರು.

ಅವರು ನಂತರ ಮ್ಯಾಕ್ಸ್‌ಮುಲ್ಲರ್ ಸಂಪಾದಕತ್ವದ ಈಸ್ಟ್ ಸರಣಿಯ, ಪವಿತ್ರ ಗ್ರಂಥಗಳನ್ನು ಓದಿದರು ಮತ್ತು ತಮ್ಮ ಮಾತೃಭೂಮಿಯ ಮಹತ್ತಾದ ಸಾಂಸ್ಕೃತಿಕ ಪರಂಪರೆಯ ಅರಿವಿನ ಒಳದೃಷ್ಟಿಯನ್ನು ಪಡೆದುಕೊಂಡರು.

ತಮ್ಮ ಇಪ್ಪತ್ತೊಂದನೆಯ ವಯಸ್ಸಿನಲ್ಲಿ, ಪಾಶ್ಚಾತ್ಯ ಸಂಸ್ಕೃತಿಯ ಚಿಲುಮೆಗಳಿಂದ ಹೃತ್ಪೂರ್ವಕವಾಗಿ ಪಾನ ಮಾಡಿದ ನಂತರ, ೧೮೯೩ರಲ್ಲಿ ಶ್ರೀ ಅರವಿಂದರು

೫. ಶ್ರೀ ಅರವಿಂದರು, ತಮ್ಮ ಬಗ್ಗೆ

ಭಾರತಕ್ಕೆ ವಾಪಸ್ಸಾದರು. ತಮ್ಮ ಮಾತೃಭೂಮಿ ಮುಂಬೈನ ಅಪೋಲೋ ಬಂದರಿನ ನೆಲದ ಮೇಲೆ ಅವರು ಕಾಲಿಟ್ಟ ಕೂಡಲೆ, ಒಂದು ಆಶ್ಚರ್ಯಕರವಾದ ಮತ್ತು ಅನುಪಮವಾದ ಸಂಗತಿ ನಡೆಯಿತು. ಅಗಾಧವಾದ ಶಾಂತಿ ಮತ್ತು ಸ್ತಬ್ಧತೆ ತಕ್ಷಣವೇ ಅವರ ಮೇಲಿಳಿಯಿತು ಮತ್ತು ತನ್ನ ಅಪ್ಪುಗೆಯಲ್ಲಿ ಅವರನ್ನು ಆವರಿಸಿತು. ಅವರ ಪ್ರೀತಿಯ ಭಾರತಮಾತೆಯು, ಅವರನ್ನು ಮನೆಗೆ ಸ್ವಾಗತಿಸಿ, ಅವರ ಆತ್ಮದ ಮೇಲೆ ನೀಡಿದ ಪ್ರಥಮ ಚುಂಬನವೇ ಅದಾಗಿತ್ತು.

ಈ ಶಾಂತಿ ಮತ್ತು ಸ್ತಬ್ಧತೆಗಳು ಸುಮಾರು ಒಂದು ತಿಂಗಳಿನುದ್ದಕ್ಕೂ ಅವರಲ್ಲಿಯೇ ನೆಲೆಸಿದ್ದವು.

ಯೂರೋಪಿನಿಂದ ಅವರು ಹೊರಡುವುದಕ್ಕೆ ಮುಂಚೆ, ಅವರನ್ನು ಬರೋಡದ ಗಾಯಕ್‌ವಾಡರು ಪರಿಚಯ ಮಾಡಿಕೊಂಡರು ಮತ್ತು ಸ್ಟೇಟ್ ಸರ್ವಿಸ್ಸಿನ ಒಂದು ದೊಡ್ಡ ಕೆಲಸವನ್ನು ನೀಡಲು ಸಿದ್ಧರಾದರು. ಬರೋಡದಲ್ಲಿ ಅವರು ಮೊದಲು ಸೆಟಲ್‌ಮೆಂಟ್ ಅಂಡ್ ರೆವೆನ್ಯೂ ಆಫೀಸರ್ ಆಗಿದ್ದು ನಂತರ ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಗಳ ಪ್ರೊಫೆಸರರೂ, ಕಡೆಗೆ ಬರೋಡ ಕಾಲೇಜಿನ ಉಪಪ್ರಾಂಶುಪಾಲರೂ ಆಗಿ ಕೆಲಸ ಮಾಡಿ ಅಲ್ಲೇ ಸುಮಾರು ಹದಿಮೂರು ವರ್ಷಗಳಿದ್ದರು. ಅವರ ಬಗ್ಗೆ ಶ್ರೀ ಗಾಯಕ್‌ವಾಡರೂ ಸದಭಿಪ್ರಾಯವನ್ನು ಹೊಂದಿದ್ದರಲ್ಲದೆ ಅವರ ಶಿಷ್ಯರೂ ಮತ್ತು ನಗರದ ಎಲ್ಲಾ ಗಣ್ಯರೂ ಬಹಳ ಮರ್ಯಾದೆಯನ್ನು ನೀಡುತ್ತಿದ್ದರು. ಬರೋಡದಲ್ಲಿ ಅವರಿದ್ದಷ್ಟು ವರ್ಷಗಳಲ್ಲಿ ಅವರು ಒಬ್ಬ ಪ್ರಚಂಡ ರಾಷ್ಟ್ರೀಯತಾವಾದಿಯಾಗಿ ಬೆಳೆದರು. ಅಲ್ಲಿ ಅವರು ತಮ್ಮ ಮಾತೃಭಾಷೆಯಾಗಿದ್ದ ಬೆಂಗಾಲಿ, ಸಂಸ್ಕೃತ, ಮರಾಠಿ ಹಾಗೂ ಗುಜರಾತಿ ಭಾಷೆಗಳನ್ನು ಕಲಿತರು. ಅವರಿಗಾಗಿ ಕಾಯುತ್ತಿದ್ದ ಅಪಾರ ಕೆಲಸಗಳಿಗೆ ಆ ಕಾಲವು ತೀವ್ರ ಸ್ವಂತ ಸಿದ್ಧತೆಯ ಅವಧಿಯಾಗಿತ್ತು. ಅವರು ಪಾಶ್ಚಾತ್ಯ ಸಂಸ್ಕೃತಿಯ ಕಾರಂಜಿಗಳನ್ನು ಎಂಥ ತೀವ್ರ ಬಯಕೆಯಿಂದ ಸೇವಿಸಿದ್ದರೋ, ಅಷ್ಟೇ ಸ್ಫೂರ್ತಿಯಿಂದ ತಮ್ಮ ರಾಷ್ಟ್ರೀಯ ಸಂಸ್ಕೃತಿಯ ಬಾವಿ ನೀರಿನ ಬುಗ್ಗೆಗಳನ್ನೂ ಕುಡಿದರು. ಅವರು ಸಂಸ್ಕೃತವನ್ನು ಎಷ್ಟು ಚೆನ್ನಾಗಿ ಕಲಿತಿದ್ದರು ಎಂದರೆ ಅವರು ರಾಮಾಯಣ, ಮಹಾಭಾರತ ಹಾಗೂ ಕಾಳಿದಾಸನ ಕೃತಿಗಳ ಸಾಕಷ್ಟು ಭಾಗಗಳನ್ನು, ಸಂಸ್ಕೃತದಿಂದ ಇಂಗ್ಲಿಷಿಗೆ ಅನುವಾದಿಸಿದ್ದರು. ರಾಮಾಯಣ ಮತ್ತು ಮಹಾಭಾರತದ ಅವರ ಅನುವಾದಗಳನ್ನು ಓದಿದ ರಮೇಶ್‌ದತ್ತರು ಎಷ್ಟು ಪ್ರಭಾವಿತರಾಗಿದ್ದರು ಎಂದರೆ ಅವರು ಮೊದಲೇ ಈ ಅನುವಾದಗಳನ್ನು ಓದಿದ್ದಿದ್ದರೆ, ಅವುಗಳ ತಮ್ಮ ಸ್ವಂತದ ಅನುವಾದಗಳನ್ನು ಅವರೆಂದಿಗೂ ಪ್ರಕಟಿಸುತ್ತಲೇ ಇರಲಿಲ್ಲವೆಂದು ಹೇಳಿಕೊಂಡಿದ್ದಾರೆ. ತಮ್ಮ ಬರೋಡದಲ್ಲಿದ್ದಾಗಿನ ಕಾಲದಲ್ಲಿ ಶ್ರೀ ಅರವಿಂದರು ಕೆಲವು ಇಂಗ್ಲಿಷ್ ಕವಿತೆಗಳನ್ನೂ ರಚಿಸಿದ್ದರು ಮತ್ತು ತಮ್ಮ ಉತ್ತಮ ಮಹಾಕಾವ್ಯ 'ಸಾವಿತ್ರಿ'



ಪ್ರಾರಂಭಿಸಿದರು.

ಬರೋಡದಲ್ಲಿ ಅವರು ಅತ್ಯಂತ ಉತ್ತಮ ಹುದ್ದೆಗಳಲ್ಲಿದ್ದರೂ, ಶ್ರೀ ಅರವಿಂದರ ಅಭ್ಯಾಸಗಳು ಬಹಳ ಸರಳವಾಗಿದ್ದವು. ಅವರ ಸ್ವಭಾವವು ಸೌಮ್ಯ, ಸಂಯಮ ಮತ್ತು ಸೌಜನ್ಯದ್ದೂ ಆಗಿತ್ತು. ಅವರು ಮತ್ತೊಬ್ಬರಲ್ಲಿ ತಪ್ಪು ಕಂಡುಹಿಡಿಯುವುದನ್ನು ಅಥವಾ ಯಾವುದರ ಬಗ್ಗೆಯಾದರೂ ದೋಷಾರೋಪಣೆ ಮಾಡುವುದನ್ನು ಎಂದೂ ಯಾರೂ ನೋಡಲಿಲ್ಲ. ಉಷ್ಣಶೀತಗಳ ಬಗ್ಗೆ, ಖ್ಯಾತಿ ಅಪಖ್ಯಾತಿಗಳ ಬಗ್ಗೆ, ಅದರಲ್ಲಿಯೂ ಹಣದ ಬಗ್ಗೆ ಔದಾಸೀನ್ಯತೆಯು, ಅವರ ಆತ್ಮಸಂಯಮದ ಪರಿಣಾಮದಿಂದಲ್ಲದೆ, ಅವರ ಪ್ರಕೃತಿಯಲ್ಲೇ ಆಳವಾಗಿ ಬೇರುಬಿಟ್ಟಿತ್ತು. ಒಮ್ಮೆ ಅವರ ಗಡಿಯಾರ ಕಳುವಾಗಿದ್ದಾಗ, ಅವರು ಆ ಕಳ್ಳನಿಗೆ ಆ ಗಡಿಯಾರದ ಆವಶ್ಯಕತೆ ಇತ್ತೋ ಏನೋ ಎಂದರು. ಅವರು ನಿರ್ಮಿತರಾಗದೆ, ಹುಟ್ಟಿನಿಂದಲೇ ಯೋಗಿಯಾಗಿ ಬಂದವರಾಗಿದ್ದರು.

ಗಾಯಕ್‌ವಾಡರೊಂದಿಗೆ, ಅವರು ಕಾಶ್ಮೀರಕ್ಕೆ ಹೋದಾಗ ಅಲ್ಲಿ ಅವರಿಗೆ ಶೂನ್ಯದ ಅನಂತತೆಯ ಅರಿವಾಯಿತು. ನರ್ಮದ ನದಿ ದಡದ ಮೇಲೆ ಒಂದು ದೇವಸ್ಥಾನದಲ್ಲಿ, ಕಾಳಿದೇವಿಯು ಜೀವಂತ ದರ್ಶನವನ್ನು ಅನುಗ್ರಹಿಸಿದಳು. ಮತ್ತೊಮ್ಮೆ ಅವರು ಗಾಡಿಯ ಆಕಸ್ಮಿಕದ ತೊಂದರೆಯಲ್ಲಿದ್ದಾಗ ಅವರಿಗೆ ತಮ್ಮೊಳಗಿನ ಪರಮಾತ್ಮನು ಮೇಲಕ್ಕೇರಿ ಬರುತ್ತಿರುವಂತೆ ದೃಶ್ಯವು ಕಂಡುಬಂದಿತು. ೧೯೦೪ರಲ್ಲಿ ಶ್ರೀ ಅರವಿಂದರು ಯೋಗವನ್ನು ಯಾರ ಸಹಾಯತೆಯೂ ಇಲ್ಲದೆ ಪ್ರಾರಂಭಿಸಿದ್ದರು. ಅದು ಪ್ರಾಣಾಯಾಮದ ಒಂದು ರೀತಿಯ ಆಸಕ್ತಿಯುಕ್ತ ಅಭ್ಯಾಸವಾಗಿತ್ತು. ನಂತರ ಅವರು ವಿಷ್ಣು ಭಾಸ್ಕರ ಲೇಲೇ ಎಂಬ ಮಹಾರಾಷ್ಟ್ರೀಯ ಯೋಗಿಯೊಬ್ಬರನ್ನು ಭೇಟಿ ಮಾಡಿದರು. ಅವರು ಶ್ರೀ ಅರವಿಂದರಿಗೆ ಮನಸ್ಸನ್ನು ಮೌನಗೊಳಿಸುವ ಗುಟ್ಟನ್ನು ಹೇಳಿಕೊಟ್ಟರು. ಅದನ್ನವರು ಮೂರೇ ದಿನಗಳಲ್ಲಿ ಕಲಿತರು. ಆ ಮೌನದಲ್ಲಿ ಅವರು "ತತ್" ಎಂದರೆ 'ಅನಿರ್ವಚನೀಯ ಬ್ರಹ್ಮನ್'ನ ಅರಿವನ್ನು ಪಡೆದರು. ಇದರಲ್ಲಿ ಇಡೀ ವಿಶ್ವವು ನೆರಳಿನಂತೆ ಸತ್ಯಕ್ಕೆ ದೂರವಾದಂತೆ ಕಂಡುಬಂದಿತು. ಅವರು ಏನನ್ನೇ ಮಾಡುತ್ತಿದ್ದರೂ, ಆ ಮೌನವು ಅವರನ್ನು ನಂತರ ಬಿಡಲೇ ಇಲ್ಲ. ಭಾವನೆ, ಮಾತು, ಕೆಲಸಗಳಿಗೆ ಮಾರ್ಗದರ್ಶನ ಎಲ್ಲವೂ ಮೇಲಿನಿಂದಲೇ ಬಂದವು. ಅವರಾಡಿದ ಮಾತುಗಳು, ಬರಹಗಳು, ಎಲ್ಲವೂ ಪ್ರಜ್ಞೆಯ ಉನ್ನತ ಮಟ್ಟಗಳಿಂದ ನೇರವಾಗಿ ಬಂದಿಳಿದವು ಮತ್ತು ಆ ಚಲನೆಯಲ್ಲಿ ಅವರ ಮನಸ್ಸು ಮಧ್ಯೆ ತಲೆಹಾಕಲೇ ಇಲ್ಲ.

ಯೋಗದೊಂದಿಗೆ, ಕವಿತೆಗಳ ರಚನೆ, ಸಂಸ್ಕೃತದ ಪುರಾಣ ಪ್ರಸಿದ್ಧ ಕಾವ್ಯಗಳು ಮತ್ತು ಶ್ರೇಷ್ಠ ಗ್ರಂಥಗಳ ಅನುವಾದ ಇತ್ಯಾದಿಗಳೊಂದಿಗೆ, ಶ್ರೀ ಅರವಿಂದರು ಗುಟ್ಟಾಗಿ ರಾಜಕೀಯದ ಚಟುವಟಿಕೆಗಳು ಅದರಲ್ಲಿಯೂ ಬೆಂಗಾಲ್

ವಿಭಜನೆಯವರೆಗೆ, ಒಂದು ಕ್ರಾಂತಿಯನ್ನು ಚಿತಾಯಿಸುವ ರೀತಿಯಂಥವುಗಳಲ್ಲಿ ತೊಡಗಿದ್ದರಾದ್ದರಿಂದ, ಅವರು ತಮ್ಮ ಕೆಲಸವನ್ನು ಬಿಟ್ಟು ಬಂಗಾಳದ ರಾಷ್ಟ್ರೀಯತಾ ಚಳವಳಿಯಲ್ಲಿ ಪೂರ್ಣವಾಗಿ ಮುಳುಗುವಂತಾಯಿತು. ಅವರು ತಮ್ಮ ಹೆಂಡತಿಗೆ[೬] ಬರೋಡದಿಂದ ಬರೆದ ಕಾಗದದಲ್ಲಿ, ಅವರ ಆವೇಶದ ದೇಶಭಕ್ತಿಯೇ ಉಸಿರಾಡುವಂತಿದ್ದು, ಭಗವಂತನನ್ನು ಅರಿತುಕೊಳ್ಳುವ ಮತ್ತು ಅವನಲ್ಲೇ ಐಕ್ಯವಾಗಬೇಕೆಂಬ ತೀವ್ರ ಆಕಾಂಕ್ಷೆಗಳೂ ಅವುಗಳಲ್ಲಿ ವ್ಯಕ್ತವಾಗಿರುತ್ತಿದ್ದವು. ಅವರು ತಮ್ಮನ್ನು ತಾವು ಪೂರ್ತಿಯಾಗಿ ಪರಮಾತ್ಮನಿಗೆ ಅರ್ಪಿಸಿಕೊಂಡಿದ್ದರು. ಅವರು ಯೋಚಿಸಿದ ಹಾಗೂ ಮಾಡಿದವುಗಳೆಲ್ಲದರಲ್ಲಿಯೂ ಅವರನ್ನು ಮುನ್ನಡೆಸುತ್ತಿದ್ದವನು ಪರಮಾತ್ಮನೇ ಆಗಿದ್ದನು. ಅವರಲ್ಲಿ 'ತಮ್ಮ ಸ್ವಂತದ್ದು' ಎನ್ನುವ ಇಚ್ಛಾಶಕ್ತಿಯ ಆಯ್ಕೆ ಮತ್ತು ಕರ್ತೃತ್ವ ಶಕ್ತಿ ಎಂಬುದೆಲ್ಲವೂ ಮಾಯವಾಗಿದ್ದವು. ಈ ಮುಕ್ತ ಮನಸ್ಸಿನ ಶರಣಾಗತಿಯ ಲೀಲೆ, ಅವರನ್ನೇ ಆಶ್ಚರ್ಯಗೊಳಿಸಿತ್ತು. ಆದರೆ ಶ್ರೀ ಅರವಿಂದರಿಗೆ, ಅದು ಆಧ್ಯಾತ್ಮಿಕ ಅನುಭವಗಳ ಕವಾಟಗಳನ್ನೇ ತೆರೆದಿಟ್ಟಿತ್ತು ಮತ್ತು ಅವರನ್ನು ಮುನ್ನಡೆ ಹಾಗೂ ಸಂಪೂರ್ಣತೆಯ ವಿವಿಧ ಘಟ್ಟಗಳಿಗೆ ಕರೆದೊಯ್ದಿತು.

೧೯೦೬ರಲ್ಲಿ ಶ್ರೀ ಅರವಿಂದರು ಕೊನೆಯದಾಗಿ, ಬಂಗಾಳಕ್ಕೆ ಹೋಗಿ, ಅಲ್ಲಿನ ನ್ಯಾಷನಲಿಸ್ಟ್ ಮೂವ್‌ಮೆಂಟಿಗೆ ಎಂದರೆ ರಾಷ್ಟ್ರೀಯತಾವಾದದ ಚಳವಳಿಗೆ ಸೇರಿಕೊಂಡರು. ಅವರು ತಮ್ಮನ್ನು ವಿವಿಧ ರಾಷ್ಟ್ರ ನಿರ್ಮಾಣದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ಹೊಸದಾಗಿ ಪ್ರಾರಂಭವಾಗಿದ್ದ, ನ್ಯಾಷನಲ್ ಕಾಲೇಜಿಗೆ ಪ್ರಾಂಶುಪಾಲರಾದರು. ತಮ್ಮ ದೇಶವಾಸಿಗಳಿಗೆ, ರಾಷ್ಟ್ರೀಯ ಶಿಕ್ಷಣವೆಂಬ ಒಂದು ಹೊಸ ಧ್ಯೇಯವನ್ನೇ ಮುಂದಿಟ್ಟರು. ಆದರೆ ಆ ಕಾಲೇಜಿನ ಅಧಿಕಾರಿಗಳು ಯೂರೋಪಿಯನ್ ಪದ್ಧತಿಯ ಶಿಕ್ಷಣವನ್ನು ಬೆಂಬಲಿಸುವವರಾಗಿದ್ದು, ಶ್ರೀ ಅರವಿಂದರ ಪದ್ಧತಿಯನ್ನು ನೇರವಾಗಿ ಸಮರ್ಥಿಸಲಾಗದವರಾದರು. ಅದರ ಫಲವಾಗಿ ಅವರು ಆ ಕೆಲಸವನ್ನು ಬಿಟ್ಟರು.

"ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಚಾಲ್ತಿಯಲ್ಲಿರುವ ಪದ್ಧತಿಯು ಎಂಥದ್ದು ಎಂದರೆ ಅದು ಮನುಷ್ಯನ ಮನೋವಿಜ್ಞಾನವನ್ನೇ ಕಡೆಗಾಣಿಸುವಂಥದ್ದಾಗಿದೆ. ಮತ್ತು ಲೆಕ್ಕವಿಲ್ಲದಷ್ಟು ಮಾಹಿತಿಗಳನ್ನು ಚಿಕ್ಕ ಚಿಕ್ಕ ಪೊಟ್ಟಣಗಳಲ್ಲಿ ಹುಷಾರಾಗಿ ತುಂಬಿಸಿ, ಕೆಂಪು ರಿಬ್ಬನ್ ಕಟ್ಟಿ, ಶ್ರಮಪಟ್ಟು ಮನಸ್ಸಿನಲ್ಲಿ ತುರುಕುತ್ತಾರೆ. ಆ ತುರುಕುವ

೬. ಅವರು ಶ್ರೀ ಭೂಪಾಲ್ ಚಂದ್ರಬೋಸ್‌ರ ಮಗಳಾಗಿದ್ದ ಶ್ರೀಮತಿ ಮೃಣಾಲಿನಿ ಎಂಬಾಕೆಯನ್ನು ೧೯೦೧ರಲ್ಲಿ ಸಾಂಪ್ರದಾಯಿಕವಾಗಿಯೇ ಮದುವೆಯಾಗಿದ್ದರು. ಆದರೆ ಅವರಿಗೆ ಪ್ರಾಪಂಚಿಕ ಜೀವನದ ಅರಿವೇ ಇರಲಿಲ್ಲ. ಅವರ ಇಡೀ ಜೀವನವು ಭಗವಂತ ಮತ್ತು ಮಾನವತೆಗಾಗಿ ಮೀಸಲಾಗಿತ್ತು.



ರೀತಿಯಲ್ಲಿ ಬಳಸುವ ವಿಧಾನಗಳಂತೂ, ಮನುಷ್ಯನು ಅರಗಿಸಿಕೊಂಡು ಸೃಷ್ಟಿಸುವ ರೀತಿ ಮತ್ತು ಬುದ್ಧಿವಂತಿಕೆ, ಮನುಷ್ಯತ್ವ ಹಾಗೂ ಉತ್ಸಾಹಗಳನ್ನು ಬೆಳೆಸುವ ಸಹಜ ಧೀಶಕ್ತಿಯನ್ನೇ ಕೆಡಿಸುತ್ತವೆ ಅಥವಾ ಕ್ಷೀಣಿಸುವಂತೆ ಮಾಡುತ್ತವೆ.

ಇದೇನೂ ಹದಿನೆಂಟನೆಯ ಶತಮಾನದ ಭಾರತವಲ್ಲ. ಆಗ ಭಾರತವು, ತನ್ನ ನೈತಿಕ ಮತ್ತು ಪ್ರಾಜ್ಞ ಕೊರತೆಗಳಿಂದಾಗಿ ತನ್ನನ್ನೇ ವಿದೇಶೀಯರ ಸ್ವಾಧೀನಕ್ಕೆ ಒಪ್ಪಿಸಿಕೊಂಡಿತು. ಅದನ್ನೀಗ ನಾವು ಸರಿಪಡಿಸಬೇಕು. ಆದರೆ, ಪುರಾತನ ಹಾಗೂ ಶಕ್ತಿಯುತ ಭಾರತದ ಸ್ಫೂರ್ತಿ, ನೀತಿಗಳು ಮತ್ತು ವಿಧಾನಗಳನ್ನು ಇನ್ನೂ ಹೆಚ್ಚಿನ ಪ್ರಭಾವಪೂರ್ಣ ರೀತಿಯಲ್ಲಿ ಮತ್ತು ಹೆಚ್ಚು ಆಧುನಿಕವಾದ, ವ್ಯವಸ್ಥೆಯಿಂದ ಬಳಸಿಕೊಳ್ಳಬೇಕು. "ಅದರ ಗುಟ್ಟೇನು?" ಎಂದು ಪ್ರಶ್ನಿಸುತ್ತಾ ಅವರು, "ನಾವು ರಾಮಾಯಣ ಮತ್ತು ಮಹಾಭಾರತದಲ್ಲಿ ಕಾಣುವ ಆ ದೈತ್ಯಕಾಯದ ಬುದ್ಧಿಮತ್ತತೆ, ಆಧ್ಯಾತ್ಮಿಕತೆ, ಮತ್ತು ಮನುಷ್ಯಾತೀತ ನೈತಿಕ ಶಕ್ತಿಯ ಲಯಬದ್ಧ ಮಿಡಿತಗಳು ನಮ್ಮ ಪುರಾತನ ಜೀವನಕ್ರಮದಲ್ಲಿ ಭಾರತದ ಅತ್ಯುತ್ತಮ ಕಾವ್ಯ, ಕಲೆ, ಮೂರ್ತಿಶಿಲ್ಪಗಳಲ್ಲಿ ತುಡಿಯುತ್ತಿರುವುದರ ಗುಟ್ಟೇನು?" ಎಂದೂ ಕೇಳಿ, ಅವರೇ "ನಾವು ಅವರ ಯಶಸ್ಸಿನ ಗುಟ್ಟನ್ನು, ಮಾನವನ ನೈತಿಕ ಶಕ್ತಿಯ ಅದ್ಭುತ ಜ್ಞಾನದಿಂದ ಮತ್ತು ಬೌದ್ಧಿಕ ತರಬೇತಿ ಹಾಗೂ ನಿರ್ಮಾಣದ ವಿಧಾನಗಳ ಸೂಕ್ಷ್ಮ ಬಳಕೆಗಳಿಂದ ಅರಿತುಕೊಳ್ಳೋಣ" ಎಂದು ಉತ್ತರಿಸಿದ್ದಾರೆ. "ಹಿಂದಿನ ಆರ್ಯಪದ್ಧತಿಯ ಮೂಲದಲ್ಲಿ, ಬ್ರಹ್ಮಚರ್ಯದ ಬಹಳ ಮುಖ್ಯವಾದ ಶಿಸ್ತುಕ್ರಮವಿದೆ.[೭] ನಾವು ಅದನ್ನು ಹೆಚ್ಚಿಸಿ, ನಮ್ಮ ದೇಹದಲ್ಲಿ ಅಡಗಿರುವ ಶಕ್ತಿಯನ್ನು ಉತ್ಕೃಷ್ಟಗೊಳಿಸಿದರೆ, ನಮ್ಮ ದೇಹ, ಹೃದಯ, ಮನಸ್ಸು ಮತ್ತು ಆತ್ಮವನ್ನು ಅಷ್ಟೇ ಚೆನ್ನಾಗಿ ಅಭಿವೃದ್ಧಿಗೊಳಿಸಬಹುದು.

ನ್ಯಾಷನಲ್ ಕಾಲೇಜಿನ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಶ್ರೀ ಅರವಿಂದರು ಶ್ರೀ ಬಿಪಿನ್ ಚಂದ್ರಪಾಲ್ ಎಂಬುವವರು ಪ್ರಾರಂಭಿಸಿದ್ದ "ವಂದೇ ಮಾತರಂ" ಎಂಬ ಪತ್ರಿಕೆಯ ಸಂಪಾದಕ ವರ್ಗಕ್ಕೆ ಸೇರಿಕೊಂಡರು ಮತ್ತು ಅದಕ್ಕಾಗಿ ಅತ್ಯುತ್ತಮ ಲೇಖನಗಳು ಸಾಕಷ್ಟನ್ನು ಬರೆದರು. ಅವರ ರಾಷ್ಟ್ರೀಯತೆಯ ಧರ್ಮ ಅಥವಾ ಜಾತಿಯ ಸ್ಫೂರ್ತಿಯುಕ್ತ ಉಜ್ವಲ ನಿರೂಪಣೆ, ಮಧ್ಯಮ ಬಲದವರ ಪುಕ್ಕಲು ಪ್ರಾರ್ಥನೆ ಮತ್ತು ಅಹವಾಲು ಸಲ್ಲಿಸುವ ನಿಯಮದ ಬಗ್ಗೆಯ ಅವರ ತೀಕ್ಷ್ಣವಾದ ವಿಮರ್ಶೆ; ಲೂಟಿ ಮಾಡುವ ಬ್ರಿಟಿಷ್ ಅಧಿಕಾರಿವರ್ಗದವರ ಉಕ್ಕಿನಂಥ ರಚನಾಕ್ರಮದ ಬಗ್ಗೆ ಅವರ ಪಟ್ಟುಹಿಡಿದ ಬೈಗಳ ಸುರಿಮಳೆ, ಎಲ್ಲವೂ ಬಂಗಾಳವೊಂದನ್ನೇ

೭. ಬ್ರಹ್ಮಚರ್ಯವು ಏಕಾಗ್ರತೆಗೆ ಸಹಾಯಕ ಮತ್ತು ಏಕಾಗ್ರತೆಯೇ ಜೀವನದ ಎಲ್ಲಾ ಹಾದಿಗಳ ವಿಜಯಕ್ಕೆ ಅತ್ಯಾವಶ್ಯಕವಾದುದು.

ಅಲ್ಲದೆ, ಇಡೀ ಭಾರತವನ್ನು ವಿದ್ಯುದೀಕರಿಸಿತು. ಇಡೀ ದೇಶದಲ್ಲಿ ಅಂಥ ಪವಿತ್ರೀಕರಿಸುವ ಚೈತನ್ಯದ ಮಾತನ್ನಾಡಿದ ಬೇರೆ ಪತ್ರಿಕೆಯೇ ಇರಲಿಲ್ಲ. ಜೊತೆಗೆ ಒಬ್ಬ ಧರ್ಮೋಪದೇಶಕರ ಮತ್ತು ಆದಿಶೋಧಕರಂಥ ಘಣಘಣಿಸುವ ರೀತಿಯಲ್ಲಿ ಒತ್ತಿಹೇಳುವಂಥ ಮತ್ತೊಂದು ಧ್ವನಿಯೂ ಇರಲಿಲ್ಲ. ಅವರು ಪೂರ್ಣವಾದ ಮತ್ತು ಅಪರಿಮಿತವಾದ ಸ್ವಾತಂತ್ರ್ಯವನ್ನು, ರಾಷ್ಟ್ರೀಯ ಚಳವಳಿಯ ಗುರಿ ಎಂದು ಉಪದೇಶಿಸಿದರು ಮತ್ತು ಹೆಚ್ಚುತ್ತಲೇ ಇರುವ ಅಸಹಕಾರ ಮತ್ತು ರಾಷ್ಟ್ರೀಯ ಪ್ರತಿಭಟನೆಯು, ವಿದೇಶೀ ಸರ್ಕಾರ ನಡೆಸುವ ರಾಜ್ಯಾಡಳಿತವನ್ನು ಕಷ್ಟತರದ್ದಾಗಿಸುತ್ತದೆ ಅಥವಾ ಕಡೆಗೆ ಅಸಾಧ್ಯವಾಗಿಸುತ್ತದೆ. ಒಂದು ಸಾರ್ವಜನಿಕ ತುಮುಲವು, ತಡೆಯನ್ನು ಅಳಿಸಿಹಾಕಬಹುದು ಮತ್ತು ಕಟ್ಟಕಡೆಗೆ ಆವಶ್ಯಕತೆ ಇದ್ದಲ್ಲಿ, ಇಡೀ ದೇಶದಲ್ಲೇ ಒಂದು ತಡೆಗಟ್ಟಿಲ್ಲದ ದಂಗೆಯನ್ನು ಉಂಟುಮಾಡಬಹುದು" ಎಂದರು. ಅವರ ಕೆಲಸದ ರೀತಿಯಲ್ಲಿ ಬ್ರಿಟಿಷರ ವ್ಯಾಪಾರವನ್ನು ಬಹಿಷ್ಕರಿಸುವುದು, ಸರ್ಕಾರದ ಶಿಕ್ಷಣ ಸಂಸ್ಥೆಗಳನ್ನು ರಾಷ್ಟ್ರೀಯ ಶಾಲೆಗಳಾಗಿ ಬದಲಾಯಿಸುವುದು, ಸಾಧಾರಣವಾದ ನ್ಯಾಯಾಲಯಗಳನ್ನು ಅವಲಂಬಿಸಿರುವುದಕ್ಕೆ ಬದಲಾಗಿ, ಜನರು ಮೊರೆಹೋಗಬಹುದಾದ ಪಂಚಾಯತಿ ತೀರ್ಮಾನದ ನ್ಯಾಯಾಲಯಗಳ ಸೃಷ್ಟಿ, ಸಾರ್ವಜನಿಕ ಬಂಡಾಯದ ಸೈನ್ಯಕ್ಕೆ ಕೇಂದ್ರ ಭಾಗವಾಗಿರಲು ಪ್ರತಿಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುವ ವ್ಯಕ್ತಿಗಳ (ಸ್ವಯಂಸೇವಕರ) ಸೇನಾಬಲದ ಸೃಷ್ಟಿ ಇತ್ಯಾದಿ ಎಲ್ಲವೂ ಸೇರಿದ್ದವು. ಅವರು "ಸಹಕಾರವಿಲ್ಲ", "ಹಿಡಿತವಿಲ್ಲ" ಎಂದು ಕರೆದಿದ್ದ ಅಸಹಕಾರದ ಬಗ್ಗೆ ಉಪದೇಶಿಸಿದ್ದನ್ನು ನೆನೆಸಿಕೊಳ್ಳುವುದಂತೂ ಕುತೂಹಲಕಾರಿಯಾಗಿರುತ್ತದೆ.[೮] ಆದರೆ ಅವರಿಗೆ ಅಹಿಂಸಾ ಸಿದ್ಧಾಂತದ ಬಗ್ಗೆ, (ಹಿಂಸೆಗೆ ಎಡೆಗೊಡದೆ ರಾಜಕೀಯ ಬದಲಾವಣೆಗಳನ್ನು ಸಾಧಿಸುವ ತತ್ವ) ನಂಬಿಕೆ ಇರಲಿಲ್ಲ. ಅವರ ರಾಜಕೀಯ ತತ್ವವು ಕೆಲವು ವಿಷಯಗಳಲ್ಲಿ ತಿಲಕರದಂತಹದೇ ಆಗಿತ್ತು. ಅರವಿಂದರು ಬರೋಡದಲ್ಲಿದ್ದ ದಿನಗಳಲ್ಲಿ, ತಿಲಕರೊಂದಿಗೆ ಆತ್ಮೀಯ ಸಂಬಂಧ ಬೆಳೆಸಿಕೊಂಡಿದ್ದರು.

ಶ್ರೀ ಅರವಿಂದರ ರಾಜಕೀಯ ಜೀವನವು, ಒಂದು ಸುಳ್ಳು ಅಪವಾದವನ್ನು ಹೊರಸಿ ಅವರನ್ನು ಒಂದು ವರ್ಷದವರೆಗೆ ಅಲೀಪುರ್ ಬಂದೀಖಾನೆಯಲ್ಲಿ ಬಂಧನದಲ್ಲಿ ಇರಿಸಿದ್ದುದರಿಂದಾಗಿ, ಕಡಿಮೆ ಆಯಿತು. ಈ ಶಿಕ್ಷೆಯು ದೇವರೇ ಕಳುಹಿಸಿದಂತಾಗಿತ್ತು. ಅವರಿಗೆ ತಮ್ಮ ಜೈಲು ಖಾನೆಯ ಒಂಟಿತನದಲ್ಲಿ ಭಗವದ್ದರ್ಶನ ಆಯಿತು ಮತ್ತು ಅವರ ಜೀವನದ ಗುರಿಯ ಬಗ್ಗೆ, ಒಂದು ಸ್ಪಷ್ಟವಾದ ಅಂತರ್ಬೋಧೆಯ ಅನುಗ್ರಹವಾಯಿತು. ಅವರ ಬಿಡುಗಡೆ ಆದ ನಂತರ, ಎಂದರೆ

೮. ಶ್ರೀ ಅರೋಬಿಂದೋ ಆನ್ "ಹಿಮ್‌ಸೆಲ್ಫ್"



ಸಿ. ಆರ್. ದಾಸ್ ಅವರ ಉತ್ತಮ ಧರ್ಮನಿಷ್ಠವಾದದಿಂದಾಗಿ ಬಿಡುಗಡೆಯಾದಾಗ ಶ್ರೀ ಅರವಿಂದರು ತಮ್ಮ ಉತ್ತರ ಪರ ಭಾಷಣದಲ್ಲಿ "ಸನಾತನ ಧರ್ಮವು ಜೀವನವೇ ಆಗಿದೆ. ಅದರಲ್ಲಿ ಜೀವಿಸಿದ್ದಕ್ಕಿಂತ ಹೆಚ್ಚಿಗೆ ನಂಬುವಂಥದ್ದಿಲ್ಲ. ಮಾನವರ ಮುಕ್ತಿಗಾಗಿ ಹಿಂದಿನಿಂದ ಈ ಪರ್ಯಾಯ ದ್ವೀಪದ ಏಕಾಂತದಲ್ಲಿ ಧರ್ಮವು ಮಮತೆಯಿಂದ ಪೋಷಿಸಲ್ಪಟ್ಟಿದೆ. ಭಾರತವು ಉತ್ಥಾನ ಹೊಂದುತ್ತಿದೆ ಎಂದು ಧರ್ಮಕ್ಕೆ ಹೇಳಿದಂತಿದೆ. ಅವಳು ಶಾಶ್ವತ ಜ್ಯೋತಿಯನ್ನು ವಿಶ್ವದಾದ್ಯಂತ ಪಸರಿಸಲು ಏಳುತ್ತಿದ್ದಾಳೆ. ಭಾರತವು ಹಿಂದಿನಿಂದಲೂ ಮಾನವೀಯತೆಗಾಗಿ ಅಸಾಮಾನ್ಯಳಾದಳೇ ಹೊರತು, ತನಗಾಗಿ ಅಲ್ಲ," ಎಂದರು.[೯] ಅವರಿಗಿಂತ ಮುಂಚೆಯಾಗಲಿ, ಅಥವಾ ನಂತರವಾಗಲಿ ಭಾರತದ ಚಾರಿತ್ರಿಕ ಜೀವಿತೋದ್ದೇಶದ ಆಧ್ಯಾತ್ಮಿಕ ಸತ್ಯತೆಯನ್ನು ಯಾರೂ ಅವರಷ್ಟು ಆಳವಾಗಿ ಕಂಡಿಲ್ಲ ಮತ್ತು ಅವರಂತೆ, ಬೇರೆ ಯಾರೂ ಅದರ ನಿಷ್ಕಳಂಕ ಸಾರ್ಥಕತೆಗೆ ಮಾರ್ಗವನ್ನು ತೋರಿಸಿಲ್ಲ. ಭಾರತದ ಇಂದಿನ ಯುವಕರು ಎಂದರೆ ಪಾಶ್ಚಾತ್ಯ ದೇಶದ ಪ್ರಾಪಂಚಿಕ ನಾಗರೀಕತೆಯ ಕಣ್ಕಟ್ಟಿಗೆ ದಿಗ್ಭ್ರಮೆಗೊಂಡವರು ಮತ್ತು ಅದರ ಬಾಹ್ಯದ ಕಾಲಕ್ಕೆ ತಕ್ಕ ನಡೆಯ ವಿಚಾರ ಪರಂಪರೆಯಿಂದ ಸುಲಭವಾಗಿ ದಾರಿ ತಪ್ಪುವವರು ಎಲ್ಲರೂ ಶ್ರೀ ಅರವಿಂದರು ಅವರಿಗಾಗಿ ಹೇಳಿರುವುದನ್ನು ಕೇಳಿಸಿಕೊಳ್ಳಬೇಕು. "ಮೊದಲು ಭಾರತೀಯರಾಗಿ ನಿಮ್ಮ ಹಿಂದಿನ ತಲೆಮಾರಿನ ಪಿತ್ರಾರ್ಜಿತ ಸ್ವತ್ತನ್ನು ಪಡೆದುಕೊಳ್ಳಿ. ಆರ್ಯರ ಚಿಂತನೆ, ಶಿಸ್ತು, ಸ್ಥೈರ್ಯ ಮತ್ತು ಅವರ ಬದುಕಿನ ರೀತಿಯನ್ನು ಮರಳಿ ಪಡೆಯಿರಿ. ವೇದಾಂತ, ಗೀತೆ, ಯೋಗಗಳ ಪುನರ್ಲಾಭ ಪಡೆಯಿರಿ. ಅವುಗಳನ್ನು ಕೇವಲ ನಿಮ್ಮ ಭಾವನೆ ಹಾಗೂ ವಿಚಾರವಂತಿಕೆಯಲ್ಲಿ ಪಡೆಯದೆ ನಿಮ್ಮ ಜೀವನಗಳಲ್ಲಿ ಮತ್ತೆ ಹೊಂದಿಸಿಕೊಳ್ಳಿ. ಅವುಗಳ ಧ್ಯೇಯಕ್ಕಾಗಿ ಬದುಕಿ. ಆಗ ನೀವು ಉತ್ತಮರು, ಬಲಶಾಲಿಗಳು, ಪ್ರಭಾವ ಬೀರುವವರು ಅಲ್ಲದೆ, ಅಜೇಯರು ಮತ್ತು ಆತಂಕರಹಿತರೂ ಆಗುವಿರಿ. ಚೈತನ್ಯದಲ್ಲಿ ಶಕ್ತಿಯು ಶಾಶ್ವತವಾಗಿ ಇರುತ್ತದೆ. ನಿಮ್ಮ ರಾಜಧಾನಿಯನ್ನು, ಎಂದರೆ ಅಂತರಾಳದ ಸ್ವರಾಜ್ಯವನ್ನು ನೀವು ಗೆದ್ದುಕೊಳ್ಳಬೇಕು. ಅಲ್ಲಿ ಮಾತೆ ಇರುತ್ತಾಳೆ. ಅವಳು ಪೂಜೆಗಾಗಿ ಕಾಯುತ್ತಿದ್ದು, ನಿಮಗೆ ಶಕ್ತಿಯನ್ನು ನೀಡಲೆಂದಿದ್ದಾಳೆ. ಅವಳಲ್ಲಿ ಶ್ರದ್ಧೆ ಇಡಿ. ಅವಳನ್ನು ಸೇವಿಸಿ. ನಿಮ್ಮ ಸುಹೃದ್ಭಾವಗಳನ್ನು ಅವಳದರಲ್ಲಿ ತಲ್ಲೀನರಾಗಿಸಿ..." ಈ ಮಾತುಗಳು

೯. "ಶಾಂತಿಯು ಉತ್ತಮ ಧ್ಯೇಯದ ಒಂದು ಭಾಗ. ಆದರೆ ಅದು ತನ್ನ ಮೂಲದಲ್ಲಿ ಆಧ್ಯಾತ್ಮಿಕವಾಗಿರಬೇಕು. ಅಥವಾ ಕಡಿಮೆ ಎಂದರೆ ವೈಜ್ಞಾನಿಕವಾಗಿರಬೇಕು. ಮಾನವನ ಪ್ರಕೃತಿಯಲ್ಲಿ ಯಾವ ಬದಲಾವಣೆಯೂ ಇಲ್ಲದೆ ಅದೆಂದಿಗೂ ಕಡೆಯ ತೀರ್ಮಾನಕ್ಕೆ ಬರುವುದಿಲ್ಲ. ಅದನ್ನು ಬೇರೆ ಯಾವುದಾದರೂ ಆಧಾರದ ಮೇಲೆ ಪ್ರಯತ್ನಿಸಿದರೆ (ನೀತಿಯ ಮೂಲತತ್ವ ಅಥವಾ ಅಹಿಂಸೆಯ ವೇದವಾಕ್ಯ ಅಥವಾ ಮತ್ಯಾವುದಾದರೂ) ಅದು ವ್ಯರ್ಥವಾಗುತ್ತದೆ ಮತ್ತು ಮೊದಲಿನ ಕೆಟ್ಟ ಸ್ಥಿತಿಗೆ ಇಳಿಯುವ ಸಂಭವವಿರುತ್ತದೆ" ಶ್ರೀ ಅರೋಬಿಂದೋ ಆನ್ ಹಿಮ್‌ಸೆಲ್ಫ್.

ಭಾರತೀಯ ಯುವಕರ ಹೃದಯಗಳಲ್ಲಿಳಿಯಲಿ. ಅವೆಲ್ಲವೂ ಅವರ ಇಷ್ಟಮಂತ್ರಗಳಾಗಲಿ. ಭಾರತದ ಭವಿಷ್ಯ ಹಿಂದಿನ ಘನತೆಗಿಂತ ಹೆಚ್ಚು ಶೋಭಿಸುತ್ತದೆ ಮತ್ತು ಭಾರತ ಮತ್ತೊಮ್ಮೆ ವಿಶ್ವದ ಜ್ಯೋತಿಯಾಗಿ ಕಂಗೊಳಿಸುತ್ತದೆಯಾದರೆ ಆಗ ಪ್ರಪಂಚವು, ಒಂದು ದಿವ್ಯ ಜನಾಂಗದ ಸಂತೃಪ್ತ ನೆಲೆಯಾಗುತ್ತದೆ.[೧೦]

ಶ್ರೀ ಅರವಿಂದರು ತಮ್ಮ ಉತ್ತರಪರ ಭಾಷಣದಲ್ಲಿ, "ನಾನು ನಡೆಯುತ್ತಿದ್ದಾಗ ಪರಮಾತ್ಮನ ಶಕ್ತಿ ನನ್ನಲ್ಲಿ ಹೊಕ್ಕಿತು. ಇತರ ಪುರುಷರಿಂದ ನನ್ನನ್ನು ದೂರ ಇಟ್ಟಿದ್ದರಾಗಿ ಆ ಜೈಲನ್ನು ನೋಡಿದೆ. ನಾನು ಬಂಧಿಸಲ್ಪಟ್ಟಿದ್ದುದು ಆ ಎತ್ತರದ ಗೋಡೆಗಳಿಂದ ಅಲ್ಲವಾಗಿತ್ತು. ಇಲ್ಲ! ವಾಸುದೇವನು ನನ್ನನ್ನು ಬಳಸಿದ್ದನು. ನನ್ನ ಜೇಲುಕೋಣೆಯ ಎದುರಿನಲ್ಲಿದ್ದ ಮರದ ಕೊಂಬೆಗಳ ಕೆಳಗೆ ನಡೆದಾಡಿದೆ. ಆದರೆ ಅದು ಮರವೇ ಆಗಿರಲಿಲ್ಲ. ಅವನು ವಾಸುದೇವನಾಗಿದ್ದನೆಂದು ನಾನು ಅರಿತೆ. ಅಲ್ಲಿ ಶ್ರೀಕೃಷ್ಣನೇ ನಿಂತಿದ್ದು ನನ್ನ ಮೇಲೆ ನೆರಳನ್ನುಂಟುಮಾಡಿದ್ದನು. ನಾನು ನನ್ನ ಬಂದೀಖಾನೆಯ ಸರಳುಗಳನ್ನು ನೋಡಿದೆ.... ಆಗಲೂ ಮತ್ತೆ ನಾನು ವಾಸುದೇವನನ್ನೇ ಕಂಡೆ. ನನ್ನನ್ನು ಕಾಯುತ್ತಿದ್ದವನು ಮತ್ತು ಕಾವಲು ಸಿಪಾಯಿ ಆಗಿದ್ದವನೂ ನಾರಾಯಣನೇ; ನಾನು ನನ್ನ ಹಗ್ಗದ ಮಂಚದ ಮೇಲೆ ಹಾಸಿದ್ದ, ಒರಟು ಕಂಬಳಿ ಶ್ರೀಕೃಷ್ಣನ ತೋಳುಗಳಾಗಿ, ನನ್ನನ್ನು ಬಳಸಿದ್ದವು, ನನ್ನ ಸ್ನೇಹಿತ ಹಾಗೂ ಪ್ರೇಮಿಯ ಕೈಗಳು... ಎಂದರು. ಅವರನ್ನು ವಿಚಾರಣೆಗಾಗಿ ನ್ಯಾಯಾಲಯಕ್ಕೆ ಕರೆದೊಯ್ದಾಗಲೂ, ಅವರಿಗೆ ಅದೇ ದೃಶ್ಯ ಹಾಗೂ ಅನುಭವವಾಗಿತ್ತು... ಮತ್ತೆ, "ನಾನು ನೋಡಿದೆ. ನಾನು ನೋಡಿದಂತ ಮ್ಯಾಜಿಸ್ಟ್ರೇಟನಾಗಿರದೆ ವಾಸುದೇವನಾಗಿದ್ದ. ಆ ಬೆಂಚಿನ ಮೇಲೆ ಕುಳಿತಿದ್ದವನು ನಾರಾಯಣನಾಗಿದ್ದ. ಕಡೆಗೆ ಕಾನೂನಿನ ಕ್ರಮ ತೆಗೆದುಕೊಳ್ಳುವ ವಕೀಲರತ್ತ ನೋಡಿದ ಅವರು ಫಿರ್ಯಾದಿ ಪಕ್ಷದ ವಕೀಲರಾಗಿರಲಿಲ್ಲ. ಅಲ್ಲಿ ಕುಳಿತಿದ್ದವನು ಶ್ರೀ ಕೃಷ್ಣ... ನನ್ನ ಪ್ರೇಮಿ, ಮತ್ತು ನನ್ನ ಸ್ನೇಹಿತ... ಅಲ್ಲಿ ಕುಳಿತು ಮುಗುಳ್ನಗುತ್ತಿದ್ದದ್ದು.." ಎಂದರು.

ಅವರ ಶೀಘ್ರವಾಗಿ ಬೆಳೆಯುತ್ತಿದ್ದ ಆಧ್ಯಾತ್ಮಿಕ ಜ್ಞಾನದ ತೇಜಸ್ಸಿನಲ್ಲಿ, ಶ್ರೀ ಅರವಿಂದರು, ವಿಶದವಾಗಿ ಕಂಡಿದ್ದು, "ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಕಟ್ಟಿಟ್ಟದ್ದು" ಎಂದೇ. ರಕ್ತಪಾತವಿಲ್ಲದೆ ಅದನ್ನು ಪಡೆಯಬಹುದಾದಂಥ ರೀತಿಯನ್ನು ದೇಶಕ್ಕೆ ಕೃಷ್ಣನೇ ದಯಪಾಲಿಸಿದ್ದನು ಎಂತಲೂ ಕಂಡರು. ಅವರೆದುರಿಗೆ ಒಂದು ಅತ್ಯಂತ ಮುಖ್ಯವಾದ ಕೆಲಸಕ್ಕೆ ಬೇಕಾಗಿದ್ದ ವಿಶಾಲ ಕ್ಷೇತ್ರವು ತೆರೆದುಕೊಳ್ಳುತ್ತಿತ್ತು. ಆ ಕೆಲಸವು ದೇಶದ ಸೇವೆ ಮತ್ತು ಮುಕ್ತಿಯನ್ನು ಮೀರಿದ್ದಾಗಿತ್ತು. ಅದರ ಗುರಿ ನಿಶ್ಚಿತವಾಗಿತ್ತು.

---

೧೦. "ದಿ ಐಡಿಯಲ್ ಆಫ್ ಹ್ಯೂಮನ್ ಯೂನಿಟಿ" ಎಂಬ ಪುಸ್ತಕದಲ್ಲಿ ಶ್ರೀ ಅರವಿಂದರು ಐಕ್ಯತೆಯ ಸಮಸ್ಯೆಗಳ ವಿವಿಧ ರೂಪಗಳನ್ನು ಸಾಕಷ್ಟು ದೀರ್ಘವಾಗಿ ಚರ್ಚಿಸಿದ್ದಾರೆ.



ಅದು, ಮಾನವೀಯತೆಯ ಪೂರ್ಣಭವಿಷ್ಯದ ಬಗ್ಗೆ, ವಿಶ್ವಾದ್ಯಂತ ತನ್ನ ನಡವಳಿಕೆ ಮತ್ತು ಆಸಕ್ತಿವಹಿಸುವುದಾಗಿತ್ತು.[೧೧]

ಅವರ ಆಧ್ಯಾತ್ಮಿಕ ಅನುಭವಗಳು ತಮ್ಮ ಮಹತ್ವದಲ್ಲಿ ಮತ್ತು ವಿಶ್ವೈಕ್ಯವಾದದಲ್ಲಿ, ಪ್ರಗತಿ ಹೊಂದುತ್ತಿದ್ದು, ಅವರಿಗೆ ಹಿಂದಿನ ಎಷ್ಟೋ ಶತಮಾನಗಳಿಂದ ವಿಚಾರಮಾಡದಿದ್ದ ಆತ್ಮದ ಕ್ಷೇತ್ರಗಳ ಬಗ್ಗೆ ಅರಿವು ಮೂಡಿಸಿದವು.

ಜೊತೆಗೆ ತಮಗಾಗಿದ್ದ ಎರಡು ಉತ್ತಮ ಅರಿವುಗಳಲ್ಲಿ ಒಂದು ನಿರೂಪಿಸಲಾಗದ ಬ್ರಹ್ಮನದಾಗಿತ್ತು ಮತ್ತು ಎಲ್ಲ ಜೀವಿಗಳಲ್ಲಿಯೂ ವಿಷಯಗಳಲ್ಲಿಯೂ. ಮತ್ತು ಸಂಗತಿಗಳಲ್ಲಿಯೂ ಇರುವ ನಾರಾಯಣನದಾಗಿತ್ತು. ಅವು ಪರಮಶಕ್ತನ ಪೂರ್ಣ ಅರಿವಿಗೆ ಬೇಕಿದ್ದ, ಅನಿವಾರ್ಯ ಉಪೋದ್ಘಾತವಾಗಿತ್ತು ಮತ್ತು ಧೃವಸಂಬಂಧಿ ಅಸ್ತಿತ್ವ, ಆತ್ಮ ಮತ್ತು ಭೌತವಸ್ತುಗಳ ಧೃವೀಯ ಮಿತಿಗಳನ್ನು ಒಂದುಗೂಡಿಸಿ, ಸಾಂಗತ್ಯ ಉಂಟುಮಾಡುವ ಪರಿಪೂರ್ಣ ಅರಿವಾಗಿತ್ತು.

ದೈವದತ್ತವಾದ ಹಠಾತ್ತಾದ ಆದೇಶವೊಂದು, ಶ್ರೀ ಅರವಿಂದರನ್ನು ಎಂದೆಂದಿಗೂ ಬಂಗಾಳದೇಶವನ್ನು ತೊರೆಯುವಂತೆ ಮಾಡಿತು. ಅವರು ಪಾಂಡಿಚೇರಿಗೆ ಬಂದರು. ಅಲ್ಲಿಗೆ ಅರವಿಂದರನ್ನು ಹುಡಿಕಿಕೊಂಡು, ದೇಶದ ವಿವಿಧ ಭಾಗಗಳಿಂದ ಆಧ್ಯಾತ್ಮಿಕ ಅಧಿಕಾರ ಬಯಸುವವರು, ಬಂದದ್ದು, ಶ್ರೀಗಳವರ "ಇಂಟೆಗ್ರಲ್ ಯೋಗ[೧೨] ಆಫ್ ಸುಪ್ರಮೆಂಟಲ್ ಟ್ರಾನ್ಸ್‌ಫರ್ಮೇಷನ್" ಕಲಿಯಲಿಕ್ಕೆಂದೇ ಆಗಿತ್ತು.

ರಾಕ್ಷಸನ ಹೆಜ್ಜೆಗಳಂತೆ ಹೆಜ್ಜೆ ಹಾಕಿ ಮುಂದುವರಿಯುತ್ತಿದ್ದ ಶ್ರೀ ಅರವಿಂದರು, ಸೂಪರ್ ಮೈಂಡ್ (ಮನುಷ್ಯಾತೀತ ಮನಸ್ಸು) ಅಥವಾ ಅತ್ಯುನ್ನತ ಸತ್ವದ ಅರಿವಿಗೆ ಏರಿ, ಪ್ರಪಂಚದ ಒಗಟಿಗೆ ಅಂತಿಮ ಉತ್ತರವನ್ನು ಪಡೆದುಕೊಂಡರು. ಅದೇತಕ್ಕೆ ಎಂದರೆ ಭಾರತದ ಆಧ್ಯಾತ್ಮಿಕತೆಯು ವೇದ ಮತ್ತು ಉಪನಿಷತ್ತುಗಳ ಕಾಲದ ನಂತರ ವಿಶಿಷ್ಟವಾದ ಮನಸ್ಸು ಅಥವಾ ಅತ್ಯಂತ ಉಚ್ಚತಮ ಸೃಷ್ಟಿಯ ವಿಜ್ಞಾನದ ಸಮತಲಕ್ಕೆ ಏರಲು ಸಾಧ್ಯವಾಗಿರಲಿಲ್ಲ. ಜೊತೆಗೆ ಪ್ರಪಂಚವೇ ಕಾಲ್ಪನಿಕವಾದದ್ದೆಂದು ಪರಿಗಣಿಸಲಾಗಿತ್ತು. ನಂತರ ಪ್ರಾಕೃತಿಕವಾಗಿಯೇ ಪ್ರಪಂಚವು ಕಾಲ್ಪನಿಕವಾದದ್ದು ಮತ್ತು ಸತ್ವವಿಲ್ಲದ್ದು ಅಥವಾ ಆತ್ಮಕ್ಕೆ ಬೇಕಾದ ಮೋಹಜಾಲ ಎಂದು ಪರಿಗಣಿಸುವ ರಾಷ್ಟ್ರವು, ಜೀವನದಲ್ಲಿ ಸೋಲನ್ನಲ್ಲದೆ ಮತ್ತೇನನ್ನು ತಾನೇ ಅನುಭವಿಸಬಲ್ಲದು! ಭಾರತವು ಜೀವನದಲ್ಲಿ ಸೋತಿತು, ಅವಳ ಸಂಸ್ಕೃತಿ ಕೆಟ್ಟಿತು, ಅವಳ ಚೈತನ್ಯ

---

೧೧. ಶ್ರೀ ಅರೋಬಿಂದೋ ಅಂಡ್ ಹಿಸ್ ಆಶ್ರಮ್.

೧೨. "ಇಂಟೆಗ್ರಲ್ ಯೋಗದ ಬಗ್ಗೆ ವಿಶದವಾಗಿ ಅರಿಯಲು "ಆನ್ ಯೋಗ, ವಾಲ್ಯೂ-೧" ಎಂಬ ಶ್ರೀ ಅರವಿಂದರ ಪುಸ್ತಕ ನೋಡಿ.

ಮಾಸಿತು ಮತ್ತು ಅವಳು ತನ್ನ ಸರಹದ್ದಿನಾಚೆಗಿನ ಪುರುಷತನದ ಅಲೆಮಾರಿ ತಂಡಕ್ಕೆ ಸುಲಭವಾಗಿ ಬಲಿಯಾದಳು.

ತಮ್ಮ ವಿಶಿಷ್ಟವಾದ ಮನಸ್ಸಿನಲ್ಲಿ ಶ್ರೀ ಅರವಿಂದರು ಪ್ರಪಂಚದ ಅರ್ಥ, ಅದೃಷ್ಟ ಮತ್ತು ಪುನರುಜ್ಜೀವನ, ಎಲ್ಲರ ಜೀವನಗಳ ತೊಂದರೆಗಳಿಗೆ ಉತ್ತಮ ಪರಿಹಾರ, ಮತ್ತು ಆತ್ಮವನ್ನು ವಿಷಯದೊಂದಿಗೆ, ಭೂಮಿಯನ್ನು ಸ್ವರ್ಗದೊಂದಿಗೆ ಒಂದುಗೂಡಿಸುವ ಬಗ್ಗೆಯ ಕೀಲಿಕೈ ಪಡೆದುಕೊಂಡರು. ಎಲ್ಲವೂ "ಬ್ರಹ್ಮನ್" ಆದಲ್ಲಿ, ಜೀವನವು ಮಿಥ್ಯಾಭಾವನೆಯಾಗುವುದು ಅಸಾಧ್ಯ. ಅದೂ ಬ್ರಹ್ಮನೇ. ಭೌತವಸ್ತುವೂ ಬ್ರಹ್ಮನೇ. ಉಪನಿಷತ್ತುಗಳ ಋಷಿಗಳ ಪ್ರಕಾರ ಮನಸ್ಸೂ ಬ್ರಹ್ಮನೇ. ಬ್ರಹ್ಮನನ್ನು ವಿಶ್ವದಿಂದಾಚೆಗೆ ಅರಿಯಬೇಕಲ್ಲದೆ, ವಿಶ್ವದಲ್ಲಿಯೂ ಅರಿಯಬೇಕು ಆತ್ಮದಲ್ಲಿ ವಿಷಯದಲ್ಲಿಯೂ ಅರಿಯಬೇಕು. ಭಗವಂತನ ಪ್ರಗತಿಪರ ಸ್ಪಷ್ಟೀಕರಣಕ್ಕೆ ಜೀವನವೇ ಮೈದಾನ.

ಐಹಿಕ ಜೀವನವು, ಒಂದು ಆಮೂಲಾಗ್ರವಾದ ಸ್ವಭಾವ ಪರಿವರ್ತನೆಯನ್ನು ಹೊಂದುವವರೆಗೂ ಮತ್ತು ಇಡೀ ಮನುಷ್ಯ ಜೀವನ ಮತ್ತು ಪ್ರಕೃತಿಗಳನ್ನು ಶ್ರೇಷ್ಠ ಮಾನಸಾತೀತ ಬುದ್ಧಿಗೆ ತೋರಿದಂತೆ ಬದಲಾಯಿಸಿ ಅವು ದಿವ್ಯಪ್ರಕೃತಿ ಹಾಗೂ ದಿವ್ಯಜೀವನಗಳಾಗುವವರೆಗೂ ಭೂಮಿಯಲ್ಲಿನ ಭಗವಂತನ ಮೈದೋರುವಿಕೆಯು ಯಥೋಚಿತವಾಗಿರುವುದು ಸಾಧ್ಯವಿಲ್ಲವಾಗಿತ್ತು. ಅದಕ್ಕಾಗಿ ಅವರು, ಮಾನಸಾತೀತ ಸತ್ಯಪ್ರಜ್ಞೆಯನ್ನು ಕೆಳಕ್ಕಿಳಿಸಿ ವಿಷಯದೊಂದಿಗೆ ಒಂದುಗೂಡಿಸಲೆಂದು, ಮಾತೆಯೊಂದಿಗೆ ದೀರ್ಘವರ್ಷಗಳವರೆಗೆ ಬಿಡುವಿಲ್ಲದ ಧ್ಯಾನದಲ್ಲಿ ಮುಳುಗಿದರು.

೧೯೧೪ನೆಯ ಇಸವಿಯಲ್ಲಿ ಮಾತೆಯವರು ಫ್ರಾನ್ಸ್‌ನಿಂದ ಬಂದರು. ಚೇತನ ಮತ್ತು ಧ್ಯೇಯಗಳೆರಡರಲ್ಲಿಯೂ ಶ್ರೀ ಅರವಿಂದರೊಂದಿಗೆ ತಮ್ಮನ್ನು ಸಮೀಕರಿಸಿಕೊಂಡು ಮಾನಸಾತೀತ ಸ್ಪಷ್ಟೀಕರಣದ ಉತ್ತಮ ಕೆಲಸದಲ್ಲಿ ಜೊತೆಯಾಗಿ, ಕಾರ್ಯ ನಿರ್ವಹಿಸಲು ನಿಶ್ಚಯಿಸಿಕೊಂಡರು. ಅವರು ವಿದ್ವತ್ಪೂರ್ಣ ವಿಷಯಗಳನ್ನು ಒಳಗೊಂಡಿರುವ 'ಆರ್ಯ' ಎಂಬ ಮಾನಸಿಕ ಪತ್ರಿಕೆಯನ್ನು ಪ್ರಾರಂಭಿಸಲು ಮತ್ತು ಸಂಸ್ಕರಿಸಿ ಪ್ರಕಟಿಸಲು ಸಹಾಯಮಾಡಿದರು. ಆದರೆ ಮೊದಲನೆಯ ಮಹಾಯುದ್ಧ ಪ್ರಾರಂಭವಾಯಿತು. ಅವರು ತಮ್ಮ ವ್ಯವಹಾರಗಳನ್ನು ಮುಕ್ತಾಯಗೊಳಿಸಲು ಫ್ರಾನ್ಸಿಗೆ ಹಿಂದಿರುಗಿದ್ದು ಮತ್ತೆ ತಮ್ಮ ಶ್ರೇಯಸ್ಸಿಗಾಗಿಯೇ ಭಾರತಕ್ಕೆ ಹಿಂದಿರುಗಲು ನಿರ್ಧರಿಸಿದರು. ೧೯೨೦ರಲ್ಲಿ ಆಕೆ ವಾಪಸ್ಸು ಬಂದರು. ೧೯೨೬ರಲ್ಲಿ ಶ್ರೀ ಅರವಿಂದರು ತಮ್ಮ ಮಾನಸಾತೀತ ಕಾರ್ಯಕ್ರಮವನ್ನು ಮತ್ತೂ ಹೆಚ್ಚಾಗಿ ಕೇಂದ್ರೀಕರಿಸಿಕೊಳ್ಳಲೆಂದು ಮಾತೆಯವರಿಗೆ ಆಶ್ರಮದ ಇಡೀ ಅಧಿಕಾರವನ್ನು ವಹಿಸಿಕೊಟ್ಟರು. ಆಶ್ರಮದ ತಾಯಿಯ ಸೃಷ್ಟಿಯೇ ಆಗಿತ್ತು. ಅವರೇ ಅದನ್ನು ವಿಸ್ತರಿಸಿದರು ಮತ್ತು ಈಗಿರುವ ಅಗಾಧವಾದ ಸಂಸ್ಥೆಯನ್ನಾಗಿ ವೃದ್ಧಿಸಿದರು. ಆಕೆ



ಶ್ರೀ ಅರವಿಂದರ, "ಇಂಟೆಗ್ರಲ್ ಯೋಗದ" ಅಭ್ಯಾಸವನ್ನು ಮಾಡುವ ಸಾಧಕರಿಗೆ ಗುರುಗಳಾಗಿಯೂ, ಆಧ್ಯಾತ್ಮಿಕ ಮಾರ್ಗದರ್ಶಿಯೂ ಆಗಿದ್ದರು. ೧೯೫೦ರಲ್ಲಿ ಶ್ರೀ ಅರವಿಂದರು ಆತ್ಮೈಕ್ಯರಾದ ನಂತರ, ಮಾತೆಯವರು ಶ್ರೀ ಅರವಿಂದರ ಮತ್ತು ಆಕೆಯ ಉಪದೇಶಗಳನ್ನು ಸ್ಪಷ್ಟಪಡಿಸುವ ವಿದ್ಯೆಯನ್ನು ಹೇಳಿಕೊಡಲೆಂದು "ಶ್ರೀ ಅರೋಬಿಂದೊ ಇಂಟರ್‌ನ್ಯಾಷನಲ್ ಸೆಂಟರ್ ಆಫ್ ಎಜುಕೇಷನ್" ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ಆಕೆ ಭಾರತ ಹಾಗೂ ವಿದೇಶದಲ್ಲಿನ ತನ್ನ ಸಾವಿರಾರು ಮಕ್ಕಳಿಗೆ 'ಮಾತೆ' ಆಗಿದ್ದು, ಎಲ್ಲರನ್ನೂ ಮಾನಸಾತೀತ ದಿವ್ಯತ್ವದ ಆಧಿಪತ್ಯದತ್ತ ಒಯ್ಯುತ್ತಿದ್ದರು.

ಸೃಜನಶೀಲ ಸತ್ಯದ ಅರಿವಿನ ಅವರೋಹಣವು, ಮನುಷ್ಯವರ್ಗಕ್ಕೆ ಮತ್ತು ಒಟ್ಟಿನಲ್ಲಿ ಭೂಮಿಯ ಮೇಲಿನ ಜೀವನಕ್ಕೆ ಶ್ರೀ ಅರವಿಂದರ ಉತ್ತಮೋತ್ತಮ ಪಾರಿತೋಷಕವಾಗಿದೆ. ಇದಕ್ಕೆ ಮುಂಚೆ ವಿಕಸನಕ್ಕೆ ಮಾನವೀಯತೆಯು ಇನ್ನೂ ಪಕ್ವವಾಗಿರಲಿಲ್ಲವಾದ್ದರಿಂದ ಮಾನವ ಜನಾಂಗದ ಇಡೀ ಚರಿತ್ರೆಯಲ್ಲಿ ಎಂದೂ ಯಾರೂ ಪ್ರಯತ್ನಿಸದೆ ಇದ್ದದ್ದನ್ನು, ಅವರು ಸಾಧಿಸಿ ತೋರಿಸಿದ್ದಾರೆ. ದಿವ್ಯ ಜೀವನವನ್ನು ನಡೆಸಲು ಜ್ಞಾನ ಮತ್ತು ಶಾಂತಿಯ ಜೀವನವನ್ನು ನಡೆಸಲು, ಸೃಜನಶೀಲ ಐಕ್ಯತೆ ಮತ್ತು ಸಾಮರಸ್ಯತೆಯಿಂದ ಶೋಭಿಸುವ ಜೀವನವನ್ನು ನಡೆಸಲು ಈಗ ಮನುಷ್ಯನು ಮಾಡಬೇಕಾಗಿರುವುದು ಏನೆಂದರೆ, ಅವನ ಮಾರ್ಗದರ್ಶನಕ್ಕಾಗಿ, ಶ್ರೀ ಅರವಿಂದರು ಅಷ್ಟು ಊಹಾತೀತ ಪ್ರೀತಿಯ ದುಡಿಮೆ ಮತ್ತು ಅನುಕಂಪದಿಂದ ಮಾಡಿರುವ ಕಾಲುದಾರಿಯ ಜಾಡು ಹಿಡಿದು ಹೋಗಬೇಕು. ಈಗ ನಾವು ಧೈರ್ಯವಾಗಿ ಇಡೀ ಮಾನವ ಜೀವನವನ್ನು ಅದರ ಎಲ್ಲಾ ಚಟುವಟಿಕೆಗಳೊಂದಿಗೆ ಸ್ವೀಕರಿಸಿ, ಪಾಶ್ಚಾತ್ಯದೇಶದ ಮಿಡಿಯುತ್ತಿರುವ ಸತ್ವಯುಕ್ತ, ವ್ಯಾವಹಾರಿಕ ಕಾರ್ಯವಿಧಾನದ ಸಂದೇಶವನ್ನು, ಪೂರ್ವಾತ್ಯ ದೇಶದ[೧೩] ದಿವ್ಯಜೀವನದ ಆಧ್ಯಾತ್ಮಿಕವಾಗಿದ್ದರೂ ಕ್ರಿಯಾತ್ಮಕವಾಗಿರುವ ಸಂದೇಶವನ್ನು ಧೈರ್ಯವಾಗಿ ಸ್ವೀಕರಿಸಬಹುದು. ದಿಟ್ಟ ಹೆಜ್ಜೆಗಳನ್ನಿಡುತ್ತಾ ಮಾನವನು, ದಿವ್ಯಾತ್ಮನಾಗುವಂಥ ನೈತಿಕ ಸುಧಾರಣೆಯತ್ತ ಮತ್ತು ಒಂದು ಸುಧಾರಣಾವಾದಿ ಮಾನವ ಸಂಸ್ಥೆಯ ಪುನರ್ರಚನೆಯತ್ತ, ಮುಂದೆ ನಡೆಯಬಹುದು.ಈ ಪರಮಾಣುಯುಗದ ಈ ಭಯಾನಕ ಪಂಥಾಹ್ವಾನವನ್ನು ಎದುರಿಸಲು, ಇದೊಂದೇ ದಾರಿ ಇರುವುದು.

ದಿವ್ಯಜೀವನದ ಧ್ಯೇಯಪರತೆ, ಆಶಾದಾಯಕವಾದ ಆಧ್ಯಾತ್ಮಿಕ ಆದರ್ಶಗಳ

---

೧೩. ಶ್ರೀ ಅರವಿಂದರ "ದಿ ಡಿವೈನ್ ಲೈಫ್" ಪುಸ್ತಕವು, ಎಷ್ಟೋಜನರಿಂದ "ಅವರ ಉತ್ಕೃಷ್ಟ ಕೃತಿ" ಎನ್ನಿಸಿಕೊಂಡಿದೆ. ಅದರಲ್ಲಿ ದಿವ್ಯಜೀವನದ ಬಗ್ಗೆ ಅವರ ವೇದವಾಕ್ಯಗಳು ಮತ್ತು ತತ್ವಶಾಸ್ತ್ರದ ಬಗ್ಗೆಯ ಅವರ ಸಂಪೂರ್ಣವಾದ ವ್ಯಾಖ್ಯಾನಗಳಿವೆ.

ಅನುಷ್ಠಾನಗಳ ಮನೋಭ್ರಾಂತಿ ಅಲ್ಲ. ಅದು ವಿಕಸನದ ನಿಜವಾದ ತರ್ಕವಿಧಾನದಲ್ಲಿ ಅಂತರ್ಗತವಾಗಿದೆ[೧೪]. ಜೀವನವು ಭೌತ ವಸ್ತುವಿನಿಂದ ಮತ್ತು ಮನಸ್ಸು, ಜೀವನದಿಂದ ಹೊರಹೊಮ್ಮಿದ್ದರೆ, ವಿಕಸನದ ಮುನ್ನಡೆಯು, ಪ್ರಜ್ಞೆಯ ಅನುಕ್ರಮದ ಹೊರಹೊಮ್ಮಿಕೆಯಾಗಿದ್ದರೆ ಆಗ ವಿಕಸನವು ನಿಜವಾಗಿಯೂ, ಮನುಷ್ಯನ ಮುಸ್ಸಂಜೆಯ ಮಾನಸಿಕ ಅರಿವಿಗಿಂತ ಕೆಳಗೆ ನಿಲ್ಲುವುದಂತೂ ನಿಜಕ್ಕೂ ಅಸಾಧ್ಯ. ಭೌತವಸ್ತುವಿನಲ್ಲಿ ಸೇರಿಕೊಂಡಿರುವ ವಿಜ್ಞಾನ ಮತ್ತು ಆನಂದಗಳೆರಡೂ, ಇತರ ಪುರಾತನ ಸರಳ ಹಾಗೂ ಪ್ರಮುಖ ತತ್ವಗಳಂತೆ ಸ್ಪಷ್ಟವಾಗಬೇಕು. ಮತ್ತು ಮನುಷ್ಯನು ಎಲ್ಲೆಯಿಲ್ಲದ ಜಾಗ್ರದವಸ್ಥೆಯಲ್ಲಿ, ವಿಶಿಷ್ಟ ಮನಸ್ಸಿನ ಐಕ್ಯತೆ ಮತ್ತು ಆನಂದದಲ್ಲಿ ತನ್ನ ಮನಸ್ಸಿನ ತಡವರಿಸುವ ಅರ್ಧಪಾಂಡಿತ್ಯದಲ್ಲಿ, ಈಗ ಜೀವಿಸುತ್ತಿರುವಂತೆಯೇ, ಜೀವಿಸುವಂತಾಗಬೇಕು. ಮನೋತೀತ ಹೊಸ ಜನಾಂಗವೊಂದು ದಿವ್ಯ ಜೀವನದಲ್ಲಿ ಜೀವಿಸುತ್ತಾ ಭಗವಂತನ ಮಹಿಮೆ ಹಾಗೂ ಸ್ವರ್ಗದ ರಾಜ್ಯವನ್ನು ಸ್ಪಷ್ಟೀಕರಿಸಿದರೆ, ಅದೇ ಶ್ರೀ ಅರವಿಂದರ ಜೀವಾವಧಿಯ ಯೋಗದ ಅಂತಿಮ ಉತ್ಪನ್ನವಾಗುತ್ತದೆ.

* * * *

---

೧೪. ಶ್ರೀ ಅರವಿಂದರ “ಥಿಯರಿ ಆಫ್ ಎವೊಲ್ಯೂಷನ್”ಗಾಗಿ, “ದಿ ಲೈಫ್ ಡಿವೈನ್ ಅಂಡ್ ದಿ ಹ್ಯೂಮನ್ ಸೈಕಲ್” ನೋಡಿ.



## ೭ ಸರೋಜಿನಿ ನಾಯ್ಡು

ಅದ್ವಿತೀಯ ಕವಯಿತ್ರಿ, ಶ್ರದ್ಧಾವಂತ ಮಡದಿ, ಪ್ರೀತಿಯ ತಾಯಿ, ಮೈನವಿರೇಳಿಸುವ ಭಾಷಣಗಾರ್ತಿ, ಸಾಹಿತ್ಯದ ಪ್ರತಿನಿಧಿ, ಎದೆಗುಂದದ ಸ್ವಾತಂತ್ರ್ಯ ಹೋರಾಟಗಾರ್ತಿ ಮತ್ತು ಉತ್ತಮ ರಾಷ್ಟ್ರೀಯ ಮುಂದಾಳು ಹೀಗೆ ಎಲ್ಲವೂ ಆಗಿದ್ದಂಥ ಸರೋಜಿನಿ ನಾಯ್ಡು ಅವರ ಎಂಭತ್ತೆರಡನೆಯ ಜನ್ಮದಿನವು, ಫೆಬ್ರವರಿ ೧೯೬೧ರಲ್ಲಿ ಬಂದಿತ್ತು. ಅವರು ತಮ್ಮ ದೇಶದಾದ್ಯಂತದ ಅಪಾರ ಸ್ನೇಹಿತೆಯರ ವಲಯದಲ್ಲಿ ಎಲ್ಲರಿಗೂ ಅತ್ಯಂತ ಸುಹೃದಯಿಯಾಗಿದ್ದುಕೊಂಡು ಎಲ್ಲರಿಗೂ ‘ಅಕ್ಕ’ನೇ ಆಗಿದ್ದರು.

ಡಾ. ಅಘೋರನಾಥ್ ಚಟ್ಟೋಪಾಧ್ಯಾಯ ಮತ್ತು ವರದ ಸುಂದರಿ ದೇವಿ ಅವರ ಹಿರಿಯ ಪುತ್ರಿಯಾಗಿ ಸರೋಜಿನಿ ಅವರು ೧೮೭೯ನೇ ಇಸವಿಯ ಫೆಬ್ರವರಿ ತಿಂಗಳಿನ ಹದಿಮೂರನೆಯ ತಾರೀಖಿನಂದು ಜನಿಸಿದರು. ಡಾ. ಚಟ್ಟೋಪಾಧ್ಯಾಯರು ಅತ್ಯಂತ ಮೇಧಾವಿ. ಎಡಿನ್‌ಬರೋ ಮತ್ತು ಬಾನ್ ವಿಶ್ವವಿದ್ಯಾಲಯಗಳಿಂದ ಡಾಕ್ಟರ್ ಆಫ್ ಸೈನ್ಸ್ ಪದವಿಯನ್ನು ಪಡೆದುಕೊಂಡಿದ್ದರು. ಸರೋಜಿನಿ ದೇವಿಯವರ ತಾಯಿ ಅತ್ಯಂತ ನಿಷ್ಕಳಂಕ ಹೃದಯದವರೂ, ಸಹಾನುಭೂತಿಯುಕ್ತ ಅರಿವುಳ್ಳವರೂ ಆಗಿದ್ದರಲ್ಲದೆ ಕವಯಿತ್ರಿಯೂ ಆಗಿದ್ದು, ಬೆಂಗಾಲಿ ಭಾಷೆಯಲ್ಲಿ ಸುಂದರವಾದ ಹಾಡುಗಳನ್ನು ರಚಿಸಿದ್ದರು. ಆಕೆ ಒಳ್ಳೆಯ ಗಾಯನಪಟುವೂ ಆಗಿದ್ದರು. ಸರೋಜಿನಿ ಅವರ ವಿದ್ಯಾಭ್ಯಾಸದಲ್ಲಿ ಡಾ. ಚಟ್ಟೋಪಾಧ್ಯಾಯರು ವಿಶೇಷ ಉತ್ಸಾಹ ತೆಗೆದುಕೊಂಡು ಓದಿಸಿದರು. ಅವರಿಗೆ ಎಂಥ ದೊಡ್ಡ ಬಿಳಿ ಗಡ್ಡವಿತ್ತು ಮತ್ತು ಹೋಮರನ ಪಾರ್ಶ್ವನೋಟ (ವ್ಯಕ್ತಿಚಿತ್ರ) ಇತ್ತು ಎಂಬುದನ್ನು ಸರೋಜಿನಿ ವಿವರಿಸುವಾಗ ಹೆಂಚು ಹಾರಿ ಹೋಗುವಂತೆ ಆತ ನಗುತ್ತಿದ್ದರಂತೆ. ಅವರು ಎಲ್ಲಾ ಜಾತಿಯ ವಿದ್ವಾಂಸರನ್ನೂ ತಮ್ಮ ತೋಟದಲ್ಲಿ ಪ್ರತಿದಿನವೂ ಸೇರಿಸಿಕೊಂಡು ಮೆಚ್ಚುಗೆ ಗಳಿಸಲು ಪ್ರಯತ್ನಿಸುತ್ತಿದ್ದರು. ಹೀಗಾಗಿ ಅವರು ಎಲ್ಲಾ ರೀತಿಯ ಜನರನ್ನೂ ಕಂಡಿದ್ದರು ಮತ್ತು ಅತಿ ಶೀಘ್ರವಾಗಿ ಬೃಹತ್ ಹಾಗೂ ವೈವಿಧ್ಯತಾಪೂರ್ಣ ಪ್ರಪಂಚದ ಬಗ್ಗೆ ಅರಿತುಕೊಂಡರು.

ಸರೋಜಿನಿಯವರನ್ನು ಶಾಲೆಗೆ ಸ್ವಲ್ಪ ಮುಂಚಿತವಾಗಿಯೇ ಸೇರಿಸಿದ್ದರು.

ಅತಿ ಶೀಘ್ರವಾಗಿ ಅವರು ಇಂಗ್ಲಿಷ್ ಭಾಷೆಯಲ್ಲಿ ಮಾತನಾಡುವುದನ್ನು ಮತ್ತು ಬರೆಯುವುದನ್ನು ಕಲಿತರು.

ಆಕೆಗಿನ್ನೂ ಒಂಭತ್ತು ವರ್ಷಗಳಾಗಿದ್ದಾಗ ಒಂದು ದಿನ ಅವರು ಇಂಗ್ಲಿಷ್ ಪಾಠಗಳನ್ನು ಓದಿಕೊಳ್ಳಲಿಲ್ಲವೆಂದು ಅವರ ತಂದೆ ಕೋಣೆಯಲ್ಲಿ ಕೂಡಿದ್ದರು. ಹೊರಬಂದಾಗ ಆಕೆ ಪೂರ್ಣರೂಪದ ಬಹುಭಾಷಾ ಪಂಡಿತೆಯೂ ಮತ್ತು ಇಂಗ್ಲಿಷ್ ಹಾಗೂ ಇತರ ಭಾಷೆಗಳಲ್ಲಿ ಅತ್ಯಂತ ಕುತೂಹಲವಿಟ್ಟಿದ್ದ ವಿದ್ಯಾರ್ಥಿನಿಯೂ ಆಗಿದ್ದರಂತೆ. ಈ ವಿಷಯವೂ ಅವರಿಂದಲೇ ತಿಳಿಯಿತೆನ್ನಿ!

ಹುಟ್ಟಿನಿಂದ ಬ್ರಾಹ್ಮಣರಾಗಿದ್ದರೂ ಆಕೆ ಬೆಳೆದ ಊರಿನಲ್ಲಿ ಮುಸಲ್ಮಾನ ಸಂಸ್ಕೃತಿಯು ಎಷ್ಟೋ ವರ್ಷಗಳಿಂದ ಚೆನ್ನಾಗಿ ಏಳಿಗೆ ಹೊಂದಿತ್ತು. ಬಾಲ್ಯದಲ್ಲಿ ಅವರ ಆಟದ ಸಂಗಾತಿಗಳು ಮುಸ್ಲಿಮರಾಗಿದ್ದರು. ಅವರ ಮೊದಲಿನ ಸಹಕಾರಗಳು, ಹೈದರಾಬಾದಿನ ಮಹಮ್ಮದೀಯ ಸ್ತ್ರೀಯರು ಹಾಗೂ ಪುರುಷರೊಂದಿಗಿತ್ತು. ಇವೆಲ್ಲವೂ ಆಕೆಗೆ ಹಿಂದೂಗಳು ಹಾಗೂ ಮುಸ್ಲಿಮರ ನಡುವೆ ನಿಜವಾಗಿ ಯಾವ ವೈಷಮ್ಯವೂ ಇಲ್ಲವೆಂದು ಮನದಟ್ಟು ಮಾಡಿಸಿದ್ದವು. ನಂತರದ ವರ್ಷಗಳಲ್ಲಿ ಆಕೆ ತಮ್ಮನ್ನು ತಾವು ಅರ್ಧ ಹಿಂದೂ, ಅರ್ಧ ಮುಸ್ಲಿಂ ಎಂದು ಹೇಳಿಕೊಳ್ಳುತ್ತಿದ್ದರು. ಆಕೆಯ ಮನಸ್ಸಿನಲ್ಲಿ ಮೊಟ್ಟಮೊದಲಾಗಿ ಆಳವಾಗಿ ತಲೆಯೂರಿದ ಶಬ್ದಗಳು ಎಂದರೆ ಮಸೀದಿಯ ಮೂಸನ್ (ಪ್ರಾರ್ಥನೆಗಾಗಿ ಜನರನ್ನು ಕರೆಯುವ ಶಬ್ದ) ಶಬ್ದವೇ ಆಗಿತ್ತು. ಇವೆಲ್ಲವೂ ಆಕೆಯನ್ನು ಹಿಂದೂ ಮುಸ್ಲಿಮರ ಐಕ್ಯತೆಗೆ ಕೆಲಸ ಮಾಡಲು ಅತ್ಯಂತ ಪ್ರಭಾವ ಬೀರಬಲ್ಲ ವ್ಯಕ್ತಿಗಳಲ್ಲಿ ಒಬ್ಬರನ್ನಾಗಿಸಿದ್ದವು.

ಆಕೆಗಿನ್ನೂ ಹನ್ನೊಂದು ವರ್ಷದವಳಾಗಿದ್ದಾಗ, ಒಂದು ದಿನ ಅವರು ಬೀಜಗಣಿತದ ಒಂದು ಲೆಕ್ಕವನ್ನು ಮಾಡಲು ಹೆಣಗುತ್ತಿದ್ದರು. ಅದಕ್ಕೆ ಉತ್ತರವೂ ಸಿಕ್ಕಲಿಲ್ಲ. ಬದಲಿಗೆ ಒಂದು ಇಡೀ ಕವಿತೆ ಅವರ ಲೇಖನಿಯಿಂದ ಹೊರಬಂತು. "ಆ ದಿನದಿಂದ ನಾನು ಕವಿತಾಯೋಗ್ಯಳಾದೆ", ಎಂದು ಆಕೆ ಹೇಳಿಕೊಂಡರು. ಹನ್ನೆರಡನೆಯ ವಯಸ್ಸಿನಲ್ಲಿ ಮದ್ರಾಸ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್ ಪದ್ಧತಿಯಲ್ಲಿ ಮೊದಲನೆಯ ರ್‍ಯಾಂಕ್ ಪಡೆದು, ಇಡೀ ಭಾರತವನ್ನೇ ಪುಳಕಗೊಳಿಸಿದರು. ಆದರೂ ಆಕೆಗೆ ತನ್ನ ನಿಜವಾದ ಕೆಲಸವು, ಕವಿತೆ ಬರೆಯುವುದೇ ಹೊರತು ಪರೀಕ್ಷೆಗಳಲ್ಲಿ ಉತ್ತೀರ್ಣಳಾಗುವುದಲ್ಲ ಎನ್ನಿಸಿತ್ತು. ಹದಿಮೂರನೆಯ ವಯಸ್ಸಿನಲ್ಲಿ ಆಕೆ, "ಲೇಡಿ ಆಫ್ ದಿ ಲೇಕ್", ಎಂಬ ಸಾವಿರದ ಮುನ್ನೂರು ಸಾಲುಗಳ ಕವಿತೆಯನ್ನು ಕೇವಲ ಆರು ದಿನಗಳಲ್ಲೇ ಬರೆದು ಮುಗಿಸಿದರು. ಮೆಟ್ರಿಕ್ಯುಲೇಷನ್ನಿನ ನಂತರದ ನಾಲ್ಕು ವರ್ಷಗಳಲ್ಲಿ ವ್ಯಾಪಕವಾಗಿ ಓದಿದಾಗ, ಸಾಹಿತ್ಯ ಚರಿತ್ರೆ ಮತ್ತು ವೇದಾಂತಗಳಿಗೆ ಹೆಚ್ಚು ಗಮನವನ್ನು ಇತ್ತರು.

ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಡಾ. ಗೋವಿಂದರಾಜು ನಾಯ್ಡು



ಎಂಬ ಒಬ್ಬ ಅರಮನೆಯ ವೈದ್ಯರು ಉಚ್ಚಕುಲದ ಬ್ರಾಹ್ಮಣರ ಮನೆಯವಳಾಗಿದ್ದ ಆಕೆ ಎಷ್ಟೇ ಒಳ್ಳೆಯ ಸಂಬಂಧವಿದ್ದರೂ ಸಾಂಸ್ಕೃತಿಕರಾಗಿದ್ದರೂ ಬ್ರಾಹ್ಮಣೇತರನಾಗಿದ್ದವನನ್ನು ಮದುವೆ ಆಗಲು ಹೇಗೆ ಸಾಧ್ಯವಿತ್ತೋ? ಆಕೆಯನ್ನು ಉಚ್ಚಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಕಳುಹಿಸಿ ಅವರ ಈ ಪ್ರೇಮಸಂಬಂಧವನ್ನು ಕೊನೆಗಾಣಿಸಲು ನೋಡಿದರು ತಂದೆ.

ಮುಂದಿನ ಮೂರು ವರ್ಷಗಳವರೆಗೆ ಲಂಡನ್ನಿನ ಕಿಂಗ್ಸ್ ಕಾಲೇಜಿನಲ್ಲಿ ಮೊದಲು ವಿದ್ಯಾಭ್ಯಾಸ ಮಾಡಿ ನಂತರ ಕೇಂಬ್ರಿಡ್ಜ್ ಗರ್ಟನ್ ಕಾಲೇಜಿನಲ್ಲಿ ಅದನ್ನೇ ಮುಂದುವರಿಸಿದರು. ಎಡಿನ್‌ಬರೋ ವಿಶ್ವವಿದ್ಯಾಲಯವು ಆಕೆಗೆ ಡಾಕ್ಟರೇಟ್ ಪದವಿಯನ್ನಿತ್ತಿತು. ಇತರ ವಿಶ್ವವಿದ್ಯಾಲಯಗಳು ಆಕೆಯನ್ನು ಸನ್ಮಾನಿಸಿದವು. ಅಲ್ಲಿ ಆಕೆ ಅತ್ಯಂತ ಗಣ್ಯವ್ಯಕ್ತಿಯಾಗಿದ್ದು, ಸಾಹಿತಿಯೂ ಆಗಿದ್ದ ಸರ್ ಎಡ್ಮಂಡ್ ಗಾಸ್ಸೆ ಮತ್ತು ಆರ್ಥರ್ ಸೈಮನ್ಸ್ ಅವರ ಸ್ನೇಹವನ್ನು ಗಳಿಸಿದರು.

ಡಾ. ನಾಯ್ಡು ಅವರೊಂದಿಗೆ ಆಕೆಯ ವಿವಾಹಕ್ಕೆ ತಂದೆಯಿಂದ ಎಷ್ಟೇ ವಿರೋಧವಿದ್ದರೂ ಆಕೆ ಮಾತ್ರ ತಮ್ಮ ಆಯ್ಕೆಯ ಬಗ್ಗೆ ಸ್ಥಿರವಾದ ತೀರ್ಮಾನವನ್ನು, ಎದೆಗಾರಿಕೆಯನ್ನೂ ಹೊಂದಿದ್ದರು. ೧೮೯೮ರಲ್ಲಿ ಆಕೆ ಇಂಗ್ಲೆಂಡಿನಿಂದ ವಾಪಸ್ಸು ಬಂದಾಗ, ಆ ಮದುವೆ ನೆರವೇರಿತು. ಈ ವಿಧವಾಗಿ ಆಕೆ ಅಂತರ್ಜಾತೀಯ ವಿವಾಹದ ಪ್ರಥಮಾನ್ವೇಷಕರಾದರು. ನಂತರವೂ ಇದೇ ರೀತಿಯ ಸ್ಥೈರ್ಯ ಮತ್ತು ನಿರ್ಧಾರಗಳಿಂದ ಅವರು ರಾಜಕೀಯ ಮತ್ತು ಸಾಮಾಜಿಕ ಕಾರಣಗಳಿಗಾಗಿ ಹೋರಾಡಿದರು. ಗಾಂಧೀಜಿ ಅವರ ನೇತೃತ್ವದಲ್ಲಿನ ದೇಶದ ಸ್ವಾತಂತ್ರ್ಯಕ್ಕೋ, ಹಿಂದೂ ಮುಸ್ಲಿಮರ ಐಕ್ಯತೆಗೋ ಅಥವಾ ಸ್ತ್ರೀಯರ ಮೇಲಿನ ಎಲ್ಲಾ ನಿರ್ಬಂಧಗಳಿಂದ ಅವರನ್ನು ಮುಕ್ತರನ್ನಾಗಿಸಲೋ ಅಂತೂ ಹೋರಾಡಿದರು. ಆದ್ದರಿಂದಲೇ ಮಹಾತ್ಮ ಗಾಂಧಿ ಅವರು ಆಕೆಯನ್ನು, "ಇಂದಿನ ಮೀರಾಬಾಯಿ" ಎಂದು ವರ್ಣಿಸಿದ್ದರು. ಮೀರಳಂತೆಯೇ ಆಕೆಯೂ ಎಲ್ಲಾ ಸಾಂಪ್ರದಾಯಿಕ ನಡವಳಿಕೆಗಳ ಗೋಡೆಗಳನ್ನು ಒಡೆದರು ಮತ್ತು ಮೀರ ಹೇಗೆ ಶ್ರೀಕೃಷ್ಣನ ಪಾದಗಳಲ್ಲಿ ತನ್ನ ಜೀವನವನ್ನು ಅರ್ಪಿಸಿದಳೋ ಹಾಗೆ ಸರೋಜಿನಿ ಕೂಡ ಮಾತೃಭೂಮಿಯ ಸೇವೆಗಾಗಿ ತಮ್ಮನ್ನೇ ಅರ್ಪಿಸಿಕೊಂಡರು.

ಅವರ ಮದುವೆಯ ನಂತರದ ಸಮಯ ಅವರು ತಾವಾಗಿ ಹೇಳಿಕೊಂಡಂತೆ ಅವರ ಜೀವನದ ಅತ್ಯುತ್ತಮ ಸಮಯವಾಗಿತ್ತು. ತಮ್ಮ ಮನೆಯನ್ನು ಆಕೆ "ಹರ್ಷದ ಚೇತನ" ಎಂದು ಕರೆದುಕೊಂಡಿದ್ದರು. ನಾಯ್ಡು ದಂಪತಿಗಳಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ಇಬ್ಬರು ಗಂಡುಮಕ್ಕಳು ಇದ್ದರು. ಅವರಲ್ಲಿ ಒಬ್ಬಳಾದ ಪದ್ಮಜನಾಯ್ಡು ಪಶ್ಚಿಮ ಬಂಗಾಳದ ಗವರ್ನರರಾಗಿದ್ದರು.

ಸರೋಜಿನಿ ನಾಯ್ಡು ಅವರದು ಗೋಲ್ಡನ್ ಥ್ರೆಷ್‌ಹೋಲ್ಡ್, ದಿ ಬರ್ಡ್

ಆಫ್ ಟೈಂ, ಮತ್ತು ದಿ ಬ್ರೋಕನ್ ವಿಂಗ್ ಎಂಬ ಮೂರು ಕವಿತೆಗಳ ಪುಸ್ತಕಗಳು ಇದ್ದವು. ಆ ಪುಸ್ತಕಗಳಲ್ಲಿ ಮೊದಲನೆಯದಕ್ಕೆ ಯುವ ಕವಿ ಆರ್ಥರ್ ಸೈಮನ್ಸರು ಕವಯಿತ್ರಿಯ ಬಗ್ಗೆ ಗಮನಾರ್ಹವಾದ ಮುನ್ನುಡಿ ಬರೆದಿದ್ದಾರೆ. ಅದರಲ್ಲಿ ಆಕೆಯ ಆಳವಾದ ಮತ್ತು ನಿರ್ದಿಷ್ಟ ಉದ್ದೇಶದ ಕಣ್ಣುಗಳ ಬಗ್ಗೆ ವರ್ಣಿಸುತ್ತಾ, "ಅವು ಸೌಂದರ್ಯವನ್ನೇ ಹುಡುಕುತ್ತಿವೆಯೋ ಎನ್ನುವಂತಿದೆ," ಎಂದಿದ್ದಾರೆ. ಜೊತೆಗೆ, "ಅವರ ಧ್ವನಿಯು ಸುಮಧುರ ಗಾಯನದಷ್ಟು ಇಂಪಾಗಿದ್ದರೆ, ಮನಸ್ಸು ಸದಾಕಾಲವೂ, ಪ್ರಶಾಂತವೂ ಪ್ರಭಾವಯುಕ್ತವೂ ಆಗಿದ್ದು, ಆಕೆಯ ಕುಶಾಗ್ರಬುದ್ಧಿಯ ವಿನೋದಪ್ರವೃತ್ತಿಯನ್ನು ಪ್ರಕಟಿಸುತ್ತಿದ್ದವು'', ಎಂದೂ ಸೇರಿಸಿದ್ದಾರೆ. ಮರೆಯಲಾಗದಂಥ ಭಾರತೀಯ ಚಿತ್ರಣಗಳನ್ನು ತಮ್ಮ ಕವಿತೆಗಳಲ್ಲಿ ವಿಶದವಾಗಿ, ತಮ್ಮ ಲೇಖನಿಯ ಮೂಲಕ ಚಿತ್ರವತ್ತಾಗಿ ಮೂಡಿಸಿರುವುದಂತೂ ಎಂದರೆ 'ಬೆಲ್ಸ್' ಎಂಬ ಒಂದು ಚಿಕ್ಕ ಕವಿತೆಯಲ್ಲಿ, ದೇಶದ ಆತ್ಮವನ್ನೇ ಬಿಚ್ಚಿಟ್ಟಿರುವುದಂತೂ, ಆ ಪದ್ಯಗಳ ಛಂದೋಗತಿ ಮತ್ತು ಹಿತವಾದ ಏರಿಳಿತಗಳಷ್ಟೇ, ಆಕರ್ಷಕವಾಗಿವೆ. ನೆನಪಿಡಲೇಬೇಕಾದಂಥ ಇತರ ಕವಿತೆಗಳು, ''ಬ್ಯಾಂಗಲ್ ಸೆಲ್ಲರ್ಸ್'', "ಕೋರೊಮಂಡಲ್ ಫಿಷರ್ಸ್" "ದಿ ಪಾಲನ್‌ಕ್ವಿನ್ ಬೇರರ್ಸ್", "ಗಾರ್‌ಡಾನ್", "ದಿ ಡಾನ್ಸ್ ಆಫ್ ಲೌವ್" ಆಗಿದ್ದರೆ, ಇವೆಲ್ಲಕ್ಕಿಂತಲೂ ಹೆಚ್ಚಾಗಿ ಅವರ ಪ್ರಶಂಸಾರ್ಹವಾದ, "ಟು ದಿ ಬುದ್ಧ ಸೀಟೆಡ್ ಆನ್ ಎ ಲೋಟಸ್" ಎಂಬ ಮನರಂಜನೆಯ ಕಾರ್ಯಕ್ರಮವಂತೂ, ಆಕೆ ಇನ್ನೆಂಥಾ ಹಿರಿಮೆಯ ಮತ್ತು ಅಸಾಮಾನ್ಯ ಕವಯಿತ್ರಿ ಆಗಿದ್ದರು ಎಂಬುದನ್ನು ತೋರಿಸುತ್ತದೆ.

ಆಕೆಯ ಗಮನ ಸದಾಕಾಲಕ್ಕೂ, ಜೀವನದ ಹಾಸ್ಯದ ಕಡೆಗೆ ಶೀಘ್ರವಾಗಿ ಹರಿಯುತ್ತಿತ್ತು. ಅವುಗಳ ಬಗ್ಗೆ ತೊಂದರೆಯೇ ಇಲ್ಲದೆ, ಧಾರಾಳವಾಗಿ ನಕ್ಕುಬಿಡುತ್ತಿದ್ದರು. ಆಕೆ, ಕಾನ್ಫರೆನ್ಸಿನಲ್ಲೋ, ಕಡೆಗೆ ಜೈಲಿನಲ್ಲೋ, ಎಲ್ಲೇ ಇದ್ದರೂ, ಲವಲವಿಕೆಯ ಹಾಸ್ಯದ ಚಿಲುಮೆಯೇ ಆಗಿದ್ದರು. "ನನ್ನ ಜೀವನ ಅಥವಾ ಬಹುಶಃ ನನ್ನ ಮಾನಸಿಕ ಪ್ರವೃತ್ತಿಯು ಜೀವನದಲ್ಲಿ ನೀಡಿರುವ, ಎಲ್ಲಾ ವಿಷಯಗಳಲ್ಲಿ ನನ್ನ ನಗೆಯ ಸಹಜ ಪ್ರತಿಭೆಯು ಬೆಲೆ ಕಟ್ಟಲಾಗದ್ದು ಎಂದು ನಾನೇ ಬಹುವಾಗಿ ಮೆಚ್ಚಿಕೊಳ್ಳುತ್ತೇನೆ" ಎಂದಿದ್ದಾರೆ. ಮಹಾತ್ಮಾ ಗಾಂಧೀಜಿ, ಚಿಯಾಂಗ್ ಕೈಶೇಕ್‌ರನ್ನು ಭೇಟಿಯಾದಾಗಲಂತೂ ಆಕೆ, "ಆ ಭೇಟಿಯು, ಮಿಕ್ಕಿಮೌಸ್ ಮತ್ತು ಡೊನಾಲ್ಡ್ ಡಕ್ ಎರಡೂ, ಪರಸ್ಪರ ಚರ್ಚೆಮಾಡುತ್ತಿರುವಂತಿದೆ" ಎಂದು ಹೋಲಿಸಿದ್ದರು.

೧೯೧೪ರಿಂದ ೧೯೧೮ರವರೆಗೆ ದೇಶದಲ್ಲಿ ಎಲ್ಲೆಲ್ಲೂ ಸ್ವಾತಂತ್ರ್ಯಕ್ಕಾಗಿ ಆಕ್ರಂದನವಿದ್ದಾಗ ಆಕೆ ಸ್ವಾತಂತ್ರ್ಯದ ಬಾವುಟಕ್ಕಾಗಿ ತಮ್ಮ ಭಕ್ತಿಯುಕ್ತ ಸೇವೆಯನ್ನು ಮುಡಿಪಾಗಿಟ್ಟು ತಮ್ಮ ಗಾನದ ಆನಂದ ಪರವಶತೆಯನ್ನು ತ್ಯಜಿಸಿದರು. ಸುಮಾರು ೧೯೬೩ನೆಯ ಇಸವಿಯಲ್ಲಿ ಪ್ರೊ. ರಾಜೇಂದ್ರಪ್ರಸಾದರು, ಆಕೆಯ ಚಿತ್ರವನ್ನು



ಪಾರ್ಲಿಮೆಂಟಿನ ಮಧ್ಯಸಭಾಂಗಣದಲ್ಲಿ ಅನಾವರಣಗೊಳಿಸಿದಾಗ, ಅವರು, ೧೯೦೬ರಲ್ಲಿ ಕಲ್ಕತ್ತಾದಲ್ಲಿ ತಾವು ಕೇಳಿದ್ದ ಆಕೆಯ ಭಾಷಣವನ್ನು ಸ್ಮರಿಸಿಕೊಂಡು ತಮ್ಮ ಮನಸ್ಸಿನ ಮೇಲೆ ಅದರಿಂದಾಗಿದ್ದ ತೊಡೆಯಲಾಗದಿದ್ದ ಪ್ರಭಾವವನ್ನು ಸತ್ಯವೆಂದು ಪ್ರಮಾಣೀಕರಿಸಿದರು. ಮೊದಲನೆಯ ಸಲ ಆಕೆಯ ಭಾಷಣವನ್ನು ಕೇಳಿದ್ದುದನ್ನು ನೆನೆಸಿಕೊಂಡ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು, ತಾವು ಆಕೆಯ ಭಾಷಣಕ್ಕೆ ಮಾರುಹೋಗಿದ್ದರೆಂದೂ ಮತ್ತು ತಮ್ಮ ಮನಸ್ಸಿನ ಮೇಲೆ ಆಳವಾದ ಹಾಗೂ ಶಾಶ್ವತವಾದ ಭಾವನೆಯನ್ನು ಮೂಡಿಸಿದ್ದ ಕೆಲವೇ ಭಾಷಣಗಳಲ್ಲಿ ಆಕೆಯದೂ ಒಂದಾಗಿತ್ತೆಂದೂ ಹೇಳಿದರು. ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ, ದೇಶದಾದ್ಯಂತ ಎಲ್ಲರೂ ಆಕೆಯ ಭಾಷಣಕ್ಕೆ ಮರುಳಾದವರಂತೆ ಕುಳಿತಿರುತ್ತಿದ್ದರು. ಆಕೆ ಮಹಾತ್ಮ ಗಾಂಧಿ ಅವರ ಪಕ್ಕದಲ್ಲೇ ನಿಂತಿದ್ದು, ಹೋರಾಡಿ ಎಲ್ಲಾ ಅಸಹಕಾರ ಚಟುವಟಿಕೆಗಳಲ್ಲಿ ಮತ್ತು ಸತ್ಯಾಗ್ರಹದ ಚಳವಳಿಗಳಲ್ಲಿ ಭಾಗವಹಿಸಿದ್ದರು. ಅವರನ್ನೂ ಸಾಕಷ್ಟು ಬಾರಿ ಜೈಲಿನಲ್ಲಿ ಬಂಧಿಸಿಟ್ಟಿದ್ದರು.

೧೯೧೯ರಲ್ಲಿ ನಡೆದ ಜಲಿಯನ್‌ವಾಲಾಬಾಗ್‌ನ ಗುಂಡು ಹೊಡೆದಾಟದ ನಂತರ, ಆಕೆ ಹೃದಯ ಸಂಬಂಧದ ತೊಂದರೆಗೊಳಗಾದರು ಮತ್ತು ಗಾಳಿಯ ಬದಲಾವಣೆಗೆ ಎಂದು ಇಂಗ್ಲೆಂಡಿಗೆ ಹೋದರು. ಆದರೂ ಆಕೆ ಜನರಲ್ ಡೈಯರ್‌ನ ಪಾತಕವನ್ನು ಯಥಾರ್ಥವಾಗಿ ಬಹಿರಂಗಗೊಳಿಸದೆ ಬಿಡಲಿಲ್ಲ. ೧೯೨೪ರಲ್ಲಿ ಆಕೆ ಪೂರ್ವ ಹಾಗೂ ದಕ್ಷಿಣ ಆಫ್ರಿಕಗಳಲ್ಲಿ ಸುತ್ತಾಡಿ, ಅಲ್ಲಿದ್ದ ನಮ್ಮ ದೇಶದವರ ಸ್ಥಿತಿಗಳನ್ನು ಸಾಧ್ಯವಾದಷ್ಟು ಹಗುರವಾಗಿಸಲೆಂದು ಪ್ರಯತ್ನಿಸಿದರು. ೧೯೨೫ರಲ್ಲಿ ಕಾನ್ಪುರದಲ್ಲಿ ಕಾಂಗ್ರೆಸ್ ಅಧ್ಯಕ್ಷೆಯಾಗಿ ಹಾಗೆ ಚುನಾಯಿತರಾದವರಲ್ಲಿ ಮೊದಲನೆಯ ಭಾರತೀಯ ಮಹಿಳೆ ಎನ್ನಿಸಿಕೊಂಡರು. ಶ್ರೀ ಪಟ್ಟಾಭಿ ಸೀತಾರಾಮಯ್ಯ ಅವರು "ದಿ ಹಿಸ್ಟರಿ ಆಫ್ ದಿ ಕಾಂಗ್ರೆಸ್" ಎಂಬ ಅವರ ಪುಸ್ತಕದಲ್ಲಿ "ಆಕೆಯ ಅಧ್ಯಕ್ಷ ಭಾಷಣ ಎಲ್ಲಾ ಕಾಲಕ್ಕೂ ಅತ್ಯಂತ ಮಿತವಾಗಿಯೂ, ಉತ್ತಮವಾಗಿಯೂ ಇತ್ತು" ಎಂದು ಬರೆದಿದ್ದಾರೆ. ಸುಮಾರು ವರ್ಷಗಳ ಕಾಲ ಆಕೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮುಖ್ಯ ಸದಸ್ಯೆಯಾಗಿದ್ದರು. ೧೯೨೮ರಲ್ಲಿ ಭಾರತ ದೇಶವು, ಅವರನ್ನು ಮಿಸ್ ಮೇಯೋ ಎಂಬುವವರ "ಮದರ್ ಇಂಡಿಯಾ"ದಿಂದ ಉಂಟಾಗಿದ್ದ ಕೆಟ್ಟ ಭಾವನೆಯನ್ನು ತಿದ್ದಿಸಲು ಅಮೆರಿಕಕ್ಕೆ ಕಳುಹಿಸಿತು.

ಮಿಸ್ ಮೇಯೋ ಮಾಡಿದ್ದ ಅನಾಹುತವನ್ನು ಸರೋಜಿನಿನಾಯ್ಡು ಅವರು ತಮ್ಮ ನಡತೆಯ ಆಕರ್ಷಣೆಯಿಂದ ಹಾಗೂ ಉತ್ತಮ ವಾಕ್ಪಟುತ್ವದಿಂದ, ಪೂರ್ಣವಾಗಿ ನಿಷ್ಫಲಗೊಳಿಸಿದರು. ಅಮೆರಿಕನ್ನರು ನಮ್ಮ ಬಗ್ಗೆ, ನಮ್ಮ ಸ್ವಾತಂತ್ರ್ಯದ ಹೋರಾಟದ ಬಗ್ಗೆಯ ಸತ್ಯವನ್ನು ಅರಿತುಕೊಂಡರು. ೧೯೩೦ನೇ ಇಸವಿಯಲ್ಲಿ, ದಂಡಿಯಲ್ಲಿ ಮಹಾತ್ಮ ಗಾಂಧೀಜಿ ಅವರು ದಸ್ತಗಿರಿಯಾದಾಗ, ಆಕೆ ಇಪ್ಪತ್ತೈದು ಸಾವಿರ ಮಂದಿ

ಸ್ವಯಂಸೇವಕರನ್ನು ಧರಾಶನ ಸಾಲ್ಟ್‌ವರ್ಕ್ಸ್‌ಗೆ ಕರೆದೊಯ್ದು, ತಮ್ಮ ಧೈರ್ಯ ಹಾಗೂ ಎಚ್ಚರಿಕೆಗಳಿಂದ, ಸಾಲ್ಟ್‌ವರ್ಕ್ಸ್‌ನ ಮೇಲೆ ದಾಳಿ ನಡೆಸಿದಾಗ, ಅಲ್ಲಿನ ಪೊಲೀಸ್ ಆಫೀಸರರು ನಿರ್ದಯೆಯಿಂದ ಅವರ ಮೇಲೆ ಅಧಿಕಾರ ದಂಡಗಳನ್ನೂ ಮತ್ತು ತುಪಾಕಿಗಳ ಹಿಂದಿನ ಕೊನೆಗಳಿಂದಲೂ ನಿರ್ಭಯವಾಗಿ ನಡೆಸುತ್ತಿದ್ದ ದಾಳಿಗಳನ್ನೂ ಶಾಂತರಾಗಿಂಯೇ ಎದುರಿಸಿ, ಪ್ರಪಂಚವನ್ನೇ ರೋಮಾಂಚನಗೊಳಿಸಿದರು. ಆಕೆ ದಸ್ತಗಿರಿಯಾದರು. ೧೯೩೧ರಲ್ಲಿ ಭಾರತೀಯ ಮಹಿಳಾ ಪ್ರತಿನಿಧಿಯಾಗಿ, ಲಂಡನ್ನಿನಲ್ಲಿ ನಡೆದ ರೌಂಡ್ ಟೇಬಲ್ ಕಾನ್ಫರೆನ್ಸಿಗೆ, ಆಕೆ ಹೋದರು. ೧೯೪೨ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಮಹಾತ್ಮ ಗಾಂಧೀಜಿ ಅವರೊಂದಿಗೆ ಆಕೆಯನ್ನು ಬಂಧಿಸಿ, ಆಗಾಖಾನ್‌ಪ್ಯಾಲೇಸಿನ ಯರವಾಡ ಬಂದೀಖಾನೆಯಲ್ಲಿಟ್ಟರು.

೧೯೪೭ನೆ ಇಸವಿಯ ಆಗಸ್ಟ್ ಹದಿನೈದನೆಯ ತಾರೀಖಿನಂದು ಭಾರತಕ್ಕೆ ಸ್ವಾತಂತ್ರ್ಯ ದೊರಕಿದಾಗ, ಸರೋಜನಿ ಉತ್ತರ ಪ್ರದೇಶದ ಗೌವರ್ನರ್ ಆಗಿ ನಿಯಮಿತರಾದರು. ಅದರ ಬಗ್ಗೆ ಆಕೆಗೆ ಸಮಾಧಾನವಿರಲಿಲ್ಲ. ಆದರೂ ಆಕೆಯೇ ಅತ್ಯಂತ ಜನಾದರಣೀಯ ಗೌವರ್ನರ್ ಆಗಿ ಶೋಭಿಸಿದರು. ೧೯೪೯ರ ಫೆಬ್ರವರಿ ತಿಂಗಳಿನಲ್ಲಿ ಆಕೆ ಕಾಯಿಲೆ ಬಿದ್ದು, ಮಾರ್ಚ್ ಮೂರರಂದು ದೇಹವನ್ನು ತ್ಯಜಿಸಿದರು. ಇಡೀ ರಾಷ್ಟ್ರವು ದುಃಖಸಂತಪ್ತವಾಯಿತು.

ಎಷ್ಟೋ ಕ್ಷೇತ್ರಗಳಲ್ಲಿ ಅಪರೂಪದ ವಿಶೇಷ ಮನ್ನಣೆಗಳನ್ನು ಪಡೆದದ್ದರೊಂದಿಗೆ, ಅಪಾರ ಭಕ್ತಿಯಿಂದ ಚೆನ್ನಾಗಿ ತನಗೆ ಸೇವೆ ಮಾಡಿದ್ದಂಥ ಉತ್ತಮ ಪುತ್ರಿಯನ್ನು ಆಕೆಯ ಮರಣದಿಂದ ಭಾರತವು ಕಳೆದುಕೊಂಡಿತು.

* * * *